
ಸಹಜಮಾರ್ಗಾನುಸಾರ

# ರಾಜಯೋಗದ ಪ್ರಭಾವ

ಶ್ರೀ ರಾಮಚಂದ್ರ



# ಒಂದು ಮಾತು

(ಇಂಗ್ಲಿಷ್ ಮೂಲದಿಂದ)

ಈ ಪುಸ್ತಕವು ಪ್ರಜ್ಞಾನದ ಸ್ಥಿತಿಯಲ್ಲಿ ಬರೆಯಲಾಗಿದೆ. ಇದರಲ್ಲಿ ವಿವರಿಸಲಾದ ಸಂಗತಿಗಳು ಕೇವಲ ದಿವ್ಯಾನುಭವ ಅಥವಾ ದಿವ್ಯದೃಷ್ಟಿಯನ್ನ ವಲಂಬಿಸಿವೆ. ಓದುಗರು ಆಯಾ ಸ್ಥಿತಿಗಳನ್ನು ಪ್ರತ್ಯಕ್ಷವಾಗಿ ಹೊಂದಿದಾಗಲೇ ಅವುಗಳ ವಾಸ್ತವಿಕತೆಯನ್ನು ಚೆನ್ನಾಗಿ ಮನಗಾಣುವರು. ಪುಸ್ತಕದಲ್ಲಿ ಉಲ್ಲೇಖಿಸಲಾದಂತೆ, (ನಿಸರ್ಗದಲ್ಲಿ) ಬದಲಾವಣೆಗಾಗಿ ಕೆಲಸ ಮಾಡುತ್ತಿರುವ ವಿಭೂತಿಯು ಉತ್ತರ ಭಾರತದಲ್ಲಿ ಒಂದು ಕಡೆಗೆ ವಾಸಿಸುತ್ತಿದ್ದು ಅದಕ್ಕಾಗಿ ಉತ್ಕಂಟೆಯಿಂದ ಧ್ಯಾನ ಮಾಡುವವರಿಗಾಗಲಿ ಅವರೊಂದಿಗೆ ಯೌಗಿಕ ಸಂಪರ್ಕ ಪಡೆಯುವವರಿಗಾಗಲಿ ಅವನ ಸುಳುವು ದೊರೆಯುವುದು.

ಈ ಪುಸ್ತಕವು ೧೯೪೭ನೆಯ ಇಸ್ವಿಯ ಮಾರ್ಚ್ ತಿಂಗಳ ೩೧ರ ಸಮಯಕ್ಕೆ ಪೂರ್ಣವಾಗಿದ್ದಿತು. ಆದರೆ ಕಾಗದದ ಕೊರತೆ ಹಾಗೂ ಮುದ್ರಣದ ತೊಂದರೆಗಳಿಂದಾಗಿ ನಾವೆಷ್ಟು ಪ್ರಯತ್ನಪಟ್ಟರೂ ಇದು ತೀವ್ರ ಪ್ರಕಾಶನಗೊಳ್ಳಲಿಲ್ಲ. ಇದಕ್ಕಾಗಿ ನಾವು ಹಾರ್ದಿಕವಾಗಿ ವಾಚಕರ ಕ್ಷಮೆ ಬೇಡುತ್ತೇವೆ. ಪುಸ್ತಕದ ಕೊನೆಗೆ, ಇದರಲ್ಲಿ ಬರುವ ಸಂಸ್ಕೃತ ಶಬ್ದಗಳ ಅರ್ಥವನ್ನು ಅನುಬಂಧದಲ್ಲಿ ಕೊಡಲಾಗಿದೆ. *

— ಪ್ರಕಾಶಕರು

* ಕನ್ನಡ ಅನುವಾದದಲ್ಲಿ ಅನುಬಂಧದ ಅಗತ್ಯವು ಕಂಡುಬರಲಿಲ್ಲವಾದುದರಿಂದ ಅದನ್ನು ಬಿಟ್ಟುಕೊಡಲಾಗಿದೆ.

# ಪ್ರಸ್ತಾವನೆ

(ಇಂಗ್ಲಿಷ್ ಮೂಲದಿಂದ)

ಭಾರತವು ಆಧ್ಯಾತ್ಮದ ನೆಲೆವೀಡಾಗಿದೆ. ಅನೇಕಾನೇಕ ಮಹರ್ಷಿಗಳೂ ಆಚಾರ್ಯರೂ ತಮ್ಮ ಜೀವನವನ್ನು ಇದಕ್ಕಾಗಿಯೇ ಮುಡುಪಾಗಿಟ್ಟು ದೇವರ ಸಾಕ್ಷಾತ್ಕಾರ ಹೊಂದಿ ಪರಿಪೂರ್ಣತೆಯ ಶಿಖರವನ್ನು ತಲುಪಿದ್ದಾರೆ. ಅಜ್ಞಾನದ ಅಂಧಕಾರವನ್ನು ತೊಲಗಿಸಿ ಜನತೆಯಲ್ಲಿ ಜ್ಞಾನದ ಬೆಳಕನ್ನು ಬೀರಿದ ಮಹಾವಿಭೂತಿಗಳಲ್ಲಿ ಮಹಾತ್ಮಾ ಬುದ್ಧ, ಚೈತನ್ಯ ಮಹಾಪ್ರಭುಗಳು, ಸ್ವಾಮಿ ವಿವೇಕಾನಂದರು ಹಾಗೂ ಫತೆಹ್‌ಗಡದ ಸಮರ್ಥ ಗುರು ಮಹಾತ್ಮಾ ರಾಮಚಂದ್ರಜಿ ಮಹಾರಾಜರು ಹಲವು ಉದಾಹರಣೆಗಳು. ನಿಜವಾದ ಯೋಗಿಯು ಪೂರ್ಣತ್ವದ ಅತ್ಯುನ್ನತ ಮಟ್ಟದಲ್ಲಿ ಭಗವಂತನೊಂದಿಗೆ ಸಾಮರಸ್ಯವನ್ನು ಪಡೆದು ಈಶತ್ವವನ್ನು ಹೊಂದಿರುತ್ತಾನೆ. ಭಗವತ್ ಸಾಕ್ಷಾತ್ಕಾರವು ಜಗತ್ತಿನೆದುರು ಯಾವಾಗಲೂ ಅತ್ಯಂತ ಜಟಿಲ ಸಮಸ್ಯೆಯಾಗಿ ನಿಂತಿದೆ. ಋಷಿಗಳು ತಮ್ಮ ಸಿದ್ಧಿ-ಸಾಮರ್ಥ್ಯಗಳಿಗನುಸಾರವಾಗಿ ನಾನಾ ರೀತಿಗಳಲ್ಲಿ ಈ ಸಮಸ್ಯೆಯನ್ನು ಬಿಡಿಸಲು ಯತ್ನಿಸಿದ್ದಾರೆ. ಅದರ ಪರಿಣಾಮವಾಗಿ ಜಗತ್ತಿನಲ್ಲಿ ಬೇರೆ ಬೇರೆ ಧರ್ಮಗಳು ಹುಟ್ಟಿಕೊಂಡಿವೆ. ಅಧ್ಯಾತ್ಮದಲ್ಲಿ ಸ್ವತಃ ಉಚ್ಚ ಮಟ್ಟವನ್ನು ಮುಟ್ಟಿದ ಋಷಿಗಳಿಂದ ಅವೆಲ್ಲವೂ ಪ್ರವರ್ತಿತವಾಗಿವೆ. ಅವರು ಸ್ವಾನುಭವದ ಮಟ್ಟಿಗೆ ಜನತೆಯ ಯೋಗ್ಯತಾನುಸಾರವಾಗಿ ಜನರಿಗೆ ಮಾರ್ಗದರ್ಶನ ಮಾಡಿದರು. ಅಜ್ಞ ಜನರಿಗೆ ಬುದ್ಧಿಯ ಬೆಳಕನ್ನು ನೀಡಿ ಅವರನ್ನು ಸನ್ಮಾರ್ಗದಲ್ಲಿ ತೊಡಗಿಸಲು ಶಕ್ಯವಿದ್ದಷ್ಟು ಪ್ರಯತ್ನಪಟ್ಟರು. ಆದರೆ ದುರ್ದೈವದಿಂದ ಜನರು ಪ್ರಾಯಶಃ ಅವರ ಉಪದೇಶದ ಅಂತಸ್ಸಾರವನ್ನು ಗ್ರಹಿಸದೆ, ಹೆಚ್ಚಾಗಿ ಬಾಹ್ಯರೂಪವನ್ನು ಗ್ರಹಿಸಿದರು. ಇದರ ಮುಖ್ಯ ಕಾರಣವೆಂದರೆ, ಸಾಮಾನ್ಯವಾಗಿ ಜನರು – ಕೆಲವರು ಬುದ್ಧಿವಂತರನ್ನು ಬಿಟ್ಟು – ತಮ್ಮ ಅಭ್ಯುದಯಕ್ಕಾಗಿ ಸ್ವತಃ ಪ್ರಯತ್ನಿಸಿ ಸ್ವಾನುಭವ ಗಳಿಸದೆ ಅನ್ಯರ ಅನುಭವವನ್ನೇ ಅವಲಂಬಿಸಿದರು. ಉನ್ನತ ಹಂತಗಳಿಗೇರಿ

ಭಗವಂತನನ್ನು ತಾವು ವೈಯಕ್ತಿಕವಾಗಿ ಸಾಕ್ಷಾತ್ಕರಿಸಿಕೊಳ್ಳಲು ಯಾವ ಪ್ರಯತ್ನವನ್ನು ಅವರು ಮಾಡಲಿಲ್ಲ. ನಿಜವಾಗಿಯೂ ಈ ಕ್ಷೇತ್ರದಲ್ಲಿ ನಮಗೆ ಪರಾನುಭವವು ಅಷ್ಟು ಪ್ರಯೋಜನಕಾರಿಯಾಗುವುದಿಲ್ಲ. ನಾವು ಸ್ವತಃ ಅನುಭವ ಹೊಂದಿ ಸಾಕ್ಷಾತ್ಕಾರ ಪಡೆಯದ ಹೊರತು ನಿಜವಾಗಿ ಯಾವ ಲಾಭವನ್ನೂ ಹೊಂದಿರುವೆವೆಂದು ಹೇಳಲಾಗದು. ಈ ರೀತಿ, ಆ ಪ್ರಾಚೀನ ಮಹರ್ಷಿಗಳ ಉಪದೇಶದ ಮೂಲೋದ್ದೇಶವು ಕಡೆಗಣಿಸಲ್ಪಟ್ಟು ಕ್ರಮೇಣ ಮರೆಯಾಗುತ್ತ ಬಂದು ಅದರ ಸಾಧನಾಂಗವು ಪೂರ್ಣ ಲುಪ್ತವಾಯಿತು. ನಾವು ನಿಜವಾದ ಅಂತಸ್ಸತ್ತ್ವವನ್ನು ಕಳೆದುಕೊಂಡು ಬಾಹ್ಯವಿಧಿಯಲ್ಲಿಯೇ ಸಿಕ್ಕಿಬಿದ್ದೆವು. ಇದೇ ನಮ್ಮನ್ನು ಭ್ರಮೆಗೊಳಿಸಿ ಅಧಃಪತನದ ಹಾಗೂ ಸರ್ವನಾಶದ ಕಗ್ಗತ್ತಲೆಯಲ್ಲಿ ನೂಕಿತು. ಸ್ವಾರ್ಥಪರ ಉದ್ದೇಶಗಳು ತಲೆಯೆತ್ತಿದವು. ಕಾಲ ಕಳೆದಂತೆಲ್ಲ ಇಂಥ ಕೆಡಕುಗಳು ಬೆಳೆಯುತ್ತ ಹೋಗಿ ಕೊನೆಗೆ ಎಲ್ಲ ಕಡೆಗೂ ಪಾಪದ ಹಾಗೂ ಪತನದ ವಾತಾವರಣವನ್ನು ನಿರ್ಮಿಸಿರುವವು. ಕತ್ತಲೆಯ ಕಾರ್ಮೋಡಗಳು ಸುತ್ತಲೂ ವ್ಯಾಪಿಸಿಬಿಟ್ಟಿವೆ. ಪರಿವರ್ತನವು ಅನಿವಾರ್ಯವಾಗಿದೆ. ಸಮರ್ಥವಾದ ದೈವೀಶಕ್ತಿಗೆ ಇದನ್ನು ಸರಿಪಡಿಸಲು ಅಥವಾ ಸಂಹರಿಸಲು ಸಾಧ್ಯವಿದೆ. ಜಗತ್ತು ಆ ಕಡೆಗೇ ಭರದಿಂದ ಸಾಗುತ್ತಿರುವುದರ ಚಿಹ್ನೆಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ.

ಜನರಿಗೆ ಆಧ್ಯಾತ್ಮಿಕ ತರಬೇತಿಯನ್ನು ಕೊಟ್ಟು ಅವರನ್ನು ಉಚ್ಚ ಮಟ್ಟಕ್ಕೆ ತರಬೇಕೆಂಬುದೇ ಇದುವರೆಗಿನ ಎಲ್ಲ ಗುರುಗಳ ಪ್ರಯತ್ನವಾಗಿದೆ. ತಮ್ಮ ಜೀವಮಾನವೆಲ್ಲ ಅವರು ಇದಕ್ಕಾಗಿಯೇ ನಿರ್ವಂಚನೆಯಿಂದ ದುಡಿದರು. ಅವರೆಲ್ಲರೂ ಮಾನವನಲ್ಲಿ ಪ್ರಧಾನವಾಗಿದ್ದ ಚಿತ್ ಶಕ್ತಿಯನ್ನು ಇದಕ್ಕಾಗಿ ಒಂದಿಲ್ಲೊಂದು ರೀತಿಯಲ್ಲಿ ಬಳಸಿದುದು ಗಮನಾರ್ಹ ವಾಗಿದೆ. ಇಂತು ಎಲ್ಲರೂ ಒಂದು ವಿಧವಾಗಿ ರಾಜಯೋಗದ ಮೂಲತತ್ವವನ್ನು ಆಶ್ರಯಿಸಿದುದು ಕಂಡುಬರುತ್ತದೆ. ರಾಜಯೋಗವು ನಿಜವಾಗಿಯೂ ಒಂದು ಮತ–ಧರ್ಮವಲ್ಲ. ಅದೊಂದು ಶಾಸ್ತ್ರ. ಭಗವಂತ ನೊಂದಿಗೆ ತಾದಾತ್ಮ್ಯ ಹೊಂದಬೇಕಾದರೆ ಹೇಗೆ ಮುಂದುವರಿಯಬೇಕು ಎಂಬುದನ್ನು ಅದು ತಿಳಿಸಿಕೊಡುತ್ತದೆ. ಚಿತ್‌ಶಕ್ತಿಯೇ ಅದರ ಮುಖ್ಯ ತತ್ವ.

ಅದು ಅತ್ಯಂತ ಪರಿಣಾಮಕಾರಿ ಪದ್ಧತಿಯಾಗಿದ್ದು ಅಷ್ಟೇ ಸರಳವೂ ಆಗಿದೆ. ದೇವರು ಸುಲಭನಾಗಿದ್ದು ಋಜುಮಾರ್ಗದಿಂದ ದೊರೆಯಬಲ್ಲನು. ಹೀಗೆ ರಾಜಯೋಗ ಶಾಸ್ತ್ರವು, ಅದರ ಮೂಲ ರೂಪದಲ್ಲಿ ತಗೆದುಕೊಂಡುದಾದರೆ, ತೀರ ಸುಲಭವಾಗಿದೆ. ಈ ಪದ್ಧತಿಯಲ್ಲಿ ಮಾರ್ಗದರ್ಶಕನು ಪ್ರಾಣಾಹುತಿಯ ಮೂಲಕ ತರಬೇತಿಯನ್ನು ಕೊಡುವನು. ಕಾಲ ಪರಿಸ್ಥಿತಿ ಹಾಗೂ ಜನತೆಯ ಯೋಗ್ಯತೆಗನುಸಾರವಾಗಿ ಋಷಿಗಳು ಇದರಲ್ಲಿ ಅನೇಕ ಬದಲಾವಣೆಗಳನ್ನೂ ಸುಧಾರಣೆಗಳನ್ನೂ ಮಾಡಿದ್ದಾರೆ. ಇದನ್ನು ತಿಳಿಸುವದಕ್ಕಾಗಿ ಈ ವಿಷಯದ ಮೇಲೆ ವಿಸ್ತೃತವಾದ ಭಾಷ್ಯಗಳನ್ನು ಬರೆದಿದ್ದಾರೆ. ಆದರೆ ದುರ್ದೈವದಿಂದ ಅವೆಲ್ಲವೂ ವಿಷಯವನ್ನು ಮತ್ತಷ್ಟು ಜಟಿಲಗೊಳಿಸಿವೆ. ದೊಡ್ಡ ದೊಡ್ಡ ತತ್ವಜ್ಞಾನಿಗಳೂ ವಿದ್ವಾಂಸರೂ ಬರೆದ ಭಾಷ್ಯಗಳು ಹಾಗೂ ವಿವರಣೆಗಳು ನಿಜವಾದ ಉದ್ದೇಶವನ್ನು ಈಡೇರಿಸಲಾರವು. ಅದು ಅತೀಂದ್ರಿಯ ವಿಷಯ ವಾಗಿದ್ದು ಶಬ್ದಗಳಿಂದ ಅಭಿವ್ಯಕ್ತವಾಗಲಾರದು. ಆಧ್ಯಾತ್ಮ ಮಾರ್ಗದಲ್ಲಿ ಮನುಷ್ಯನು ಅನುಭವಿಸುವ ನಾನಾ ಬಗೆಯ ಮಾನಸಿಕ ಅವಸ್ಥೆಗಳನ್ನು ಯಾವ ಶಬ್ದಗಳೂ ಬಣ್ಣಿಸಲಾರವು. ಅದನ್ನು ಕೇವಲ ಅನುಭವಿಸಿಯಾಗಲೀ ಸಾಕ್ಷಾತ್ಕರಿಸಿಕೊಂಡಾಗಲಿ ತಿಳಿಯಬೇಕು. ಮುಂದೆ ಹೋದಂತೆ ಅಭಿವ್ಯಕ್ತಿಯು ಸಂಪೂರ್ಣವಾಗಿ ಕುಂಠಿತವಾಗುವುದು. ಓದುವದರಿಂದ ನೀವು ಜ್ಞಾನ ಸಂಪಾದನೆ ಮಾಡಿ ಯೋಗಶಾಸ್ತ್ರದ ಪ್ರಾಧ್ಯಾಪಕರಾಗಬಲ್ಲಿರಿ. ವಾದದಲ್ಲಿ ಸಿದ್ಧಾಂತಗಳನ್ನು ಪ್ರತಿಪಾದಿಸಿ ಗೆಲ್ಲಬಹುದು. ಆದರೆ ಅದರಿಂದ ನಿಮಗೇನು ಪ್ರಯೋಜನ? ಅದು ಅನುಭವವೇದ್ಯ ವಿಷಯವಾಗಿದ್ದು ಪ್ರತ್ಯಕ್ಷ ಸಾಧನೆ ಯನ್ನು ಕೈಕೊಂಡಾಗಲೇ ಅದರಲ್ಲಿ ವರ್ಣಿಸಲಾದ ಸ್ಥಿತಿಗಳನ್ನು ಅನುಭವಿಸ ಬಹುದು. ಹೀಗೆ ಜನಸಾಮಾನ್ಯರು ಅದನ್ನು ತಮ್ಮ ಶಕ್ತಿ ಯೋಗ್ಯತೆಗಳಿಗೆ ಮೀರಿದ ವಸ್ತುವೆಂದೂ ಗೃಹಸ್ಥಜೀವನದಲ್ಲಿ ಪಡೆಯಲು ಶಕ್ಯವೆಂದೂ ಭಾವಿಸ ತೊಡಗಿದರು. ಅವರ ಪಾಲಿಗದು ಗುಪ್ತಧನದಂತಾಗಿ ಉಳಿಯಿತು. ನಿಜವಾಗಿ ನೋಡಿದರೆ, ಈ ಶಾಸ್ತ್ರಾಭ್ಯಾಸಕ್ಕಾಗಿ ತಮ್ಮ ಸಮಯವನ್ನೆಲ್ಲ ವಿನಿಯೋಗಿಸಿ ಅದರಿಂದ ಲಾಭ ಹೊಂದಿದವರು ತೀರ ಕಡಿಮೆ. ಪ್ರಾಪಂಚಿಕ ಜೀವನವನ್ನು ಸಾಗಿಸುವವರಿಗಂತೂ ಇದು ಅಸಾಧ್ಯವೇ ಆಗಿದೆ. ಅವರು ತಮ್ಮ ನಿತ್ಯದ

ಕೆಲಸದಲ್ಲಿ ದಿನವಿಡೀ ತೊಡಗಿದ್ದು ಹೊಟ್ಟೆಪಾಡಿಗಾಗಿ ಹೋರಾಡುತ್ತ ಕಷ್ಟ ಕಾರ್ಪಣ್ಯಗಳ ದವಡೆಯಲ್ಲಿ ಸಿಕ್ಕಿದ್ದಾರೆ. ಅವರ ಜೀವನದ ಪ್ರತಿಕ್ಷಣವೂ ಇವೇ ವಿಚಾರಗಳಿಂದ ತುಂಬಿದ್ದು ದೇವರ ಅಥವಾ ಆತ್ಮದ ಬಗೆಗೆ ವಿಚಾರಮಾಡಲು ಅವರಿಗೆ ಅವಕಾಶವಿಲ್ಲ. ಅವರು ನಿಜವಾದ ಋಜುಮಾರ್ಗದಿಂದ ಬಹಳ ದೂರವಿದ್ದು ಅಜ್ಞಾನದ ಕತ್ತಲೆಯಲ್ಲಿ ತಡವರಿಸುತ್ತಿದ್ದಾರೆ. ಅವರ ಜೀವನದ ಸಮಸ್ಯೆಯು ಪರಿಹಾರವಾಗದೆ ಹಾಗೆಯೇ ಉಳಿದುಕೊಳ್ಳುವುದು. ಇಂಥವರ ಗತಿಯು ತುಂಬ ಶೋಚನೀಯ. ಅವರಿಗೆ ಪ್ರತ್ಯಾಶೆಯಿಲ್ಲ, ಸಮಾಧಾನವಿಲ್ಲ. ಯಾವುದಾದರೊಂದು ಪವಿತ್ರ ಗ್ರಂಥದಿಂದ ದಿನಾಲೂ ಕೆಲವು ಸಾಲುಗಳನ್ನು ಪಠಿಸುವುದು, ಗಂಗೆಯ ಪುಣ್ಯ ಜಲದಲ್ಲಿ ಯಾವಾಗಲಾದರೊಮ್ಮೆ ಸ್ನಾನ ಮಾಡುವುದು, ತಿಂಗಳ ನಿರ್ದಿಷ್ಟ ದಿನಗಳಲ್ಲಿ ಉಪವಾಸವಿರುವುದು, ಇವಿಷ್ಟೇ ಗೃಹಸ್ಥರಿಗೆ ಸಾಕಾಗುವುದೆಂದು ಭಾವಿಸಲಾಗಿದೆ. ಇದು ಸರ್ವಸಾಮಾನ್ಯವಾದ ನಂಬುಗೆ. ಇವರ ಮನಸ್ಸಿನಲ್ಲಿ ಆಧ್ಯಾತ್ಮ ವಿಚಾರವಾಗಲೀ ಮುಕ್ತಿ ಅಥವಾ ಭಗವತ್ ಸಾಕ್ಷಾತ್ಕಾರವಾಗಲೀ ಎಂದಿಗೂ ಸುಳಿಯುವುದಿಲ್ಲ. ಈ ಸತ್ಯಪಥ ವಿಮುಖತೆಯು ಕೇವಲ ನಮ್ಮ ಅಜ್ಞಾನ ಹಾಗೂ ಯೋಗ್ಯ ಮಾರ್ಗದರ್ಶನದ ಅಭಾವದಿಂದಷ್ಟೇ ಆಗಿಲ್ಲ; ನಮ್ಮ ಹೃದಯದಲ್ಲಿ ಬೇರೂರಿ ಕುಳಿತು ಸತ್ಯ ವಸ್ತುವಿನ ಪ್ರಾಪ್ತಿಯಲ್ಲಿ ವಿರೋಧಿಗಳಾಗಿ ದಾರಿಯನ್ನಡ್ಡಗಟ್ಟುತ್ತಿರುವ ಆಂತರಿಕ ಪ್ರತ್ಯವಾಯುಗಳ ಮೂಲಕವೂ ಆಗಿದೆ. ಅಲ್ಲದೇ ಸಾಮಾನ್ಯವಾಗಿ ಮಾನವ ಜೀವನದ ಕೊನೆಯ ಅಧ್ಯಾಯವಾದ ವಾರ್ಧಕ್ಯವು ಈ ಕಾರ್ಯಕ್ಕಾಗಿ ಮೀಸಲಾಗಿದೆ ಎಂದು ಭಾವಿಸಲಾಗುವುದು. ಆಗ ಮನುಷ್ಯನು ಪ್ರಾಪಂಚಿಕ ಹೊಣೆಗಳಿಂದ ಮುಕ್ತನಾಗಿ ನಿಶ್ಚಿಂತನಾಗಿರುವನೆಂದು ಬಹುಜನರ ಗ್ರಹಿಕೆ. ಆದರೆ ನಾವೆಂದೂ ಚಿಂತೆ-ಹೊಣೆಗಳಿಂದ ಮುಕ್ತರಾಗಲಾರೆವೆಂಬು ದನ್ನು ಪ್ರತ್ಯಕ್ಷಾನುಭವವು ಸಿದ್ಧಮಾಡಿದೆ. ಅಲ್ಲದೇ ಮುಪ್ಪಿನ ಅವಸ್ಥೆಯು ಬಂದೇ ತೀರುವುದೆಂಬ ಭರವಸೆಯಿಲ್ಲ. ಒಂದು ವೇಳೆ ಬಂದರೂ ಆ ಕಾಲಕ್ಕಾಗಲೇ ನಮ್ಮ ಶಕ್ತಿ-ಚೈತನ್ಯಗಳು ಉಡುಗಿ ಹೋಗಿರುತ್ತವೆ.

ಭಗವತ್ ಸಾಕ್ಷಾತ್ಕಾರವಾಗಿ 'ಸಹಜ ಮಾರ್ಗ'ವನ್ನು ಪ್ರಚುರ ಗೊಳಿಸಿದ (ತಮ್ಮ ಗುರುವಿನ ಹೆಸರಿನಲ್ಲಿ) ಶ್ರೀ ರಾಮಚಂದ್ರ ಮಿಷನ್ನಿನ

ಸಂಸ್ಥಾಪಕರಾದ ಶ್ರೀ ರಾಮಚಂದ್ರಜೀ ಮಹಾರಾಜ, ಷಾಹಜಹಾನ್‌ಪೂರ್ ಇವರಿಗೆ ಅತ್ಯಂತ ಋಣಿಯಾಗಿದ್ದೇವೆ. ಇದು ಪುರಾತನ ರಾಜಯೋಗ ಪದ್ಧತಿಯೇ ಆಗಿದ್ದು ದೈನಂದಿನ ಪ್ರಾಪಂಚಿಕ ಜೀವನದಲ್ಲಿ ತೊಡಗಿದವರಿಗೆ ಸುಗಮವಾಗಬೇಕೆಂಬ ದೃಷ್ಟಿಯಿಂದ ಅದರಲ್ಲಿ ಕಾಲಮಾನದ ಅವಶ್ಯಕತೆಗನು ಸಾರವಾಗಿ ಹಲವು ಬದಲಾವಣೆ ಹಾಗೂ ಸುಧಾರಣೆಗಳನ್ನು ಮಾಡಲಾಗಿದೆ. ಇದು ಅವರಿಗೆ ಪ್ರಜ್ಞಾನದ ಅತ್ಯುಚ್ಚ ಸ್ಥಿತಿಯಲ್ಲಿ ಪ್ರಕಟವಾಗಿದೆಯಾದುದ ರಿಂದ ಅತ್ಯಂತ ಪ್ರಭಾವಿಯೂ ಪರಿಪೂರ್ಣವೂ ಆಗಿದೆ. ಇದಕ್ಕೂ ಪೂರ್ವ ದಲ್ಲಿ ಭಗವತ್ ಸಾಕ್ಷಾತ್ಕಾರವು ಅತ್ಯಂತ ಕಠಿಣವೂ ಜನ್ಮ ಜನ್ಮಾಂತರಗಳಲ್ಲಿ ಸಿದ್ಧಿಸಬಹುದಾದ ಕಾರ್ಯವೂ ಆಗಿದೆಯೆಂದು ಸಾಮಾನ್ಯವಾಗಿ ನಂಬ ಲಾಗುತ್ತಿತ್ತು. ಇದು ಬಹುಮಟ್ಟಿಗೆ ನಿಜವೂ ಆಗಿದೆ. ದೊಡ್ಡದೊಡ್ಡ ಋಷಿಗಳು ಬಹು ಜನ್ಮಗಳ ನಿರಂತರ ಪ್ರಯತ್ನದಿಂದಲೇ ಪೂರ್ಣತೆಯನ್ನು ಪಡೆದಿದ್ದಾರೆ. ಆಗಿನ ಕಾಲದಲ್ಲಿ ಜೀವನಾವಧಿಯಾದರೂ ಇಂದಿಗಿಂತ ಸಾಕಷ್ಟು ದೀರ್ಘ ವಾಗಿರುತ್ತಿದ್ದಿತು. ಇದರಿಂದ ಸಾಮಾನ್ಯ ಗೃಹಸ್ಥರಿಗೆ ಒಂದು ತರಹದ ನಿರಾಶೆ ಯುಂಟಾಗಿದ್ದಿತು. ಒಂದು ಉನ್ನತ ಪರ್ವತದೆದುರಿಗೆ ನಿಂತುಕೊಂಡ ಒಬ್ಬ ರೋಗಿಷ್ಠನೂ ದುರ್ಬಲನೂ ಆದ ಮನುಷ್ಯನು ಅದನ್ನು ಏರಬೇಕೆಂಬ ವಿಚಾರ ಮಾತ್ರದಿಂದಲೇ ಧೈರ್ಯವುಡುಗಿ ಅದು ತನ್ನ ಶಕ್ತಿ–ಸಾಮರ್ಥ್ಯಗಳಿಗೆ ಮೀರಿದ ಮಾತೆಂದು ಅಲ್ಲಿಂದಲೇ ತಿರುಗಿಹೋಗುವನು. ಆತನ ಮನಃಸ್ಥೈರ್ಯವು ಸಡಿಲವಾಗಿ ಪ್ರಯತ್ನ ಮಾಡಬೇಕೆಂಬ ಆಸೆಯು ಸಹ ಹೊರಟುಹೋಗುವುದು. ಆದರೆ ಅದೇ ಯಾವುದಾದರೊಂದು ಬಾಹ್ಯಸಹಾಯವು (ಪಲ್ಲಕ್ಕಿ, ಮೋಟರು, ರೈಲು ಗಾಡಿ ಇತ್ಯಾದಿ) ಲಭ್ಯವಾದರೆ ಆತನ ಪ್ರಯತ್ನದಲ್ಲಿ ಉತ್ಸಾಹ ಬರುವುದು. ಅಷ್ಟೇಅಲ್ಲ, ಮೊದಲು ಯಾವುದು ಅಶಕ್ಯವೆಂದು ತೋರುತ್ತಿದ್ದಿತೋ ಅದನ್ನು ಅವನು ಸಾಧಿಸಿಬಿಡುವನು. ಆಧ್ಯಾತ್ಮಿಕ ಸಿದ್ಧಿಯ ದಾರಿಯಲ್ಲಿ ನಮ್ಮ ಧ್ಯೇಯವನ್ನು ಸುಲಭವಾಗಿ ಮುಟ್ಟುವಂತೆ ಮಾಡುವ ಬಾಹ್ಯ ಸಹಾಯವಾವುದು? ಭಗವಂತನೊಂದಿಗೆ ಸಾಮರಸ್ಯವನ್ನು ಹೊಂದಿ ಆ ಉನ್ನತಸ್ಥಿತಿಯಲ್ಲಿ ನೆಲೆಸಿರುವ ಸಮರ್ಥ ಸದ್ಗುರುವಿನ ಶಕ್ತಿಯೇ ಆ ಸಹಾಯ ವಾಗಬಲ್ಲದು. ಅತ್ಯಂತ ಪತಿತನಾದ ದುರದೃಷ್ಟ ಮನುಷ್ಯನನ್ನು ಸಹ ಆತನು

ತನ್ನ ಸಾಮರ್ಥ್ಯದಿಂದ ಮೇಲಕ್ಕೆತ್ತಿ ಪೂರ್ಣತೆಯ ಹಾಗೂ ಸಾಕ್ಷಾತ್ಕಾರದ ಪಥದ ಮೇಲೆ ನಿಲ್ಲಿಸಬಹುದು. 'ಸಹಜ ಮಾರ್ಗ'ವು ಪದ್ಧತಿಯಲ್ಲಿ ಹೀಗೆಯೇ ಇದೆ. ಈ ಪದ್ಧತಿಯ ಮೂಲಕ, ದೈಹಿಕ, ನೈತಿಕ ಹಾಗೂ ಅಧ್ಯಾತ್ಮಿಕವಾಗಿ ಅತ್ಯಂತ ಪತಿತನಾದ ಮನುಷ್ಯನು ಕೂಡ ದೃಷ್ಟಿಮಾತ್ರದಿಂದ ತನ್ನ ಅಪವಿತ್ರ ಆವರಣಗಳನ್ನು ಕಳೆದುಕೊಂಡು ಪರಿಪೂರ್ಣತೆಯ ಮಾರ್ಗದಲ್ಲಿ ಬಹು ತೀವ್ರ ಮುಂದುವರಿಯಬಹುದಾಗಿದೆ. ಆದರೆ ನೀವು ಆರಿಸಿಕೊಂಡ ಮಾರ್ಗದರ್ಶಿಯು ನಿಜವಾಗಿಯೂ ಯೋಗ್ಯನಿದ್ದು ಮಾರ್ಗದರ್ಶನ ಕಾರ್ಯದಲ್ಲಿ ತೀರ ಸಮರ್ಥನಾಗಿರುವನೆಂಬುದನ್ನು ನಿಶ್ಚಿತ ಮಾಡಿಕೊಳ್ಳಬೇಕು. ಈ ಮಟ್ಟಕ್ಕಿಂತ ಅವನು ಸ್ವಲ್ಪಾದರೂ ಕೆಳಗಿದ್ದುದಾದರೆ ನೀವು ಚರಮಗುರಿಯನ್ನು ಮುಟ್ಟ ಲಾರಿರಿ. ಇದು ಅತ್ಯಂತ ಮಹತ್ವದ ವಿಷಯವಾದುದರಿಂದ ಇದರ ಕಡೆಗೆ ವಿಶೇಷ ಗಮನ ಕೊಡತಕ್ಕದ್ದು. ಅಯೋಗ್ಯ ಗುರುವಿನ ಕೈಯಲ್ಲಿ ಸಿಗುವುದ ಕ್ಕಿಂತ ಜೀವನಾವಧಿ ಗುರುವಿಲ್ಲದಿರುವುದು ಹೆಚ್ಚು ಶ್ರೇಯಸ್ಕರವಾದುದು.

ಸಹಜಮಾರ್ಗದ ಈಗಿನ ಪದ್ಧತಿಯಲ್ಲಿ ಮಾರ್ಗದರ್ಶಕನು ತನ್ನ ಸಂಕಲ್ಪ ಶಕ್ತಿಯಿಂದ ಪ್ರಾಣಾಹುತಿಯ ಮೂಲಕ ಅಭ್ಯಾಸಿಯ ಪ್ರಗತಿ ಮಾರ್ಗದಲ್ಲಿ ಬಾಧಕವಾದ ವಿವಿಧ ಸಂಸ್ಕಾರಗಳ ಜಾಳಿಗೆಯನ್ನು ಕತ್ತರಿಸಿ ಸಾಕ್ಷಾತ್ಕಾರದ ದಾರಿಗುಂಟ ತಂದುಬಿಡುವನು. ಆತನ ಆಧ್ಯಾತ್ಮಿಕ ಪ್ರಗತಿಗೆ ಅವಶ್ಯಕವಾದ ಬಲವನ್ನೂ ಉತ್ಸಾಹವನ್ನು ಆತನಲ್ಲಿ ಸಂಚಾರಗೊಳಿಸುವನು. ಈ ರೀತಿ ಆತನ ದಾರಿಯು ಸುಗಮವೂ ಸರಳವೂ ಆಗಿ ಶೀಘ್ರ ಪ್ರಗತಿಯಾಗುವುದು. ಗುರುವಿನ ಜಾಗರೂಕ ದೃಷ್ಟಿಯು ಸದಾ ಆತನ ಮೇಲಿರುವುದಲ್ಲದೆ ಆತನ ಮುಕ್ತಿ ಮಾರ್ಗದಲ್ಲಿ ಅಡ್ಡಬರುವ ಅನಿಷ್ಟ ಗಳನ್ನೆಲ್ಲ ನಿವಾರಣೆ ಮಾಡುತ್ತಿರುತ್ತದೆ. ಆತನ ಸಹಾಯದಿಂದ ಅಭ್ಯಾಸಿಯು ಅಧ್ಯಾತ್ಮದ ವಿವಿಧ ಹಂತಗಳನ್ನು ಏನೂ ಶ್ರಮವಿಲ್ಲದೆ ದಾಟುವನು. ಹೀಗೆ ಆತನ ಗುರಿಯು ಒಂದೇ ಜೀವನದಲ್ಲಿ ಪ್ರಾಪ್ತವಾಗಿ ಅವನು ಮುಕ್ತಿ ಯನ್ನು ಹೊಂದುವನು. ಇದು, ತನ್ನ ಪೂರ್ವಜರು ಕೂಡಿಟ್ಟ ಅಪಾರ ಸಂಪತ್ತಿಗೆ ಕ್ಷಣಾರ್ಧದಲ್ಲಿಯೇ ಒಡೆಯನಾಗುವ ಮನುಷ್ಯನಂತಿದೆ. ಈಗ ಆತನ ಮುಂದಿರುವ ಪ್ರಶ್ನೆ ಗಳಿಸುವುದಲ್ಲ; ಗಳಿಸಿದುದನ್ನು ಸಂರಕ್ಷಿಸುವುದು.

ಮತ್ತೊಬ್ಬ ಮನುಷ್ಯನು ಹೇರಳ ಹಣ ಗಳಿಸಲು ಬೇರೆ ಉಪಾಯಗಳನ್ನು ಅನುಸರಿಸುವನು. ತನ್ನ ಖರ್ಚನ್ನು ಕಡಿಮೆ ಮಾಡಿ ಸಾಧ್ಯವಾದಷ್ಟು ಉಳಿಸುತ್ತ ಆದಾಯವನ್ನು ಹೆಚ್ಚಿಸುವನು. ಆತನ ಸಂಪತ್ತು ದಿನಾಲೂ ಹೆಚ್ಚುತ್ತ ಹೋಗಿ, ಕೆಲ ಕಾಲಾನಂತರ ನೂರಾರು ರೂಪಾಯಿಗಳು ಕೂಡುವವು. ತನ್ನ ಜೀವನದ ಕೊನೆಯಲ್ಲಿ ಆತನು ತಾನು ಕೂಡಿಸಿದ ಹಣವು ತೀರ ಕಡಿಮೆಯೆಂಬುದನ್ನು ಜೀವನಾವಧಿ ಶ್ರಮಪಟ್ಟರೂ ತಾನು ಅಪೇಕ್ಷಿಸಿದುದಕ್ಕಿಂತ ತೀರ ಕಡಿಮೆ ಸಂಗ್ರಹವಾದುದನ್ನು ಕಾಣುವನು. ಆತನ ಬಯಕೆ ಈಡೇರಬೇಕಾದರೆ ಇನ್ನೂ ಒಂದು ಅಥವಾ ಹಲವು ಜನ್ಮಗಳು ಬೇಕು. ಇದೇ ಪ್ರಕಾರ ನಾವು ಮಾರ್ಗದರ್ಶಿಯಿಂದ ಪ್ರಾಣಾಹುತಿಯ ಮೂಲಕ ಪಡೆದ ಆಧ್ಯಾತ್ಮಿಕ ಶಕ್ತಿಯು ಪೂರ್ವಜರು ಗಳಿಸಿಟ್ಟ ಸಂಪತ್ತಿನಂತೆ. ಅದನ್ನು ನಾವು ದಕ್ಕಿಸಿಕೊಂಡರೆ ಸಾಕು. ಇದು ಈ ಪದ್ಧತಿಯ ಒಂದು ಅಪೂರ್ವ ವೈಶಿಷ್ಟ್ಯ. ತರಬೇತಿಯ ಹಳೆಯ ಪದ್ಧತಿಯಲ್ಲಾದರೋ ಅಭ್ಯಾಸಿಯು ಸ್ವಪ್ರಯತ್ನವನ್ನೇ ಅವಲಂಬಿಸಬೇಕಾಗುತ್ತಿದ್ದಿತು; ಕಠಿಣವಾದ ಸಾಧನೆಗಳನ್ನು ಮಾಡುತ್ತ ದಾರಿಯಲ್ಲಿ ಅಡ್ಡಗಟ್ಟುವ ಪ್ರವೃತ್ತಿಗಳನ್ನೂ ಇಚ್ಛೆಗಳನ್ನೂ ಅದುಮುತ್ತ ಮುಂದುವರಿಯಬೇಕಾಗುತ್ತಿತ್ತು. ಆದರೆ ಈ ಸಹಜಮಾರ್ಗ ಪದ್ಧತಿಯಲ್ಲಿ ಅಭ್ಯಾಸಿಗೆ ತಿಳಿಯದಂತೆಯೇ ತೀರ ಸಹಜ ರೀತಿಯಲ್ಲಿ ಮಾರ್ಗದರ್ಶಿಯ ಸಂಕಲ್ಪ ಶಕ್ತಿಯ ಪ್ರಭಾವದಿಂದ ಆತನ ರೂಪಣವಾಗುತ್ತ ಹೋಗುವುದು. ಇಂದಿನ ಜೀವನದ ಮಹತ್ವದ ವಸ್ತುಗಳಾದ ದೀರ್ಘ ಪರಿಶ್ರಮ ಹಾಗೂ ಸಮಯ ಇವುಗಳ ಉಳಿತಾಯವಾಗುವುದು. ಸಮರ್ಥ ಮಾರ್ಗದರ್ಶಿಯ ಸಹಾಯದಿಂದ ಸಾಧಕನು ಅತ್ಯಲ್ಪ ಸಮಯದಲ್ಲಿ ಅಧ್ಯಾತ್ಮದ ವಿವಿಧ ಘಟ್ಟಗಳನ್ನು ದಾಟುತ್ತ ಹೋಗುವನು. ಅಭ್ಯಾಸಿಯು ಮಾಡಬೇಕಾದ ಕೆಲಸ ಮಾತ್ರವೆಂದರೆ ಪ್ರೀತಿಯಿಂದಲೂ ಶ್ರದ್ಧೆ–ವಿಶ್ವಾಸಗಳಿಂದಲೂ ಇಂಥ ಮಾರ್ಗದರ್ಶಿಯ ಹತ್ತಿರ ಹೋಗಬೇಕು. ಉಳಿದುದೆಲ್ಲ ಮಾರ್ಗದರ್ಶಿಯನ್ನೇ ಕೂಡಿದೆ. ಒಂದು ರೀತಿಯಿಂದ ಅವನು ಸಾಧಕನ ಆಧ್ಯಾತ್ಮಿಕ ಪ್ರಗತಿಯ ಹಾಗೂ ಪೂರ್ಣತೆಯ ಹೊಣೆಯನ್ನು ಹೊರುವನು.

ಗೃಹಸ್ಥಾಶ್ರಮದಲ್ಲಿ ಯೋಗಾಭ್ಯಾಸವು ಸಾಧ್ಯವಿಲ್ಲವೆಂದು ಸಾಮಾನ್ಯ

ವಾಗಿ ನಂಬಲಾಗಿದೆ. ಮನುಷ್ಯನು ಪ್ರಪಂಚವನ್ನು ಸಂಪೂರ್ಣವಾಗಿ ತ್ಯಜಿಸಿ ಅದರಿಂದ ಎಲ್ಲ ಭೌತಿಕ ಸಂಬಂಧಗಳನ್ನೂ ಕಡಿದುಕೊಂಡು ಒಂದು ಗಹನಾರಣ್ಯದ ಮೂಲೆಯಲ್ಲಿ ಏಕಾಂತವಾಸಿಯಾಗಿ ಯೋಗಾಭ್ಯಾಸ ಮಾಡದಹೊರತು ಅವನು ನಿಜವಾದ ಯೋಗಿಯಾಗಲು ಸಾಧ್ಯವಿಲ್ಲವೆಂದು ತಿಳಿಯಲಾಗಿದೆ. ಮುಕ್ತಿಗಾಗಿ ಹಾಗೂ ಆಧ್ಯಾತ್ಮಿಕ ಪರಿಪೂರ್ಣತೆಗಾಗಿ ಯಾವ ಜೀವನವಾಗಲೀ ಅದರ ಸ್ವಲ್ಪ ಭಾಗದಲ್ಲಾಗಲೀ ಸಂನ್ಯಾಸವು ಅಗತ್ಯವೆಂದು ಭಾವಿಸಲಾಗುತ್ತದೆ. ಸಂನ್ಯಾಸಿಯು ಪ್ರಾಪಂಚಿಕ ವಿಷಯಗಳಿಂದ ಅಲಿಪ್ತ ನಾಗಿದ್ದು ಏಕಾಂತ ಜೀವನವನ್ನು ಸಾಗಿಸುತ್ತ ತನ್ನ ಸಮಯ ಶಕ್ತಿಗಳನ್ನೆಲ್ಲ ಆಧ್ಯಾತ್ಮಿಕ ಪ್ರಗತಿಗಾಗಿ ವಿನಿಯೋಗಿಸುವನು. ಒಂದು ನಿರ್ದಿಷ್ಟ ಜೀವನವನ್ನು ನಡೆಸುವುದರಿಂದಲೂ ವಿಶಿಷ್ಟ ಬಣ್ಣದ ಉಡುಪನ್ನು ಧರಿಸುವುದರಿಂದಲೂ ಉಳಿದ ಜನರಿಗಿಂತ ಬೇರೆಯವನಾಗಿ ಕಾಣುವನು. ಈ ಕಲ್ಪನೆಯು ನಮ್ಮಲ್ಲಿ ಎಷ್ಟರಮಟ್ಟಿಗೆ ಬೇರೂರಿದೆಯೆಂದರೆ, ಕಾವಿಬಟ್ಟೆ ಧರಿಸಿದ ಸಂನ್ಯಾಸಿ ಯನ್ನುಳಿದ ಇತರರನ್ನು ಯೋಗಿಗಳೆಂದಾಗಲೀ ಸಂತರೆಂದಾಗಲೀ ಭಾವಿಸ ಲಾರೆವು, ಒಪ್ಪಲಾರೆವು. ಇಷ್ಟೇ ಅಲ್ಲ, ಸಂನ್ಯಾಸಿಯ ವೇಷವನ್ನು ಧರಿಸಿದ ಪ್ರತಿಯೊಬ್ಬನನ್ನೂ ಸಂತನೆಂದೂ ಯೋಗಿಯೆಂದು ತಿಳಿದುಕೊಳ್ಳುವರು. ಆತನ ಆಂತರಿಕ ಸ್ಥಿತಿಯೇನೆ ಇರಲಿ, ಅದರ ಕಡೆಗೆ ಗಮನಕೊಡುವ ಇಲ್ಲವೆ ಅದನ್ನು ತಿಳಿದುಕೊಳ್ಳುವ ಗೊಡವೆಗೆ ಯಾರೂ ಹೋಗುವುದಿಲ್ಲ. ಪ್ರಪಂಚ ಹಾಗೂ ಅದರ ಪರಿಸರಗಳಿಂದ ಅಲಿಪ್ತವಾಗಿರುವುದು ಕೇವಲ ಬಾಹ್ಯಸಂಗತಿಯಾಗಿರದೆ ಮನಸ್ಸಿನ ಒಂದು ಸ್ಥಿತಿಯಾಗಿದೆ. ಅದನ್ನು ಬಾಹ್ಯ ಸಾಧನಗಳಿಂದಲೂ ಕೃತ್ರಿಮ ಪರಿಸ್ಥಿತಿಗಳಿಂದಲೂ ಪಡೆಯಲಾಗುವುದಿಲ್ಲ. ಜೀವನದ ತೊಡಕುಗಳಿಂದ ಮತ್ತು ಪ್ರಾಪಂಚಿಕ ವ್ಯವಹಾರಗಳಿಂದ ಆಂತರ್ಯದಲ್ಲಿ ದೂರವಾಗಿರುವುದೇ ನಿಜಾರ್ಥದಲ್ಲಿ ಅವುಗಳ ಸಂಬಂಧವು ಕಡಿದುಹೋದಂತೆ. ಪ್ರಾಪಂಚಿಕ ಜೀವನ ವನ್ನು ಸಾಗಿಸುವ ಗೃಹಸ್ಥನೇ ಆಗಲಿ, ಅರಣ್ಯದಲ್ಲಿ ತಾಪಸ ಜೀವನವನ್ನು ಕಳೆಯುವ ಸನ್ಯಾಸಿಯೆ ಆಗಲಿ–ಪ್ರಪಂಚದೊಂದಿಗೆ ಮಾನಸಿಕ ಅಲಿಪ್ತತೆಯನ್ನು ಅನುಭವಿಸಿದಾಗಲೇ ನಿಜವಾಗಿ ಪ್ರಪಂಚವನ್ನು ತ್ಯಜಿಸಿದಂತೆ. ನಮ್ಮ ಮಾರ್ಗ ಕ್ರಮಣದಲ್ಲಿ ಬೇರೆಬೇರೆ ಅಧ್ಯಾತ್ಮಿಕ ಸ್ಥಿತಿಗಳನ್ನು ದಾಟುತ್ತ ಹೋದಂತೆಲ್ಲ

ಈ ವಿರಕ್ತ ಸ್ಥಿತಿಯು ಪ್ರಾಪ್ತವಾಗುವುದು. ಸಾಂಸಾರಿಕ ಆಶೆ-ಆಕಾಂಕ್ಷೆಗಳು ಕ್ರಮೇಣ ನಮ್ಮ ಮನಸ್ಸಿನಿಂದ ಕಳಚಿ ಬೀಳುವವು. ಆಗ ಅದರ ಮೇಲೆ ಅವುಗಳ ಸಂಸ್ಕಾರವುಂಟಾಗುವುದಿಲ್ಲ. ಆಗ ಮಾತ್ರ ನಾವು ಸಂಸಾರದಲ್ಲಿದ್ದು ಸಾಂಸಾರಿಕ ಕರ್ತವ್ಯಗಳನ್ನು ನೆರವೇರಿಸುತ್ತಿದ್ದರೂ ನಿಜವಾದ ಅರ್ಥದಲ್ಲಿ ವೈರಾಗ್ಯವನ್ನು ಹೊಂದಿದಂತೆ. ಇದೇ ಸಂನ್ಯಾಸದ ನಿಜ ಸ್ವರೂಪ. ಇದನ್ನು ಹೇಗೆ ಸಂಪಾದಿಸಬಹುದು? ಸಹಜ ಮಾರ್ಗದ ವರ್ತಮಾನ ಪದ್ಧತಿ ಯಲ್ಲಿ ಮಾರ್ಗದರ್ಶಿಯಿಂದ ಇದು ಅತ್ಯಂತ ಸುಲಭವಾಗಿ ಪ್ರಾಪ್ತವಾಗುವುದು.

ಯೋಗಾಭ್ಯಾಸಕ್ಕಾಗಿ ಸದೃಢ ಶರೀರವೇನೋ ಅಗತ್ಯವಾಗಿದೆ. ಆದುದರಿಂದಲೇ ಒಳ್ಳೆಯ ಆರೋಗ್ಯ ಹಾಗೂ ಗಟ್ಟಿಮುಟ್ಟಾದ ಶರೀರ ಇವುಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಹಠಯೋಗವು ಮುಖ್ಯವಾಗಿ ಇದನ್ನೇ ಕುರಿತು ಚರ್ಚಿಸುವುದು. ಶರೀರವನ್ನು ಸುಧಾರಿಸುವುದರ ಮೂಲಕ ಆಂತರಿಕ ಚಕ್ರಗಳನ್ನು ಶುದ್ಧಗೊಳಿಸಿ ಬೆಳಗಿಸಲು ಬೇರೆ ಬೇರೆ ಶಾರೀರಿಕ ಹಾಗೂ ಮಾನಸಿಕ ಅಭ್ಯಾಸಗಳನ್ನು ವಿಧಿಸುವುದು. ಆದುದರಿಂದ ರಾಜಯೋಗ ವನ್ನು ಯಶಸ್ವಿಯಾಗಿ ಅನುಸರಿಸಲು ಹಠಯೋಗದ ಪ್ರಾಥಮಿಕ ಅಭ್ಯಾಸವು ಅಗತ್ಯವೆಂದು ಭಾವಿಸಲಾಗುತ್ತಿತ್ತು. ಆದರೆ ಸಹಜಮಾರ್ಗದ ಪದ್ಧತಿಯಲ್ಲಿ ಮಾರ್ಗದರ್ಶಿಯ ಸಾಮರ್ಥ್ಯವೇ ನಮ್ಮನ್ನು ಮುನ್ನಡೆಸಿ ಧ್ಯೇಯ ಸಾಧನೆಯನ್ನು ಶಕ್ಯಗೊಳಿಸುವುದು. ಸದೃಢ ಶರೀರವು ನಿಸ್ಸಂದೇಹವಾಗಿ ಬಹಳ ಸಹಾಯಕವಾಗುವುದು. ಆದರೆ ಇದರರ್ಥ ಕೃಶದೇಹಿಗಳಿಗೂ ದುರ್ಬಲರಿಗೂ ಸದ್ಗತಿ ಪಡೆಯುವ ಯಾವ ಅವಕಾಶವೂ ಇಲ್ಲವೆಂದೇನಲ್ಲ. ದೇಹಾರೋಗ್ಯವು ಹೇಗೇ ಇದ್ದರೂ ಮಾರ್ಗದರ್ಶಿ ಅಥವಾ ಗುರುವಿಗೆ ಸಂಪೂರ್ಣ ಶರಣಾಗತ ರಾದಾಗ ಅದು ದೊರಕಿಯೇ ತೀರುವುದು. ಆಗ ಅವರ ಪ್ರಗತಿಯು ನಿಶ್ಚಿತವಾಗುವುದು. ಗುರುವಿನ ಹೃದಯವನ್ನು ಸಹಜವಾಗಿಯೇ ಅವರು ನಿರಂತರವಾಗಿ ತಟ್ಟುವುದರಿಂದ ಅವರ ಪ್ರಗತಿಯು ಕುಂಠಿತವಾಗದೇ ಸಾಗುವುದು. ಹೀಗೆ, ಅವರ ದೇಹವು ದುರ್ಬಲವಾಗಿದ್ದು ಆರೋಗ್ಯವು ಕೆಟ್ಟಿದ್ದರೂ ಧ್ಯೇಯಸಿದ್ಧಿಯಾಗಿ ಕೊನೆಗೆ ಮುಕ್ತಿಯನ್ನು ಹೊಂದುವರು.

ಪಿ. ಎಂ. ಟಿ. ಮೊದಲಿಯಾರ್

ಮದ್ರಾಸ್
ಜುಲೈ ೨, ೧೯೭೬



ಮಹಾತ್ಮಾ ಶ್ರೀ ರಾಮಚಂದ್ರಜಿ ಮಹಾರಾಜ
ಫತೇಹಗಡ (ಉ.ಪ್ರ.)



ಮಹಾತ್ಮಾ ಶ್ರೀ ರಾಮಚಂದ್ರಜಿ ಮಹಾರಾಜ
ಸಂಸ್ಥಾಪಕ, ಅಧ್ಯಕ್ಷರು, ಶ್ರೀ ರಾಮಚಂದ್ರ ಮಿಷನ್, ಷಾಹಜಹಾನಪೂರ್ (ಉ.ಪ್ರ.)

# Foreward

This booklet translated into Kannada by Sri S. A. Sarnadji, is a valuable account of the experiences of the saintly author, Sri Ram Chandraji Maharaj on the path of spiritual progress. Based on his own researches the book stresses the importance of meditation as the main sadhana of Rajayoga and shows the stages that will have to be passed in the march to the goal of self-realisation. Very rarely do we have such authentic accounts of the progress in spiritual life given lucidly and with genuine anxiety to be of help to sadhakas. The reader of this book will feel grateful for the help rendered by this book. The part played by the spiritual guide the Master is of fundamental importance in endowing power-transmission which is a major instrument of progress. May all readers be blessed to come under the guidance of such evolved saints and enter the path of spiritual perfection.

Peace to all beings.

20th June, 1965
Jayanagar
Bangalore

**D. GURUMURTI,** M.A., Ph.D.
*Retired Professor of Philosophy*

# ಮುನ್ನುಡಿ

ಶ್ರೀ ಶ್ರೀ. ಆ. ಸರ್ನಾಡ ಅವರು ಕನ್ನಡಿಸಿದ ಈ ಕಿರುಹೊತ್ತಗೆಯು ರಾಜಯೋಗದ ಪ್ರಭಾವವನ್ನು ಕುರಿತಾಗಿದ್ದು ಆಧ್ಯಾತ್ಮಿಕ ಪ್ರಗತಿಯ ದಾರಿಯಲ್ಲಿ ಮಹಾತ್ಮಾ ರಾಮಚಂದ್ರಜಿ ಮಹಾರಾಜರು ಪಡೆದ ಅನುಭವಗಳ ಅಮೂಲ್ಯ ವಿವರಣೆಯಾಗಿದೆ. ಇದರಲ್ಲಿ, ಅವರ ಸ್ವಂತ ಸಂಶೋಧನೆಗಳ ಆಧಾರದ ಮೇಲೆ, ರಾಜಯೋಗದ ಮುಖ್ಯ ಸಾಧನವಾದ ಧ್ಯಾನದ ಮಹತ್ವವನ್ನು ಬಿಂಬಿಸಲಾಗಿದೆಯಲ್ಲದೇ ಆತ್ಮಸಾಕ್ಷಾತ್ಕಾರದ ಗುರಿಯತ್ತ ಕೊಂಡೊಯ್ಯುವ ಮಾರ್ಗದಲ್ಲಿ ಕ್ರಮಿಸಬೇಕಾದ ಅವಸ್ಥೆಗಳನ್ನು ತೋರಿಸ ಲಾಗಿದೆ. ಸಾಧಕರಿಗೆ ಅನುಕೂಲವಾಗಬೇಕೆಂದು ಸುಬೋಧವಾಗಿಯೂ ಕಳಕಳಿಯಿಂದಲೂ ಬರೆಯಲ್ಪಟ್ಟ ಆಧ್ಯಾತ್ಮಿಕ ಪ್ರಗತಿಯ ಇಂಥ ಅಧಿಕೃತ ಬರಹಗಳು ಅತಿವಿರಳ. ಈ ಪುಸ್ತಕದಿಂದ ದೊರೆಯುವ ಸಹಾಯಕ್ಕಾಗಿ ಓದುಗರು ಉಪಕೃತರಾಗದಿರಲಾರರು. ಆಧ್ಯಾತ್ಮ ಜೀವನದ ಮುನ್ನಡೆಗೆ ಶ್ರೇಷ್ಠ ಸಾಧನವಾದ ಯೌಗಿಕ ಪ್ರಾಣಾಹುತಿಯ ಶಕ್ತಿಯನ್ನು ಕರುಣಿಸುವ ಮಾರ್ಗದರ್ಶಿ ಅಥವಾ ಗುರುವಿನ ಪಾತ್ರವು ತುಂಬ ಮಹತ್ವದ್ದು. ಎಲ್ಲ ಓದುಗರೂ ಇಂಥ ಅಪರೋಕ್ಷ ಜ್ಞಾನಿಗಳ ಮಾರ್ಗದರ್ಶನವನ್ನು ಪಡೆದು ಆತ್ಮಿಕ ಪರಿಪೂರ್ಣತೆಯನ್ನು ಹೊಂದಿ ಕೃತಾರ್ಥರಾಗಲಿ.

ಎಲ್ಲರಿಗೂ ಶಾಂತಿ ಲಭಿಸಲಿ.

ಜೂನ್ ೨೦, ೧೯೬೫

ಜಯನಗರ, ಬೆಂಗಳೂರು

ಡಿ. ಗುರುಮೂರ್ತಿ,
ಎಂ.ಎ., ಪಿಎಚ್.ಡಿ.
ತತ್ವಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ

# ಅನುವಾದಕನ ಅರಿಕೆ

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಶ್ರೀ ರಾಮಚಂದ್ರಜಿಯವರ ಸಂಶೋಧನಗಳು ಬೆರಗುಗೊಳಿಸುವಂಥವಾಗಿವೆ. 'Efficacy of Raja yoga in the Light of Sahaja Marg' ಎಂಬ ಗ್ರಂಥವು ಅಂಥದೊಂದು ಸಂಶೋಧನವನ್ನೊಳಗೊಂಡಿದ್ದು ಅವರ ಅತ್ಯುತ್ತಮ ಕೃತಿಗಳಲ್ಲೊಂದಾಗಿದೆ. ಕನ್ನಡ ಜನತೆಗೆ ಅದರ ಪರಿಚಯವಾಗಲೆಂಬ ದೃಷ್ಟಿಯಿಂದ ಅದನ್ನು ಕನ್ನಡಿಸಿದ್ದೇನೆ. ಮೂಲದ ಅಭಿಪ್ರಾಯವು ಯಥಾವತ್ತಾಗಿ ಮೂಡಿಬರುವಂತೆ ಪ್ರಯತ್ನಿಸಲಾಗಿದೆ. ಎಲ್ಲಿಯಾದರೂ ಸಂದಿಗ್ಧತೆ, ವಿಪರ್ಯಾಸ ಮುಂತಾದುವೇನಾದರೂ ಕಂಡುಬಂದಲ್ಲಿ ಮೂಲಗ್ರಂಥವೇ ಪ್ರಮಾಣವೆಂದು ಭಾವಿಸಬೇಕು.

ಗ್ರಂಥದ ಅನುವಾದ ಹಾಗೂ ಮುದ್ರಣ ಕಾರ್ಯದಲ್ಲಿ ನನಗೆ ಒಂದಿಲ್ಲೊಂದು ರೀತಿಯಿಂದ ನೆರವಾದ ಎಲ್ಲ ಬಂಧುಗಳನ್ನು ತುಂಬ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ಕೃತಿಯನ್ನು ಶ್ರೀಗುರುಗಳ ಚರಣಾರವಿಂದಗಳಲ್ಲಿ ಅತ್ಯಂತ ಭಕ್ತಿಪೂರ್ವಕವಾಗಿ ಸಮರ್ಪಿಸುತ್ತೇನೆ.

ಕಲ್ಬುರ್ಗಿ ಶ್ರೀ. ಆ. ಸರ್ನಾಡ

೧೦–೬–೧೯೭೫

# ವಿಷಯಸೂಚಿಕೆ


| | | |
|---|---|---|
| ೧) ರಾಜಯೋಗ | --- | ೧ |
| ೨) ಸಹಜಮಾರ್ಗ | --- | ೫ |
| ೩) ಧ್ಯಾನ | --- | ೧೧ |
| ೪) ಹೃದಯಮಂಡಲ | --- | ೧೬ |
| ೫) ಮನೋಮಂಡಲ | --- | ೩೦ |
| ೬) ಕೇಂದ್ರಮಂಡಲ | --- | ೩೨ |
| ೭) ಉಪಸಂಹಾರ | --- | ೫೨ |

# ರಾಜಯೋಗ

**ರಾಜಯೋಗವು** ಬಹು ಪ್ರಾಚೀನ ಶಾಸ್ತ್ರವಾಗಿದೆ. ಅದನ್ನು ದೊಡ್ಡ ದೊಡ್ಡ ಋಷಿ-ಮುನಿಗಳು ಆತ್ಮಸಾಕ್ಷಾತ್ಕಾರದಲ್ಲಿ ತಮಗೆ ಸಹಾಯಕ ವಾಗುವಂತೆ ಅನುಸರಿಸಿದರು. ಅದು ರಾಮಾಯಣ ಕಾಲಕ್ಕಿಂತ ಬಹಳ ಹಿಂದೆ ಭಾರತದಲ್ಲಿ ಪ್ರಚಲಿತವಾಗಿದ್ದಿತು. ಸೂರ್ಯವಂಶದ ದಶರಥ ಮಹಾರಾಜನಿಗಿಂತ ಎಪ್ಪತ್ತೆರಡು ತಲೆಮಾರುಗಳ ಹಿಂದೆ ಇದ್ದ ಒಬ್ಬ ಮಹರ್ಷಿಯು ಅದನ್ನು ಪ್ರಚುರಪಡಿಸಿದನು. ಯಾವುದರಿಂದ ನಮ್ಮ ಜೀವನದ ಸಮಸ್ಯೆಗಳೆಲ್ಲ ಸುಲಭವಾಗಿ ಪರಿಹಾರವಾಗುವುವೋ ಅಂಥ ಮುಕ್ತಿ ಯನ್ನು ಪಡೆಯುವ ನೈಜ ಪದ್ಧತಿಯನ್ನು ಕಂಡುಹಿಡಿಯಲು ಆತನು ಬಹು ಕಾಲ ಚಿಂತಿಸಿದನು. ಈ ಪುಸ್ತಕದಲ್ಲಿ ವರ್ಣಿಸಲಾದಂತೆ ಆತನು ಕೇಂದ್ರ ಮಂಡಲದಲ್ಲಿ ತೀರ ಕೇಂದ್ರಕ್ಕೆ ಹೊಂದಿಕೊಂಡೇ ಈಜಾಡುತ್ತಿದ್ದನು. ಪ್ರಕೃತಿಯಲ್ಲಿ ಅಗತ್ಯವಾದ ಬದಲಾವಣೆಯನ್ನುಂಟು ಮಾಡಲು ದುಡಿಯು ತ್ತಿರುವ ಇಂದಿನ ವಿಭೂತಿಯಂತೆಯೇ ಆತನ ಸ್ಥಿತಿಯಿದ್ದಿತು. ಈ ವಿಷಯ ವಾಗಿ ಸುದೀರ್ಘ ಚಿಂತನೆ ಮಾಡಿ ಕಟ್ಟಕಡೆಗೆ ಆ ಮಹರ್ಷಿಯು ಒಂದು ಸಾಧನವನ್ನು ಕಂಡುಹಿಡಿದನು. ಅದೇ ಕ್ರಮೇಣ ರಾಜಯೋಗವಾಗಿ ಬೆಳೆಯಿತು. ಆತನು ಕೇಂದ್ರದ ನಿಕಟ ಸಂಪರ್ಕದಲ್ಲಿದ್ದಾಗ, ಅಸ್ತಿತ್ವದಲ್ಲಿರುವ ಜಗತ್ತಿನ ನಿಜಸ್ವರೂಪವನ್ನು ಅದರ ಮೂಲಕಾರಣ ಅಥವಾ ಶಕ್ತಿಸಹಿತ ವಾಗಿ ಕಂಡುಹಿಡಿದನು. ಕೇಂದ್ರದ ಅಡಿಯಲ್ಲಿರುವ ಯಾವುದೋ ಒಂದು ಶಕ್ತಿಯ ಕ್ಷೋಭವು ವರ್ತಮಾನ ಜಗತ್ತನ್ನು ಅಸ್ತಿತ್ವದಲ್ಲಿ ತಂದಿತೆಂದು ಅರಿತನು. ಅದನ್ನೇ ಬೇರೆ ಶಬ್ದಗಳಲ್ಲಿ ಉಪಾದಾನ ಕಾರಣವೆಂದೂ ಕ್ಷೋಭ ವೆಂದೂ ಕರೆಯಲಾಗಿದೆ. ಅದು ಮನುಷ್ಯನ ಚಿತ್‌ಶಕ್ತಿಗೆ ಸಮಾನವಾಗಿ ರುವ ಅಥವಾ ಅದರಂತಿರುವ ಶಕ್ತಿಯ ಪರಿಣಾಮವೆಂಬುದನ್ನು ಆತನು ಕೊನೆಗೆ ನಿರ್ಣಯಿಸಿದನು. * ಸ್ವಾಭಾವಿಕವಾಗಿಯೇ, ಚಿತ್‌ಶಕ್ತಿಯು

---

* ಈ ಪುಸ್ತಕದಲ್ಲಿ ವಿವೇಚಿಸಲಾದಂತೆ ಮಾನವ ಮನಸ್ಸಿನ ಹುಟ್ಟನ್ನು ಕುರಿತಾದ ತತ್ತ್ವವು ತರ್ಕಬದ್ಧವಾಗಿಯೇ ಇದೆ. ಪ್ರಸುಪ್ತವಾದ ಭಗವದಿಚ್ಛೆಯಿಂದ ಪ್ರೇರಿತವಾದ

ಇಂತಹ ಪರಿಣಾಮವನ್ನುಂಟು ಮಾಡಬಹುದೆಂಬುದನ್ನೂ ಅದರ ಶಕ್ತಿಯು ಅನಂತವಾಗಿದೆ ಎಂಬುದನ್ನೂ ಅವನು ಊಹಿಸಿದನು. ಆಮೇಲೆ ಅವನು ಆ ಚಿತ್‌ಶಕ್ತಿಯಿಂದ ಕೆಲಸ ತೆಗೆದುಕೊಂಡು ಅದರಿಂದ ತರಬೇತಿಯನ್ನು ಆರಂಭಿಸಿದನು. ಆ ಕೆಲಸವು ಮುಂದೆ ನಮ್ಮ ಪಾಲಿಗೆ ಬಂದಿತು. ಅದೇ ರಾಜಯೋಗದ ಮೂಲವಾಗಿದೆ. ನಮ್ಮಲ್ಲಿರುವ ಶ್ರೇಷ್ಠ ವಸ್ತುವೆಂದರೆ ಸಂಕಲ್ಪ ಶಕ್ತಿಯೇ. ಅದು ಬೆಳೆಯುತ್ತ ಹೋಗಿ ಕಟ್ಟಕಡೆಗೆ ನಮ್ಮನ್ನು ನಮ್ಮ ಗುರಿಗೆ ಮುಟ್ಟಿಸುವುದು. ಅನೇಕ ಮಹರ್ಷಿಗಳು, ಒಬ್ಬರ ತರುವಾಯ ಒಬ್ಬರು, ಅದನ್ನು ಸುಧಾರಿಸಿ ಬೆಳೆಸಿದ್ದಾರೆ. ಸಂಕಲ್ಪವೇ ಕೊನೆಗೆ ಸದ್ರೂಪವನ್ನು ತಾಳಿ ಮೂಲರೂಪದಲ್ಲಿ ಕಾಣಿಸಿಕೊಳ್ಳುವುದು. ಇದೆಲ್ಲವನ್ನೂ ಶ್ರೇಷ್ಠವಾದ ಅಂತರ್ ದೃಷ್ಟಿವುಳ್ಳವರು ಪ್ರಮಾಣಿಸಿ ನೋಡಬಹುದು. ಈ ಶಾಸ್ತ್ರವನ್ನು ಬೋಧಿಸುವ ಪದ್ಧತಿಗಳು ಬೇರೆ ಬೇರೆಯಾಗಿದ್ದರೂ ಮೂಲಭೂತವಾದ ತತ್ತ್ವವು ಮಾತ್ರ ಇದೆ. ಈ ಶಕ್ತಿಯಿಂದ ನಾವು ದೇವರೊಡನೆ ಸಂಬಂಧವನ್ನು ಜೋಡಿಸುತ್ತೇವೆ. ದೊಡ್ಡದೊಡ್ಡ ಋಷಿಗಳು ಕಾಲಕ್ಕೆತಕ್ಕಂತೆ ಅಗತ್ಯಾನುಸಾರ ಅದನ್ನು ಸುಧಾರಿಸಿ ಬೆಳೆಸಿದ್ದಾರೆ. ಈ ವಿಷಯವನ್ನು ಕುರಿತು ವಿವರವಾಗಿ ಚರ್ಚಿಸುವ ವ್ಯಾಖ್ಯಾನಗಳು ಬರೆಯಲ್ಪಟ್ಟಿವೆ. ಆದರೆ ಮನುಷ್ಯನು ದಿವ್ಯದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬುದೇ ಅದರಡಿಯಲ್ಲಿರುವ ವಿಚಾರ. ಯಾರು ಮಾನವ ಜೀವನದ ಪರಿಮಿತಿಯಲ್ಲಿ ಮುಂದುವರಿದು, ತಮ್ಮನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಸುಧಾರಿಸಿಕೊಳ್ಳುವರೋ ಅವರಿಗೆ ಪದಾರ್ಥಗಳು ತಮ್ಮ ನಿಜರೂಪ ದಲ್ಲಿ ಗೋಚರವಾಗಿ ಅವುಗಳ ರಹಸ್ಯವು ಹೊಳೆಯುವುದು. ಸಾಮಾನ್ಯವಾಗಿ

---

ಮೊಟ್ಟಮೊದಲಿನ ಕ್ಷೋಭವು ಅಸ್ತಿತ್ವಕ್ಕೆ ಕಾರಣವಾಯಿತು. ಆ ಕ್ಷೋಭವು ಸುಪ್ತ ಶಕ್ತಿಗಳನ್ನು ಚಾಲನಗೊಳಿಸಿತು; ಹಾಗೂ ಸೃಷ್ಟಿಯ ಮತ್ತು ಪ್ರಾಣಿಜೀವನದ ಕ್ರಮವು ಆರಂಭವಾಯಿತು. ಕ್ಷೋಭ ಅಥವಾ ಪ್ರೇರಣೆಯಾಗಿ ಕಾಣುವ ಆ ಮೂಲಶಕ್ತಿಯೇ ಮುಖ್ಯ ಕ್ರಿಯಾಶಕ್ತಿಯಾಗಿ ಪ್ರತಿಯೊಂದು ಜೀವಿಯಲ್ಲಿಯೂ ಅವತರಿಸಿತು. ಮನುಷ್ಯನಲ್ಲಿ ಅದು ಮನಸ್ಸೆಂಬ ಸಂಜ್ಞೆಯನ್ನು ಪಡೆಯಿತು. ಅದರಡಿಯಲ್ಲಿ, ಪ್ರಥಮ ಕ್ಷೋಭದಲ್ಲಿದ್ದ ಅದೇ ಸುಪ್ತೇಚ್ಛೆಯೇ ಇರುವುದು. ಹೀಗೆ, ಮಾನವನ ಮನಸ್ಸು ಆ ಮೂಲ ಶಕ್ತಿಯೊಂದಿಗೆ ಏಕರೂಪವಾಗಿದ್ದು ಅದರ ಅಂಶವೇ ಆಗಿದೆ. ಆದುದರಿಂದ ಅವೆರಡರ ಕಾರ್ಯಗಳೂ ತೀರ ಸಮಾನವಾಗಿವೆ.

ತತ್ತ್ವಜ್ಞಾನಿಗಳು ಪದಾರ್ಥಗಳ ಅಂತರಾಳವನ್ನು ತರ್ಕದ ಮೂಲಕ ತಲುಪಲು ಯತ್ನಿಸುವರೇ ಹೊರತು ದಿವ್ಯದೃಷ್ಟಿಯಿಂದಲ್ಲ. ಸಾಮಾನ್ಯವಾದ ತರ್ಕವು ತಪ್ಪಾಗಿರುವ ಸಂಭವವಿದ್ದು ನಮ್ಮನ್ನು ದಾರಿ ತಪ್ಪಿಸಬಹುದು. ಅದೇ ಅನಾವಶ್ಯಕವಾದ ತರ್ಕದ ಮಾಧ್ಯಮವಿಲ್ಲದೆ ಅಂತರ್‌ದೃಷ್ಟಿಯಿಂದ ವಸ್ತುಗಳನ್ನು ನೋಡಿದುದಾದರೆ ಯಾವ ದೋಷವೂ ಇಲ್ಲದೆ ಅವು ಮೂಲ ರೂಪದಲ್ಲಿ ಗೋಚರಿಸುವವು. ಪದಾರ್ಥಗಳು ಎಷ್ಟರಮಟ್ಟಿಗೆ ಬದಲಾವಣೆ ಹೊಂದಿವೆಯೆಂದರೆ ಅದನ್ನು ಕ್ರಮವಾಗಿ ವಿವರಿಸಲು ಸಾಧ್ಯವಿಲ್ಲ. ಅನಾದಿಕಾಲದಿಂದ ಈ ಜಗತ್ತು ಅಸ್ತಿತ್ವದಲ್ಲಿದ್ದು ಅದರ ಸರಿಯಾದ ದಿನಾಂಕವು ತಿಳಿದುಬಂದಿಲ್ಲ. ಆದರೂ ಕೆಲವರು 'ಸೃಷ್ಟಿಶಕ'ವನ್ನು ಕಂಡುಹಿಡಿಯಲು ಯತ್ನಿಸಿದ್ದಾರೆ. ಭೂಮಿಯ ಪರಿಚಲನೆಯು ನಡೆದೇ ಇದೆ; ಅದರ ಕಾರ್ಯಗಳು ಹೆಚ್ಚುತ್ತಲೇ ಇವೆ. ನಾವು ಎಲ್ಲಕ್ಕಿಂತ ಮೇಲೆ ಹೋಗಿ ಅನಂತರ ವಿಷಯವನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ವಸ್ತುಗಳ ನಿಜಸ್ಥಿತಿಯನ್ನು ಮುಟ್ಟಲು ಇದು ಬಹು ಮುಖ್ಯವಾದ ಸೂತ್ರವೆಂಬುದನ್ನು ತತ್ವಶಾಸ್ತ್ರಜ್ಞರು ಮನಗಾಣಬೇಕು. ಪ್ರಾಯಿಕವಾಗಿ, ಪಂಡಿತರು ಜೀವನದಲ್ಲಿ ಪ್ರಯೋಗ ರಂಗಕ್ಕಿಳಿಯದೆ ವಿಷಯಗಳನ್ನು ವಿವೇಚಿಸಿದ್ದಾರೆ. ಈ ಮಾತು ಪಾಶ್ಚಾತ್ಯ ತತ್ವಜ್ಞಾನಿಗಳ ವಿಷಯದಲ್ಲಿ ಸರ್ವಸಾಮಾನ್ಯವಾಗಿದೆ. ನನ್ನ ಅಭಿಪ್ರಾಯದಲ್ಲಿ, ಒಬ್ಬನು ತತ್ವಶಾಸ್ತ್ರಜ್ಞನಾಗಿದ್ದುಕೊಂಡೇ ಅಧಃಪತನ ಹೊಂದುವುದು ಅಸ್ವಾಭಾವಿಕವೇನಲ್ಲ. ಆದರೆ, ಅದೇ ಆತನು ಪ್ರತ್ಯಕ್ಷವಾಗಿ ತನ್ನ ಜೀವನದಲ್ಲಿ ಪ್ರಯೋಗಿಸಿ ಅಭ್ಯಾಸ ಮಾಡಿದುದಾದರೆ ಪತನವು ಅಸಂಭವ. ಭಾರತದಲ್ಲಾದರೋ ಋಷಿಗಳು ಮೊದಲು ತಮ್ಮ ಜೀವನದಲ್ಲಿ ಪ್ರಯೋಗ ಮಾಡಿ ಅನಂತರ ತತ್ವವಿವೇಚನೆ ಮಾಡಿದ್ದಾರೆ.* ತತ್ವಶಾಸ್ತ್ರದಲ್ಲಿ

---

* ತತ್ವಜ್ಞಾನವು ತರ್ಕವನ್ನವಲಂಬಿಸಿರದೆ ಅಂತರ್ಜ್ಞಾನವನ್ನವಲಂಬಿಸಿದೆ. ಪಾಶ್ಚಾತ್ಯ ತತ್ವಜ್ಞಾನಿಗಳನೇಕರು ಹೇಳುವಂತೆ ಅದು 'ಸಂದೇಹ'ದಿಂದ ಆರಂಭವಾಗುವುದಿಲ್ಲ; 'ಆಶ್ಚರ್ಯ'ದಿಂದ ಆರಂಭವಾಗುವುದು. ಆದುದರಿಂದ ವಿಷಯಗಳ ವಾಸ್ತವತೆಯೆಡೆಗೆ ತಲುಪಲು ಅದರಲ್ಲಿ ಬರುವ ಎಲ್ಲ ಅನುಭವಗಳನ್ನೂ ಪ್ರತ್ಯಕ್ಷವಾಗಿ ಅನುಭವಿಸುವುದು ಅಗತ್ಯವಾಗಿದೆ.

ವಿವೇಚಿಸಲಾದ ಮಟ್ಟಕ್ಕೆ ಅವರು ಬಂದಿರದಿದ್ದರೂ ಚಿಂತೆಯಿಲ್ಲ; ಅಸ್ತಿತ್ವದಲ್ಲಿರುವ ಪದಾರ್ಥಗಳ ರಹಸ್ಯವನ್ನು ಭೇದಿಸಲು ತಮಗೆ ಶಕ್ಯವಿದ್ದ ಮಟ್ಟಿಗೆ ತಮ್ಮ ಪ್ರಗತಿಯ ಮಟ್ಟಕ್ಕನುಸಾರವಾಗಿ ಅವರು ಪ್ರಯತ್ನ ಮಾಡಿದ್ದಾರೆ. ಅದರ ಫಲಸ್ವರೂಪವಾಗಿಯೇ ವಿವಿಧ ವರ್ಣಗಳಲ್ಲಿ ಕಾಣುತ್ತಿರುವ ಷಡ್ದರ್ಶನಗಳು ಹುಟ್ಟಿಕೊಂಡಿವೆ. ನಾವು ಯಾವಾಗಲೂ ನಮ್ಮ ಅಭ್ಯಾಸವು ಮುಗಿದಾಗಲೇ ವಿಷಯ ವಿವೇಚನೆಗೆ ಕೈಹಾಕಬೇಕು. ಸಂಕ್ಷೇಪವಾಗಿ ಹೇಳುವುದಾದರೆ, ಗ್ರಂಥಿಗಳು ತಾವಾಗಿಯೇ ಬಿಚ್ಚತೊಡಗಿದಾಗ ನಾವು ವಿಷಯಗಳನ್ನು ಅರಿತುಕೊಳ್ಳಲು ಪ್ರಯತ್ನಿಸಬೇಕು. ಇದು ಕೇಂದ್ರ ಮಂಡಲದ ದರ್ಶನಕ್ಕೆ ಸಂಬಂಧಪಟ್ಟಿದ್ದು ಈ ಬಗೆಗೆ ನಾನು ಮುಂದೆ ಹೇಳುವವನಿದ್ದೇನೆ. ಆ ಮಂಡಲದಿಂದ ನಾವು ಮಾಡುವ ವಿಷಯ ನಿರ್ಣಯವೆಲ್ಲ ಸ್ವಲ್ಪವೂ ದೋಷಯುಕ್ತವಾಗಿರದೆ ಸರಿಯಾಗಿಯೇ ಇರುತ್ತದೆ.

* * *

# ಸಹಜ ಮಾರ್ಗ

ನಾನಿಂದು ಸಹಜ ಮಾರ್ಗಾನುಸಾರ ನಮ್ಮ ರಾಜಯೋಗಪದ್ಧತಿಯ ಅತ್ಯದ್ಭುತವನ್ನು ತೋರಿಸಿಕೊಡುವೆನು. ಈ ಪದ್ಧತಿಯ ಪ್ರಭಾವವನ್ನು ತೀರ ಕೆಲಜನರು ಮನಗಂಡಿದ್ದಾರೆ. ನಾವು ಒಂದೇ ಒಂದು ವಸ್ತುವನ್ನು ದೈವೀಗುಣವನ್ನು ಮಾತ್ರ ಕುರಿತು ಚಿಂತನೆ ಮಾಡುವೆವು. ಅದನ್ನು ನಾವು ಗುರುವೆಂದಾಗಲಿ ಧ್ಯೇಯವಸ್ತುವೆಂದಾಗಲಿ ಕರೆಯುವೆವು. * ಈಗ, ಪುರುಷೋತ್ತಮನಾದಂಥ ಆ ವ್ಯಕ್ತಿಯನ್ನು ಕುರಿತಾದ ಒಂದೇ ಒಂದು ವಿಚಾರವು ನಮ್ಮಲ್ಲಿದೆ. ನಾವು ಶೀಘ್ರವಾಗಿಯೇ ಆ ರೂಪದಲ್ಲಿ ಎಷ್ಟರ ಮಟ್ಟಿಗೆ ಆಸಕ್ತರಾಗುವೆವೆಂದರೆ ಅನ್ಯವಸ್ತುಗಳು ನಮಗೆ ಗೌಣವಾಗಿ ಕಾಣ ತೊಡಗುವವು. ನಾವು ಆ ಒಂದೇ ವಸ್ತುವಿಗೆ ಮಹತ್ತ್ವವನ್ನು ಕೊಡುವೆವು. ಒಂದು ಪಂಪಿನ ಮೂಲಕ ಕಾಲುವೆಯಲ್ಲಿ ನೀರನ್ನು ಹಾಯಿಸಿದರ ಅದು ಸ್ವಲ್ಪ ಮಟ್ಟಿಗೆ ತನ್ನ ಶಕ್ತಿಯ ಓಘದಲ್ಲಿ ಹರಿಯುವುದಲ್ಲದೆ ಯಂತ್ರದ ಸಹಾಯವೂ ಅದಕ್ಕೆ ದೊರೆಯುವುದು. ಅದೇ ಪ್ರಕಾರ ನಾವು ನಮ್ಮ ಇಚ್ಛಾ ಶಕ್ತಿಯನ್ನು ನಮ್ಮ ಉಗಮದಲ್ಲಿ – ಅರ್ಥಾತ್ ನಾವು ಹೊರಡುವ ಸ್ಥಾನದಲ್ಲಿ ಇರಿಸಿ ವಿಚಾರಧಾರೆಯ ಮೂಲಕ ಸರ್ವಶಕ್ತನೆಂಬ ಕಾಲುವೆಯಲ್ಲಿ ಸಾಗುವೆವು. ವೃಷ್ಟಿಮನಸ್ಸಿನಿಂದ ಬಂದ ಈ ಇಚ್ಛಾಶಕ್ತಿಯು ನಮ್ಮ ದಾರಿಯನ್ನು ಸುಗಮ ಗೊಳಿಸುವುದು. ವ್ಯಕ್ತಿಗತ ಮನಸ್ಸಿನಿಂದ ಹಲವೊಂದು ವಸ್ತುವನ್ನು ಹೊರದೂಡಬೇಕೆಂಬ ವಿಚಾರವನ್ನು ನಾವು ಇಟ್ಟುಕೊಳ್ಳುವೆವು. ದಿನದಿನಕ್ಕೂ ಅದರ ಬಲವು ಹೆಚ್ಚುವುದು; ಹಾಗೂ ನಮ್ಮ ಮನಸ್ಸಾದರೂ ಮೇಲಕ್ಕೇರಬೇಕೆಂಬ ವಿಚಾರದಿಂದ ಬಲವತ್ತರವಾಗುತ್ತ ಹೋಗಿ ಕೆಟ್ಟ

---

* ಗುರುವನ್ನು ಧ್ಯೇಯವನ್ನಾಗಿಟ್ಟುಕೊಳ್ಳುವ ಕ್ರಮವು ಅತ್ಯಂತ ಪ್ರಭಾವಶಾಲಿ ಯಾದುದೇನೋ ನಿಜ. ಆದರೆ ಆತನು ನಿಜವಾಗಿಯೂ ಅತ್ಯುಚ್ಚಕೋಟಿಯವನಾಗಿದ್ದು ಅನಂತದಲ್ಲಿ ಲೀನನಾಗಿರಬೇಕು ಅಥವಾ ಮೂರ್ತಿಮಂತ ನಿಸರ್ಗವಾಗಿ ಪರಿವರ್ತನೆ ಹೊಂದಿರಬೇಕು. ಇಲ್ಲದಿದ್ದರ ಅಭ್ಯಾಸಿಯ ಮೇಲೆ ವಿಪರೀತ ಪರಿಣಾಮವುಂಟಾಗಿ ಆತನ ಅಂತಿಮ ಧ್ಯೇಯ ಸಾಧನೆಗೆ ಮಾರಕವಾಗುವುದು.

ತರಬೇತಿಯ ಪರಿಣಾಮವನ್ನು ಕಳೆದುಕೊಳ್ಳುವುದು. ಇದು ಎರಡು ಪ್ರಯೋಜನಗಳನ್ನು ಸಾಧಿಸುವುದು; ಮೊದಲನೆಯದಾಗಿ ಇದು ವ್ಯಷ್ಟಿ ಮನಸ್ಸನ್ನು ಶುದ್ಧಮಾಡುವುದು; ಎರಡನೆಯದಾಗಿ ಮಾನವ ಜೀವನದ ಗುರಿಯನ್ನು ಸಮೀಪಗೊಳಿಸುವುದು.

ಈ ಹಂತವನ್ನು ಮುಟ್ಟಿದ ಮೇಲೆ ಶೀಘ್ರದಲ್ಲಿಯೇ ನೀವು ಶಾಶ್ವತ ಶಾಂತಿಯ ಹಾಗೂ ಉದಾತ್ತತೆಯ ಸಮುದ್ರದಲ್ಲಿ ಕುಪ್ಪಳಿಸುತ್ತಿರುವಂತೆ ಅನುಭವಿಸುವಿರಿ. ನಿಮ್ಮ ವಿಚಾರವು ಸಾಗರದ ತೆರೆಗಳ ಮಧ್ಯದಲ್ಲಿ ಅಖಂಡ ವಾಗಿ ನೆಲಸತೊಡಗಿದಾಗ ಕೆಳಮಟ್ಟದಲ್ಲಿರುವ ಉಳಿದೆಲ್ಲ ವಸ್ತುಗಳು ಮಾಯ ವಾಗುವಂತೆ ಕಂಡುಬರುವುದು. ಆಗ ನಿಮ್ಮಲ್ಲಿ ಈ ಮೊದಲೇ ನೀವು ಮಾಡಿ ಕೊಂಡ ಆ ವೊಂದು ವಿಚಾರವನ್ನುಳಿದು ಬೇರಾವ ವಿಚಾರವೂ ಇರುವುದಿಲ್ಲ. ಇದರ ಪರಿಣಾಮವೆಂದರೆ ಅಡಿಯಲ್ಲಿರುವ ವಸ್ತುಗಳೆಲ್ಲ, ಉನ್ನತ ಶಿಖರದಿಂದ ಆಳವಾದ ಪ್ರಪಾತದಲ್ಲಿ ನೋಡಿದರೆ ಹೇಗೋ ಹಾಗೆ ಕಂಡುಬರುವವು. ಆ ವಸ್ತುಗಳನ್ನು ನೀವು ಕಾಣದಂತಾದಾಗ ಅವುಗಳಲ್ಲಿಯ ಆಸಕ್ತಿಯು ಇಲ್ಲದಂತಾಗುವುದು. ಕಟ್ಟಕಡೆಗೆ ಗುರಿಯು ಕಣ್ಣಿಗೆ ನಿಚ್ಚಳವಾಗಿ ಕಾಣತೊಡಗಿ ನೀವು ನಿಜವಾಗಿಯೂ ನಿರ್ದೋಷವಾಗಿಯೂ ಆರಿಸಿಟ್ಟುಕೊಂಡ ವಸ್ತುವಲ್ಲದೇ ಬೇರೇನೂ ಉಳಿಯದು. ಈಗ ನೀವು ಪ್ರಪಂಚದ ಆಸಕ್ತಿಗಳಿಂದ ಮುಕ್ತ ರಾಗಿರುವಿರಿ. ಅರ್ಥಾತ್ ನೀವು ವಸ್ತುಗಳನ್ನು ಕಂಡರೂ ಅವುಗಳಿಗೆ ಮಹತ್ವ ವನ್ನು ಕೊಡುವುದಿಲ್ಲ. ನಿಮ್ಮಲ್ಲಿ ಇಂಥದೇ ವಿಚಾರವಿರುವವರೆಗೆ ಈ ಸ್ಥಿತಿಯು ಕೆಲಕಾಲ ಉಳಿಯುವುದು. ಕಾಲಕಳೆದಂತೆ, ನೀವು ಮಲಗಿದ ಮನುಷ್ಯನು ತುರಿಯುವ ಅನುಭವವನ್ನು ನಿದ್ರೆಯಲ್ಲಿಯೇ ಪೂರ್ಣಮರೆವಿನ ಸ್ಥಿತಿಯಲ್ಲಿ ಶಮನ ಮಾಡಿಕೊಳ್ಳುವಂತೆ, ಸ್ವಾತಂತ್ರ್ಯವನ್ನೂ ಮರೆವನ್ನೂ ಅನುಭವಿಸುವಿರಿ. ವಾದ್ಯ ವೃಂದವು ಬಾರಿಸಲ್ಪಡುವ ಸ್ಥಾನದಿಂದ ದೂರವಿರುವ ಮನುಷ್ಯನು ಆ ಸಪ್ಪಳವನ್ನು ಕೇಳಲಾರನು. ಅದೇ ಸಮೀಪದಲ್ಲಿ ನಿಂತಿರುವ ಮನುಷ್ಯನಾದರೂ ತನ್ನ ವಿಚಾರದಲ್ಲಿಯೇ ಆಳವಾಗಿ ಮಗ್ನನಾಗಿದ್ದರೆ ಅದನ್ನು ಕೇಳಲಾರನು. ಆತನು ತಾನು ವಾದ್ಯದೊಡನೆ ಇರುವಂತೆ ಅನುಭವಿಸದೆ ತನ್ನ ಸಾತ್ತ್ವಿಕ ವಿಚಾರದಲ್ಲಿರುವಂತೆ ಅನುಭವಿಸುವನು. ಈ ಸ್ಥಿತಿಯನ್ನು ಅವನು ಹೇಗೆ

ಸಂಪಾದಿಸಿದ? ಇದಕ್ಕೆ ಉತ್ತರವೆಂದರೆ, ಮೊದಲೇ ಹೇಳಿದಂತೆ ಅವನು ಅತ್ಯಂತ ಮಹತ್ತ್ವದ್ದೆನಿಸುವ ಯಾವುದೋ ಒಂದು ವಿಷಯದಲ್ಲಿ ಮಗ್ನನಾಗಿರುತ್ತಾನೆ. ಆಗ ಸ್ವಾಭಾವಿಕವಾಗಿ, ಮುಖ್ಯವಲ್ಲದ ವಿಷಯಗಳೆಲ್ಲ ಆತನ ಮೇಲೆ ಪರಿಣಾಮವನ್ನುಂಟು ಮಾಡಲಾರವು. ಇದೇ ವೈರಾಗ್ಯದ ಸ್ಥಿತಿ. * ಪ್ರಾಪಂಚಿಕ ವಸ್ತುಗಳ ಬಗೆಗೆ ಆತನು ಅನುಭವಿಸುವ ಅನಾಸಕ್ತಿಯು ಆತನ ಹೃದಯದ ಮೇಲೆ ಅಮುಖ್ಯ ಸ್ವಭಾವದ ವಿಷಯಗಳ ಸಂಸ್ಕಾರವಾಗಲು ಎಡೆಗೊಡುವುದಿಲ್ಲ. ಅಭ್ಯಾಸಿಗೆ ತನ್ನಲ್ಲಿಯೇ ಇರುವ ಲಕ್ಷ್ಯವನ್ನು ಶೋಧಿಸುವುದೊಂದೇ ಮುಖ್ಯ ವಿಷಯವಾಗಿರುತ್ತದೆ. ವೈರಾಗ್ಯವನ್ನು ಸಂಪಾದಿಸಲು ಅನೇಕ ಜನರು ಅತ್ಯಂತ ಪ್ರಯಾಸ ಪಡುತ್ತಿರುವರು. ಅದರ ಪ್ರಾಪ್ತಿಯು ಎಷ್ಟು ಸುಲಭ! ಆತನಿಗೆ ತನ್ನ ಲಕ್ಷ್ಯ ವನ್ನುಳಿದು ಬೇರೆ ಯಾವ ವಿಚಾರವೂ ಇಲ್ಲವಾದುದರಿಂದ ಇಟ್ಟುಕೊಳ್ಳಲು ಅಯೋಗ್ಯವಾದುದೆಲ್ಲವನ್ನೂ ಆತನು ಕಳೆದುಕೊಂಡಿದ್ದಾನೆ.

ರಾಜಯೋಗದ ಆರಂಭದ ಅಭ್ಯಾಸದಿಂದಲೇ ನೀವು ವೈರಾಗ್ಯವನ್ನು ಸಂಪಾದಿಸಿದಿರಿ. ನಿಮ್ಮ ಮನಸ್ಸು ಈಗ ಒಂದು ರೀತಿಯಿಂದ ಶಾಶ್ವತವಾದ ಸುಖ-ಶಾಂತಿಗಳ ಕ್ಷೇತ್ರಕ್ಕೆ ಹೊಂದಿಕೊಂಡಿದೆ. ಬೇರೆ ಶಬ್ದಗಳಲ್ಲಿ ಹೇಳುವು ದಾದರೆ, ನೀವು ನಿಮ್ಮ ವ್ಯಷ್ಟಿ ಮನಸ್ಸಿನಿಂದ ಉನ್ನತ ಕ್ಷೇತ್ರದೆಡೆಗೆ ದಾರಿ ಮಾಡಿರುವಿರಿ. ಸರ್ವಶಕ್ತನ ರಾಜ್ಯದಲ್ಲಿಯ ಶಾಂತಿಯ ಸೌಮ್ಯ ತೆರೆಗಳು ವ್ಯಷ್ಟಿ ಮನಸ್ಸಿನ ಕಡೆಗೆ ನೇರವಾಗಿ ಹರಿದು ಬರುವುದರಿಂದ ಕಾಲಕ್ರಮದಲ್ಲಿ ನೀವು ಆ ಶಾಂತಿಯೊಂದಿಗೆ ಬೆರೆತು ಹೋಗುವಿರಿ.

---

* ಇಂದು ಸಾಮಾನ್ಯವಾಗಿ ವೈರಾಗ್ಯವೆಂದರೆ ಕೇವಲ ತೋರಿಕೆಯ ಸಂನ್ಯಾಸ್ಯ ಪ್ರಪಂಚದ ಎಲ್ಲ ಸಂಬಂಧಗಳಿಂದಲೂ ದೂರವಾಗಿರುವುದು ಹಾಗೂ ಜೀವನದ ಕರ್ತವ್ಯಗಳನ್ನು ಪರಿಗಣಿಸದೆ ಇರುವುದು-ಎಂಬ ಭಾವನೆಯಾಗಿದೆ. ಒತ್ತಾಯದ ಬಾಹ್ಯ ವಿರಕ್ತಿಯಾಗಲಿ, ಪ್ರಾಪಂಚಿಕ ವಸ್ತುಗಳ ಬಗ್ಗೆ ತಿರಸ್ಕಾರವಾಗಲಿ ಜಿಗುಪ್ಸೆಯಾಗಲಿ ಅಥವಾ ಇನ್ನೇನಾದರೂ ಆಗಲಿ ವೈರಾಗ್ಯವಲ್ಲ. ಅದು ನಮ್ಮ ಸ್ವಾಭಾವಿಕ ಜೀವನಕ್ಕೆ ಅನಾವಶ್ಯಕವಾದ ವಸ್ತುಗಳಿಂದ ನಮ್ಮ ಹೃದಯವನ್ನು ತಿರುಗಿಸುವ ಋಜುವಾದ ಅಂತರಾನುಭವ. ಹೀಗೆ ಒಬ್ಬ ಸಾಮಾನ್ಯ ಮನುಷ್ಯನು ಕೂಡಾ ಪ್ರಾಪಂಚಿಕ ಜೀವನವನ್ನು ಸಾಗಿಸುತ್ತ ತನಗೆ ಅವಶ್ಯಕವಾದ ವಸ್ತುಗಳನ್ನು ಬಳಸುತ್ತ ದೈನಂದಿನ ಜೀವನದಲ್ಲಿಯೇ ವೈರಾಗ್ಯವನ್ನು ಸಂಪಾದಿಸಬಲ್ಲನು.

ನಾವು ನಮ್ಮ ಕಲ್ಪನೆಗೂ ಮೀರಿದ ಒಂದೇ ಒಂದು ವಸ್ತುವಿನಲ್ಲಿ ಅನುರಕ್ತರಾಗುತ್ತ ಅದೊಂದರ ಚಿಂತನೆಯನ್ನೇ ಮಾಡಿದೆವು. ಈಗ ನಮ್ಮ ಹೃದಯದಲ್ಲಿ ಅದರ ಹಿರಿಮೆಯ ಕಲ್ಪನೆಯಿದೆ. ಸ್ವಾಭಾವಿಕವಾಗಿ ನಮ್ಮನ್ನು ನಾವು ಅದರ ಭಾಗವೆಂದೋ ಇಲ್ಲವೇ ಅದರೊಂದಿಗೆ ಹೋಲಿಸಿದಾಗ ಒಂದು ಕ್ಷುದ್ರ ವಸ್ತುವೆಂದೋ ತಿಳಿಯುವೆವು. ಹೀಗೆ ನಾವು ಪುನಃಪುನಃ ಭಾವಿಸುವೆವು. ನಾವೀಗ ಸಾಕ್ಷಾತ್ಕಾರದ ಆ ಉನ್ನತ ವಲಯದೊಂದಿಗೆ ನಮ್ಮ ವಿಚಾರವನ್ನು ಜೋಡಿಸಿ ಒಂದು ದಾರಿಯನ್ನು ಮಾಡಿದ್ದೇವೆ. ಇದನ್ನು ನಾವು ಅಭ್ಯಾಸ ಮಾಡಿದಂತೆ ಮಲಿನತೆಯ ಕಾರ್ಮೋಡಗಳು ಚೆದುರತೊಡಗಿ ನಮ್ಮ ಇಚ್ಛಾ ಶಕ್ತಿಯಿಂದ ಒಂದು ತರದ ನಿರ್ವಾತ ಪ್ರದೇಶವು ನಿರ್ಮಾಣವಾಗುವುದು. ಅನಂತರ ಆ ಶಕ್ತಿಯು ಹೆಚ್ಚಿನ ಪ್ರಮಾಣದಲ್ಲಿ ಒಳಗೆ ಹರಿದು ಬರಲಾರಂಭಿ ಸುವುದು; ಪರಿಣಾಮ ಸ್ವರೂಪವಾಗಿ ವೈಯಕ್ತಿಕತೆಯು ಹೊರಟು ಹೋಗಿ ಮನಸ್ಸು ಮಾತ್ರ ಉಳಿಯುವುದು. ಮನಸ್ಸು ತನ್ನನ್ನು ದೈವೀ ಮನಸ್ಸಿನಿಂದ ಬೇರ್ಪಡಿಸಿಕೊಂಡಾಗ ವ್ಯಷ್ಟಿಮನಸ್ಸೆಂದೆನಿಸಿಕೊಳ್ಳುವುದು. ಅದು ಬೇರ್ಪಟ್ಟಂತೆ ನಾವು ಅನುಭವಿಸುವ ಕಾರಣವೇನು? ಏಕೆಂದರೆ ನಮ್ಮ ಕರ್ಮಗಳಿಂದ ಮತ್ತು ನಾವು ತಪ್ಪುದಾರಿ ಹಿಡಿದುದರಿಂದ ಆ ಪರಾ ಮನಸ್ಸಿನ ಕಾರ್ಯಗಳು ಅದರ ಮೇಲೆ ನಡೆಯದಂತಾಗುವವು. ಅದು ಪ್ರಾಪಂಚಿಕ ವಸ್ತುಗಳಿಂದ ಎಷ್ಟರಮಟ್ಟಿಗೆ ತುಂಬಿಹೋಗುವುದೆಂದರೆ ನಾವು ಕೇವಲ ಇವುಗಳ ಪ್ರಭಾವ ವನ್ನೇ ಅನುಭವಿಸುವೆವೇ ಹೊರತು ಸತ್ಯವಸ್ತುವನ್ನಲ್ಲ. ಈ ಸಂಸ್ಕಾರಗಳು ನಮ್ಮ ಇಂದ್ರಿಯಗಳ ಮೇಲೆ ಅಧಿಕಾರ ನಡೆಸುವಷ್ಟು ಪ್ರಬಲವಾಗುವವು. ಅದರ ಮೇಲೆ ಪರಿಸರವೂ ಪ್ರಭಾವ ಬೀರುವುದು ಎಂಬುದರಲ್ಲಿ ಸಂದೇಹ ವಿಲ್ಲ. ಈಗ, ನಾವು ಆ ಮುಖ್ಯ ಸಾತ್ವಿಕ ವಿಚಾರಕ್ಕೆ ನಮ್ಮ ಮನಸ್ಸಿನಲ್ಲಿ ಎಡೆಗೊಟ್ಟರೆ ನಾವು ಮಾಡಿಕೊಂಡ ಸಂಸ್ಕಾರಗಳು ತಮ್ಮ ಸ್ಥೂಲತೆಯನ್ನು ಕಳೆದುಕೊಳ್ಳುವವು. ಕಾಲಕ್ರಮದಲ್ಲಿ ನಾವು ಇವುಗಳಿಂದ ಮುಕ್ತರಾಗುವೆವು. ಆಗ ಪರಾಮನಸ್ಸಿನಲ್ಲಿರುವುದರ ಪರಿಣಾಮವು ಸಹ ಅನುಭವಕ್ಕೆ ಬರುವುದು. ನೀವು ಅಭ್ಯಾಸವನ್ನು ಮುಂದುವರಿಸಿದರೆ ಮೇಲಿನ ಮಟ್ಟದಲ್ಲಿ ಏನಿರುವುದೋ ಅದೇ ನಿಮ್ಮ ವ್ಯಷ್ಟಿ ಮನಸ್ಸಿನ ಅನುಭವಕ್ಕೆ ಬರುವುದು. ನಿಮ್ಮ ಮನಸ್ಸಿನಲ್ಲಿ

ಈ ಅನುಭವಗಳು ಸ್ಥಾಯಿಯಾದಾಗ ನೀವು ಅದರ ವೈಯಕ್ತಿಕತೆಯನ್ನು ಕಳೆದು ಬಿಟ್ಟಿರುವರೆಂದು ತಿಳಿಯಿರಿ. ಸೃಷ್ಟಿಯ ಕಾಲವೊದಗಿದಾಗ ಕೇಂದ್ರದ ಅಡಿಯಲ್ಲಿರುವ ಗುಪ್ತ ಚಲನವು ಬಲಪಟ್ಟು ಕ್ಷೋಭವನ್ನುಂಟು ಮಾಡಿತು. ಅನಂತರ ಅದೇ ವಿಶ್ವದ ರಚನೆಗೆ ದಾರಿಮಾಡಿಕೊಟ್ಟಿತು. ಅದನ್ನು ಆ ಸರ್ವಶಕ್ತನ ಆದಿಮನಸ್ಸೆಂದಾಗಲಿ ಪರಾಮನಸ್ಸೆಂದಾಗಲಿ ಹೇಳಬಹುದು. ನಾವು ನಮ್ಮ ಅಸ್ತಿತ್ವಕ್ಕಾಗಿ ಆ ಪರಾಮನಸ್ಸಿಗೇ ಋಣಿಯಾಗಿರುವೆವು. ಆ ಆದಿಮನದ ಹಿಂದುಗಡೆ ಕೇಂದ್ರ ಅಥವಾ 'ತಮ'ದ ಅವಸ್ಥೆಯಿದೆ. ಇದನ್ನು ನಾನು ನನ್ನ 'ಸಹಜ ಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ'ವೆಂಬ ಪುಸ್ತಕದಲ್ಲಿ ವಿಶದವಾಗಿ ವಿವರಿಸಿದ್ದೇನೆ. ನೀವು ನಿಮ್ಮ ವ್ಯಷ್ಟಿ ಮನಸ್ಸನ್ನು ಪರಾಮನಸ್ಸಿನ ಮಟ್ಟಕ್ಕೆ ತಂದುದಾದರೆ, ಮುಂದೆ, ಅದರ ಮೇಲಿರುವ ಕೇಂದ್ರದೆಡೆಗೆ ಅಥವಾ ಸರ್ವಶಕ್ತನೆಡೆಗೆ ಜಿಗಿಯುವುದಷ್ಟೇ ಉಳಿಯುವುದು. ಆ ಸ್ಥಿತಿಯೊಂದಿಗೆ ನೀವು ಸಾಮರಸ್ಯವನ್ನನುಭವಿಸಿದಾಗ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಂತೆ ಅಲ್ಲಿ ನೀವು ಕೇವಲ ಈಜಾಡುವಿರಿ. ಅದರ ಅಂತವನ್ನು ಯಾರೂ ಅರಿಯರು. ಈ ಸ್ಥಿತಿಯು ನಿಮ್ಮಲ್ಲಿ ಉಂಟಾದಾಗ ನೀವು ಸರ್ವತ್ರ ಶಾಂತಿ, ಸಮತೆ, ಸರಳತೆಗಳನ್ನನುಭವಿಸುವಿರಿ. ನೀವು ಈ ಸ್ಥಿತಿಯಲ್ಲಿ ನಿರಂತರವಾಗಿ ಇರತೊಡಗಿದರೆ ಈ ಮೂರು ಇಲ್ಲದಂತಾಗುವವು. ಅರ್ಥಾತ್ ಈ ವಸ್ತುಗಳ ಸಂಸ್ಕಾರಗಳು ಸಹ ನಿಮ್ಮಲ್ಲಿ ಇಲ್ಲವೆಂದಾಯಿತು. ಈಗ ಐಕ್ಯವು ತಾನೇ ತಾನಾಗಿದೆ. ಪ್ರಾರಂಭದ ಅಭ್ಯಾಸದಿಂದ ನಾವು ಇಷ್ಟೆಲ್ಲವನ್ನು ಪಡೆಯುವೆವು. ಹೀಗಿದೆ ಈ ಪದ್ಧತಿಯ ಪ್ರಭಾವ. ಬೇಕಾದರೆ ಅಭ್ಯಾಸ ಮಾಡಿನೋಡಿರಿ.

ಸಾಮಾನ್ಯವಾಗಿ ನಾವು ತೋರಿಕೆಗೆ ಮಾನವ ರೂಪದ ಧ್ಯಾನವನ್ನು ಕುರಿತು ಒತ್ತಿ ಹೇಳುವೆವು. ಆಧ್ಯಾತ್ಮಿಕ ಭಾವಗಳಿಗೆ ಇದು ಘಾತುಕ ವಾದುದೆಂದು ವಿಮರ್ಶಕರು ತಿಳಿಯಬಹುದು. ಆದರೆ ಧ್ಯೇಯ ವ್ಯಕ್ತಿಯು ಅಸಾಧಾರಣ ಯೋಗ್ಯತೆಯವನಿದ್ದು ಆಧ್ಯಾತ್ಮಿಕ ತರಬೇತಿಗಾಗಿ ಕೇವಲ ನಿರ್ಗುಣದಿಂದ ಕೆಳಗಿಳಿದವನಾಗಲಿ, ಪರಾಕಾಷ್ಠೆಯ ಸ್ವಪ್ರಯತ್ನದಿಂದ ಈ ಕಾರ್ಯಕ್ಕೆ ಬೇಕಾಗುವ ಆಧ್ಯಾತ್ಮಿಕ ವಿಕಾಸದ ಮಟ್ಟವನ್ನು ಮುಟ್ಟಿದವ ನಾಗಲಿ ಆಗಿದ್ದರೆ ಏನೂ ಬಾಧಕವಾಗಲಾರದು. ಉದಾಹರಣೆಗಾಗಿ

ನಾನು ನಮ್ಮ ಸಮರ್ಥ ಗುರುಗಳಾದ ಫತೆಹ್‌ಗಡದ ಮಹಾತ್ಮಾ ರಾಮಚಂದ್ರಜಿಯವರ ಹೆಸರನ್ನು ತೆಗೆದುಕೊಳ್ಳುವೆನು. ಈ ಮಾತು ಶೀಘ್ರದಲ್ಲಿಯೇ ಬೆಳಕಿಗೆ ಬರುವುದಲ್ಲದೆ ಜಗತ್ತು ಅವರನ್ನು ಎಂದೆಂದಿಗೂ ಸ್ಮರಿಸುವಂಥ ಕಾಲ ಬರುವುದು. ಅವರು ನಿಸರ್ಗದೊಡನೆ ಪೂರ್ಣ ಸಮರಸವಾಗಿದ್ದರು. ಇಂಥ ಮಹಾತ್ಮರ ಮೇಲೆ ಧ್ಯಾನ ಮಾಡಿದ್ದಾದರೆ ನಾವು ಅರಸುತ್ತಿರುವ ವಸ್ತುವು ತಾನಾಗಿಯೇ ದೊರಕುವುದು. ರೇಖಾಗಣಿತದ ಪ್ರಕಾರ 'ಅ'ವು 'ಬ'ಗೆ ಸಮಾನವಾಗಿದ್ದು 'ಕ'ವು 'ಅ'ಗೆ ಸಮಾನವಾದರೆ ಅದು 'ಬ'ದೊಂದಿಗೂ ಸಮವಾದಂತಾಯಿತು. ಇಂಥ ಗುರುವನ್ನು ನಿಮ್ಮ ಮಾರ್ಗದರ್ಶಿಯಾಗಿ ಪಡೆದುದಾದರೆ ಜೀವನದ ಸಮಸ್ಯೆಯು ಸಹಜವಾಗಿಯೆ ಪರಿಹಾರವಾಗುವುದು. ಇದಕ್ಕೊಂದು ಉದಾಹರಣೆಯನ್ನು ಕೊಡುವೆನು. ಅರ್ಜುನನು ಶ್ರೀಕೃಷ್ಣನನ್ನು ಕುರಿತು, 'ನಿನ್ನನ್ನು ಪೂಜಿಸುವವರು ಹಾಗೂ ಅವ್ಯಕ್ತವನ್ನು ಪೂಜಿಸುವವರು ಇವರಲ್ಲಿ ಯಾರು ಶ್ರೇಷ್ಠಯೋಗಿಗಳು?' ಎಂದು ಕೇಳಿದನು. ಶ್ರೀಕೃಷ್ಣನು ಹೇಳಿದ: 'ಯಾರು ನನ್ನನ್ನು ಅತ್ಯಂತ ಶ್ರದ್ಧೆಯಿಂದ ಸತತವಾಗಿ ಪೂಜಿಸುವರೋ ಅವರೇ ಶ್ರೇಷ್ಠಯೋಗಿಗಳು. ಸರ್ವಶಕ್ತವೂ ಸರ್ವವ್ಯಾಪಿಯೂ ಸರ್ವಜ್ಞವೂ ಆದಿಅವ್ಯಕ್ತ ಕೇವಲವನ್ನು ಆಶ್ರಯಿಸಿ ಪೂಜಿಸುವವರ ಪರಿಶ್ರಮವು ಹೆಚ್ಚಿನದಾಗಿದೆ. ಏಕೆಂದರೆ ವಸ್ತುತಃ ದೇಹಧಾರಿಗಳಿಗೆ ಸ್ವಪ್ರಯತ್ನದಿಂದ ಆ ದಾರಿಯಲ್ಲಿ ನಡೆಯುವುದು ಬಲು ಕಠಿಣವಾದುದು' ನಾವು ಇಂಥ ಮಹಾತ್ಮನನ್ನು ಧ್ಯೇಯವನ್ನಾಗಿರಿಸಿಕೊಂಡು ಆತನನ್ನು ಪ್ರೀತಿಸತೊಡಗಿದಾಗ ಆತನ ಮೂಲಕ ದೈವೀಶಕ್ತಿಯು ಹರಿದು ಬರಲಾರಂಭಿಸುವುದು; ಏಕೆಂದರೆ, ಮಹಾತ್ಮರು ಇಂಥ ಶಕ್ತಿಗಳನ್ನು ಪಡೆದಿರುವರು. ನಮ್ಮ ಅಕಾರ್ಯಗಳಿಂದಲೇ ಕಲುಷಿತಗೊಳಿಸಲ್ಪಟ್ಟ ನಮ್ಮ ವ್ಯಕ್ತಿಗಳು ಹಾಗೂ ಭಾವೋದ್ವೇಗಗಳು ತಮ್ಮ ಮೂಲರೂಪಕ್ಕೆ ಬರತೊಡಗಿ ಉದಾತ್ತತೆಯನ್ನು ಹೊಂದುವವು. ಮೂಲರೂಪ ವೆಂದರೆ, 'ಮೊಟ್ಟಮೊದಲು ಮಾನವ ದೇಹವನ್ನು ಧರಿಸುವಾಗ ಹೇಗಿದ್ದವೋ ಹಾಗೆಂದು' ಇಲ್ಲಿ ನನ್ನ ವಿವಕ್ಷೆ. ನಮ್ಮ ಕಾರ್ಯಗಳೆಲ್ಲ ಅನಿಯಂತ್ರಿತವಾಗಿ ಮನಸ್ಸು ಅಶಿಕ್ಷಿತವಾಗಿ ರುವುದರಿಂದ ನಾವು ಗುರುವೆಂಬ ಮಹಾತ್ಮನ ಆಶ್ರಯವನ್ನು ಹುಡುಕುವೆವು.

***

# ಧ್ಯಾನ

ರಾಜಯೋಗದಲ್ಲಿ ಸಾಮಾನ್ಯವಾಗಿ ನಾವು ಧ್ಯಾನದಿಂದ ಆರಂಭ ಮಾಡುವೆವು. ಇದಕ್ಕೊಂದು ದೊಡ್ಡ ತಾತ್ತ್ವಿಕ ತಳಹದಿಯಿದೆ. ನಾವು ಯಾವಾಗಲೂ ಪ್ರಾಪಂಚಿಕ ವಿಷಯಗಳಲ್ಲಿ ತೊಡಗಿರುವೆವು. ನಮಗೆ ಕೆಲಸವಿಲ್ಲದಾಗ ನಮ್ಮ ವಿಚಾರಗಳಿಗೆ ರೆಕ್ಕೆ ಮೂಡಿದಂತಾಗುವುದು. ನಾವು ಯಾವಾಗಲೂ ಗೊಂದಲ ಹಾಗೂ ಅವ್ಯವಸ್ಥೆಯಲ್ಲಿರುವೆವು. ನಮ್ಮ ವ್ಯಕ್ತಿಗತ ಮನಸ್ಸು ಈ ಸ್ಥಿತಿಗೆ ಹೊಂದಿಕೊಂಡಿರುವುದು. ಈ ಪ್ರಕಾರ ನಾವು ಎಲ್ಲವನ್ನೂ ತಿರುವುಮುರುವು ಮಾಡಿದ್ದೇವೆ. ನಮ್ಮ ಕೃತಿಗಳು ಹಾಗೂ ವಿಚಾರಗಳು ಈ ವಿಪರ್ಯಾಸದಲ್ಲಿ ಬಹುಮಟ್ಟಿಗೆ ಕಾರಣವಾಗಿವೆ. ನಾವು ವಿವಿಧ ವಿಚಾರಗಳ ಮತ್ತು ಕಲ್ಪನೆಗಳ ಸಂಪರ್ಕದಲ್ಲಿದ್ದಾಗ ಅವು ನಮ್ಮ ಇಂದ್ರಿಯಗಳ ಹಾಗೂ ಭಾವನೆಗಳ ಮೇಲೆ ಸಂಸ್ಕಾರಗಳನ್ನುಂಟುಮಾಡುವವು. ಆಗ ಎಲ್ಲ ಇಂದ್ರಿಯಗಳೂ ಕೆಟ್ಟುಹೋಗಿ ತಪ್ಪು ದಾರಿಯನ್ನು ಹಿಡಿಯುವವು. ಈ ಅಭ್ಯಾಸವು ಬಹುಕಾಲದವರೆಗೆ ಮುಂದುವರಿದರೆ ನಾವು ಅವನ್ನು ಮತ್ತಷ್ಟು ಕೆಡಿಸುವೆವು. ಹೀಗೆ ನಾವು ಇಂದ್ರಿಯಗಳ ಹಾಗೂ ಸಂವೇದನೆಗಳ ಮೇಲೆ ಉಂಟುಮಾಡಿದ ಸಂಸ್ಕಾರವು ಅವನ್ನು ಬಂಡೆಗಲ್ಲಿನಂತೆ ಗಟ್ಟಿಮಾಡಿ ನಿರ್ಬೋಧಗೊಳಿಸುವವು. ಆತ್ಮವೇನೋ ಅಲಿಪ್ತವಾಗಿಯೇ ಇರುವುದು. ಆದರೆ ನಾವೇ ಉಂಟುಮಾಡಿದ ಇಂಥ ಅಡ್ಡಿ–ಆವರಣಗಳು ರೇಶ್ಮೆಹುಳದ ಗೂಡಿನಂತೆ ಅದನ್ನು ಆವರಿಸುವವು. ಅನಂತರ ಏನಾಗುವುದು ? ನಾವು ಆತ್ಮದ ಕಡೆಗೆ ಇಣಿಕಿ ಕೂಡ ನೋಡಲಾಗುವುದಿಲ್ಲ; ಸಾಕ್ಷಾತ್ಕಾರವಂತೂ ದೂರದ ಮಾತಾಯಿತು. ನಮ್ಮ ದುರ್ವಿಚಾರಗಳ ಹಾಗೂ ದುರಾಚಾರಗಳ ಪರಿಣಾಮದಿಂದಾಗಿ ನಾವು ನಮ್ಮ ವಿವೇಕಬುದ್ಧಿಯನ್ನೂ ಯಥಾರ್ಥಜ್ಞಾನವನ್ನೂ ಕೆಡಿಸಿಬಿಡುವೆವು. ಮೇಲೆ ಹೇಳಿದಂತೆ ಇಂಥ ಜಡಸ್ಥಿತಿಯನ್ನು ಹೊಂದಿದವರಿಗೆ ರಾಜಯೋಗದ ಶಿಕ್ಷಣ ಪದ್ಧತಿಯು ಹಿಡಿಸುವದಿಲ್ಲ. ಆದುದರಿಂದಲೇ ನಾವು ಹೇಳುವುದರ ಕಡೆಗೆ ಜನರು ಕಿವಿಗೊಡುವುದಿಲ್ಲ. ಸತ್ಯವನ್ನು ಪಡೆ

ಯುವುದಕ್ಕಾಗಿ ಅವರು ದೃಢನಿರ್ಧಾರ ಮಾಡಿದುದಾದರೆ ಗುರುದೇವರ ಶಕ್ತಿಯು ಅವರಲ್ಲಿ ಪರಿಣಾಮವನ್ನುಂಟು ಮಾಡುವುದು. ಅಲ್ಲದೆ, ಯೌಗಿಕ ಪ್ರಾಣಾಹುತಿಯ ಬಲದಿಂದ ಅಭ್ಯಾಸಿಯಲ್ಲಿಯ ಆಂತರಿಕ ತೊಡಕುಗಳನ್ನು ದೂರಮಾಡಿ ಆವರಣಗಳನ್ನು ಭೇದಿಸಲು ಸಮರ್ಥನಿರುವ ಗುರುವಿನ ಸಹಾಯದಿಂದಲೇ ಸ್ಥೂಲತೆಯು ನಿರ್ಮೂಲವಾಗಬಲ್ಲದು. ಅಭ್ಯಾಸಿಗೆ ಏಕಾಗ್ರತೆಗಾಗಿ ಹಲವು ಬಿಂದುಗಳ ಮೇಲೆ ಧ್ಯಾನ ಮಾಡಲು ಹೇಳ ಲಾಗುತ್ತದೆ. ಅವನ್ನು ಚಕ್ರಗಳೆಂದೂ ಅಲಂಕಾರಿಕವಾಗಿ ಪದ್ಮಗಳೆಂದೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ನಾವು ಧ್ಯಾನಕ್ಕಾಗಿ ಹೃದಯವನ್ನು ತೆಗೆದುಕೊಳ್ಳುತ್ತೇವೆ. ಹೃದಯವು ರಕ್ತವನ್ನು ಪೂರೈಸುವ ಕೇಂದ್ರಸ್ಥಾನವಾಗಿದೆ. ಅದು ರಕ್ತವನ್ನು ಶುದ್ಧಗೊಳಿಸಿ ದೇಹದ ಬೇರೆ ಬೇರೆ ನರಗಳಿಗೂ ಜೀವಕೋಶ ಗಳಿಗೂ ಮುಟ್ಟಿಸುವುದು. ಈಗ, ನಾವು ಹೃದಯವನ್ನು ಧ್ಯಾನದ ಕೇಂದ್ರ ವನ್ನಾಗಿ ತೆಗೆದುಕೊಂಡುದರಿಂದ ನಮ್ಮ ಶರೀರದೊಳಗೆಲ್ಲ ಹರಿಯುವ ರಕ್ತದ ಮೇಲೆ ಪರಿಣಾಮವಾಗುವುದು. ನಮ್ಮವೇ ಆದ ವಿಚಾರಗಳ ಹಾಗೂ ಕೃತಿಗಳ ಪರಿಣಾಮ ಸ್ವರೂಪವಾಗಿ ಉಂಟಾದ ಸ್ಥೂಲತೆಯು ಕರಗಲಾರಂಭಿಸುವುದು. ಈ ಪದ್ಧತಿಯಂತೆ ಹೃದಯದ ಮೇಲೆ ಧ್ಯಾನ ಮಾಡತೊಡಗಿದ ಮೊದಲ ದಿನ ದಿಂದಲೇ ನಮಗೆ ಈ ಲಾಭವು ದೊರೆಯಲಾರಂಭಿಸುವುದು. ರಾಜಯೋಗದ ಮೊದಲನೆಯ ಹಂತದಲ್ಲಿಯೇ ಧ್ಯಾನದಿಂದ ಸಾಗುವುದರ ಅಗತ್ಯವೇನೆಂದು ಜನರು ಕೇಳಬಹುದು. ಉತ್ತರವು ತೀರ ಸರಳ ಮತ್ತು ಸ್ಪಷ್ಟವಾಗಿದೆ. ನಮ್ಮ ವೈಯಕ್ತಿಕ ಮನಸ್ಸಿಗೆ ರೂಢಿಯಾದ ಚಾಂಚಲ್ಯವು ತೊಲಗಬೇಕೆಂಬ ದೃಷ್ಟಿ ಯಿಂದ ನಾವು ಒಂದು ಬಿಂದುವಿನ ಕಡೆಗೆ ನಮ್ಮನ್ನು ಸಂಗ್ರಹಿಸುತ್ತಿದ್ದೇವೆ. ಈಗ ಅದು ತನ್ನ ಸ್ವಭಾವವನ್ನು ಬದಲಿಸತೊಡಗಿದ್ದರಿಂದ ಕ್ರಮೇಣ ನಾವು ಈ ಅಭ್ಯಾಸದಿಂದ ಅದನ್ನು ಸರಿಯಾದ ಮಾರ್ಗದಲ್ಲಿ ತೊಡಗಿಸುವೆವು. ಹೀಗಾ ದಾಗ ಸ್ವಾಭಾವಿಕವಾಗಿಯೆ ನಮ್ಮ ವಿಚಾರಗಳು ತಪ್ಪುದಾರಿಗೆ ಹೋಗುವುದಿಲ್ಲ. ನಾವು ಮೊಟ್ಟಮೊದಲು ಸೃಷ್ಟಿಯಲ್ಲಿ ಬಂದಾಗ ಪರಿಪೂರ್ಣರಾಗಿಯೂ ಸರ್ವಶಕ್ತನಾದ ಭಗವಂತನಿಗೆ ತೀರ ಹತ್ತಿರವಾಗಿಯೂ ಇದ್ದೆವೆಂದು

ಹಿಂದೂ ಜನರಲ್ಲಿ ಒಂದು ನಂಬುಗೆಯಿದೆ. ಇದು ನಿಜ. ಕಾಲ ಕಳೆದಂತೆಲ್ಲ ಅವನತಿಯು ಆರಂಭವಾಗಿ ನಾವೀಗ ಮಾನವತೆಯ ಕೆಳಗಿನ ಸ್ತರದಲ್ಲಿ ನಮ್ಮನ್ನು ಕಾಣುತ್ತಿದ್ದೇವೆ. ನಮ್ಮಲ್ಲಿ ಇದನ್ನೆಲ್ಲ ಯಾರು ಉಂಟು ಮಾಡಿದರು? ಬೇರೆ ಯಾರೂ ಅಲ್ಲ, ನಾವೇ. ನಾವೇ ನಮ್ಮನ್ನು ಅವನತಿಯತ್ತ ಒಯ್ದಿವು; ನಾವೇ ನಮ್ಮನ್ನು ದೇವರ ರಾಜ್ಯದಿಂದ ಬಹು ದೂರವಾದ ಅಂಧಕಾರದ ಪ್ರದೇಶದಲ್ಲಿ ಎಸೆದುಕೊಂಡಿದ್ದೇವೆ. ನಮ್ಮ ದುಷ್ಟ ವಿಚಾರಗಳ ಎಳೆಗಳಿಂದ ಬಲೆಯನ್ನು ನಿರ್ಮಿಸಿ ನಾವೇ ಈ ಅನರ್ಥವನ್ನುಂಟು ಮಾಡಿದ್ದೇವೆ. ಈಗ, ನಾವು ಯಾವ ಸ್ಥಿತಿಯಿಂದ ಕೆಳಗಿಳಿದೆವೋ ಆ ಸ್ಥಿತಿಗೆ ಅಪಗಮನದ ಮೂಲಕ ಹೋಗಬೇಕೆಂದಿಚ್ಛಿಸುವೆವು. ಈ ಜಗತ್ತನ್ನು ನಿರ್ಮಿಸುವಾಗ ಆ ಸರ್ವಶಕ್ತನು ತನ್ನ ಸಂಕಲ್ಪ ಶಕ್ತಿಯ ಮೂಲಕ ಕೇಂದ್ರದ ಅಡಿಯಿಂದ ಸೃಷ್ಟಿಕಾರ್ಯವನ್ನು ಪೂರ್ತಿಗೊಳಿಸಲು ಬೇರೆ ಬೇರೆ ರೂಪ ವರ್ಣಗಳಲ್ಲಿ ಜಾಳಿಗೆಯ ಎಳೆಗಳಂತೆ ಸೃಷ್ಟಿಯ ಶಕ್ತಿಗಳನ್ನು ಪ್ರಕಟ ಗೊಳಿಸಿದನು. ಹಾಗೆಯೇ ನಾವಾದರೂ ನಮ್ಮ ಕೇಂದ್ರಶಕ್ತಿಯನ್ನು ಒಂದು ಬಿಂದುವಿನ ಮೇಲೆ ಪ್ರಯೋಗಿಸುವೆವು. ಸೃಷ್ಟಿಯು ಬಾಹ್ಯರೂಪದಲ್ಲಿ ಪ್ರಕಟ ವಾಗುವುದಕ್ಕಿಂತ ಮೊದಲು ಅವನೊಡನೆ ಒಂದಾಗಿದ್ದಿತು. ಸ್ಪಷ್ಟ ವಸ್ತುಗಳು ಮತ್ತೆ ಆತನಲ್ಲಾಗಲಿ (ಈ ಪುಸ್ತಕದಲ್ಲಿ ಮುಂದೆ ಸ್ಪಷ್ಟೀಕರಿಸಲಾಗುವಂತೆ) ಮೂಲಬಿಂದುವೆಂದು ಕರೆಯಲಾದ ಕೇಂದ್ರದಲ್ಲಾಗಲಿ ಲಯವಾಗುವ ವರೆಗೂ ಆತನ ಕೇಂದ್ರದಲ್ಲಿಯೇ ಇರುವನು. ನಾವು ಬೇರೆ ಬೇರೆ ಬಣ್ಣಗಳ ಎಳೆಗಳನ್ನು ಹೆಣೆಯಲಾರಂಭಿಸಿದೆವು ಮತ್ತು ನಾವು ಸದಾ ಅವುಗಳೊಂದಿಗೇ ಇರುವೆವು. ಈಗ, ನಾವು ನಮ್ಮ ಕೇಂದ್ರಕ್ಕೆ ತಿರುಗಿ ಹೋಗಬೇಕೆಂದಿದ್ದೇವೆ. ಅದರ ಸ್ವಾಭಾವಿಕ ಪದ್ಧತಿಯೆಂದರೆ, ಈ ವಸ್ತುಗಳನ್ನೆಲ್ಲ ಮೂಲಬಿಂದುವಿಗೆ ಎಳೆದೊಯ್ಯುವುದು. ನಾವು ಧ್ಯಾನದಲ್ಲಿ ಅದನ್ನೇ ಮಾಡುವೆವು. ಕೆಳಗೆ ಬರುವಾಗ ನಾವು ಪ್ರಳಯದ ಸ್ಥಿತಿಯಲ್ಲಿದ್ದೆವಾದ ಕಾರಣ ನಮ್ಮ ಪ್ರಳಯ ವನ್ನುಂಟು ಮಾಡಲು ಅದೇ ಒಂದು ಬಿಂದುವಿಗೆ ಬರುವೆವು. ಧ್ಯಾನದಿಂದ ನಾವು, ಹೃದಯ ಮಂಡಲದ ಪರಿಸರವನ್ನೆಲ್ಲ ವ್ಯಾಪಿಸುವಂತಹ ಸಂಕಲ್ಪ ವನ್ನು ಹೃದಯದಲ್ಲಿ ಮಾಡುವೆವು. ಅದು ಕ್ರಮೇಣ ವಿಸ್ತಾರವಾಗುತ್ತ

ದೇಹದೊಳಗಿನ ಎಲ್ಲ ಚಕ್ರಗಳಿಗೂ ವ್ಯಾಪಿಸುವುದು. ಈ ಪ್ರಕಾರ ಎಲ್ಲ ಚಕ್ರಗಳೂ ಬೆಳಗಲಾರಂಭಿಸುವವು. ಈ ಸಂಕಲ್ಪ ವಲಯವು ಹಿಗ್ಗುತ್ತ ಅನೇಕ ಮಂಡಲಗಳನ್ನು ದಾಟಿ ತೀರ ಒಳಗಿನ ವೃತ್ತದಲ್ಲಿ ಎಲ್ಲವೂ ಲೀನವಾಗುವ ವರೆಗೂ ಮುಂದುವರೆಯುವುದು. ಅಲ್ಲಿ ನೀವು ಕೆಲವು ವೇಳೆ ಕಣ್ಣು ಕೋರೈಸುವಂಥ ಬೆಳಕನ್ನು ಅನುಭವಿಸುವಿರಿ. ಏಕೆಂದರೆ, ನೀವು ಈಗಿದ್ದ ಕ್ಷೇತ್ರಕ್ಕೆ ಹೃದಯದ ಕಡೆಯಿಂದ ದಾರಿ ಮಾಡುವಿರಿ. ನೀವು ಇನ್ನೂ ಮುಂದುವರಿದಂತೆಲ್ಲ ಆ ಪ್ರಕಾಶವು ಮಂದವಾಗುತ್ತ ನಡೆಯುವುದು. ನೀವು ಮಾಯೆಯ ಬೇರೆ ಬೇರೆ ಸ್ತರಗಳ ಸಂಪರ್ಕದಲ್ಲಿಯೂ ಬರುವಿರಿ. ಕಣ್ಣು ಕುಕ್ಕುವ ಪ್ರಕಾಶವು ಅಲ್ಲಿದೆ. ಅದನ್ನು ದಾಟಿದಾಗ ನೀವು ಪೂರ್ಣ ಪ್ರಶಾಂತ ವಾತಾವರಣದಲ್ಲಿರುವಿರಿ. ಇಲ್ಲಿ ಭಗವಂತನ ರಾಜ್ಯವು ಆರಂಭವಾಗುವುದು. ಅನಂತರ ಅನೇಕಾನೇಕ ಸ್ಥಿತಿಗಳು ಬಂದು ಹೋಗುವವು. 'ಧ್ಯಾನ'ದ ಶೀರ್ಷಿಕೆಯಲ್ಲಿ ಅವುಗಳ ಚರ್ಚೆಯು ಅಪ್ರಸ್ತುತವಾದ ಕಾರಣ ಅವನ್ನು ಬಿಟ್ಟುಕೊಡಲಾಗಿದೆ. ಈಗ ನಿಮ್ಮ ಧ್ಯಾನವು ನಿಮ್ಮನ್ನು ಮುಖ್ಯ ಗುರಿಯ ಕಡೆಗೆ ಒಯ್ಯುತ್ತಿದೆ. ಹಠಯೋಗದ ಯಾವ ಪ್ರಕ್ರಿಯೆಯೂ ಇಂಥ ಫಲವನ್ನು ಕೊಡಲಾರದು. ಆಜ್ಞಾ ಚಕ್ರದ ನಂತರ ಅದು ವಿಫಲವಾಗುತ್ತದೆ. ರಾಜಯೋಗದ ಅಂಗವಾದ ಧ್ಯಾನವೊಂದೇ ನಿಮ್ಮನ್ನು ಕೊನೆಯವರೆಗೂ ಒಯ್ಯುವುದು. ಕೇಂದ್ರವನ್ನು ತಲುಪಲು ಬೇರೆ ಯಾವ ಸಾಧನವೂ ಇಲ್ಲ. ಕೇಂದ್ರದೊಳಗಿನಿಂದ ಉದ್ಭವಿಸಿದ ಒಂದು ಸಂಕಲ್ಪವು ಇಷ್ಟು ದೊಡ್ಡ ವಿಶ್ವವನ್ನು ಹುಟ್ಟಿಸಿತೆಂಬುದನ್ನು ನಾವು ನೋಡಿದೆವು. ನಮ್ಮ ಅಕಾರ್ಯಗಳಿಂದ ವಿಕೃತವಾಗಿದ್ದರೂ ಅದೇ ಶಕ್ತಿಯನ್ನೇ ನಾವು ಉಪಯೋಗಿಸುವೆವು. ಧ್ಯಾನದ ಮೂಲಕ ನಾವು ಅದೇ ಶಕ್ತಿಯಿಂದಲೇ ಕೆಲಸ ತೆಗೆದುಕೊಳ್ಳುವೆವು. ಹೀಗೆ ನಾವು ಸಹಜವಾಗಿ ನಿಸರ್ಗದ ಶಕ್ತಿಯೊಂದಿಗೆ ಮುಂದೆ ಸಾಗುವೆವು.

ನಾವು ಧ್ಯಾನದಲ್ಲಿದ್ದಾಗ ನಮ್ಮೊಳಗಿದ್ದ ಕೇಂದ್ರದ ಶಕ್ತಿಗೆ ಗತಿಯುಂಟಾಗುವುದು. ಅದು ತನ್ನ ಶಕ್ತಿಯಿಂದ ತುಂಬ ಬಿರುಸಾದ ವಿಕಾರ-ವಿಕ್ಷೇಪಾದಿಗಳ ಅಸಂಖ್ಯಾತ ಕಾರ್ಮೋಡಗಳನ್ನು ಚೆದುರಿಸುವುದು. ಅದನ್ನು

ಕೇವಲ ಅಭ್ಯಾಸಿಯೇ ಅನುಭವಿಸಬಲ್ಲನು. ಇದನ್ನು ಪ್ರತ್ಯಕ್ಷ ಸಾಧನೆಯಿಂದಲೇ ತಿಳಿಯಲು ಸಾಧ್ಯ. ಶೀಘ್ರದಲ್ಲಿಯೇ ನೀವು ಶಾಶ್ವತ ಸುಖ–ಶಾಂತಿಗಳಲ್ಲಿ ಈಜಾಡುತ್ತಿರುವಂತೆ ಅನುಭವಿಸುವಿರಿ. ಇಲ್ಲಿ ಎಲ್ಲವೂ ಕೊನೆಗೊಳ್ಳುವುದು. ಜಗತ್ತಿನೊಂದಿಗೆ ಯಾವ ಆಸಕ್ತಿಯೂ ಇರುವುದಿಲ್ಲ. ಮನಸ್ಸು ಸುಶಿಕ್ಷಿತವಾಗಿ ತನ್ನಿಂದ ತಾನೇ ನಿಯಂತ್ರಣಗೊಳ್ಳುವುದು. ಇಂದ್ರಿಯಗಳು ವಶದಲ್ಲಿ ಬರತೊಡಗಿ ಅವುಗಳ ಮೇಲೆ ನೀವು ಸ್ವಾಮ್ಯ ಗಳಿಸುವಿರಿ. ಸ್ವಂತದ ಮೇಲೆ ಪ್ರಭುತ್ವ ಸಂಪಾದಿಸುವುದೆಂದರೆ ನಿಸರ್ಗವನ್ನು ಸ್ವಾಧೀನಪಡಿಸಿಕೊಂಡಂತೆ. ಈ ದಾರಿಯು ಸುಗಮವಾದಾಗ ನಿಸರ್ಗದ ಕಾರ್ಯವು ನಿಮ್ಮ ಅಳವಿನಲ್ಲಿ ಬಂದುದನ್ನು ಅನುಭವಿಸುವಿರಿ. ಅರ್ಥಾತ್ ನೀವೇ ಸ್ವತಃ ಕಾರ್ಯವನ್ನಾರಂಭಿಸುವಿರಿ.

***

# ಹೃದಯ ಮಂಡಲ

ಸಾಮಾನ್ಯವಾಗಿ ಜನರು ಹೃದಯವನ್ನು ಕೇವಲ ರಕ್ತ–ಮಾಂಸಗಳಿಂದಾದ ವಸ್ತುವೆಂದು ತಿಳಿಯುವರು. ಹೃದಯದ ಬಗ್ಗೆ ವಿಚಾರ ಬಂದಾಗಲೆಲ್ಲ ಅವರು ರಕ್ತ–ಮಾಂಸಗಳಿಂದಾದ ಹೃದಯವಿರುವ ಸ್ಥಾನವನ್ನೇ ತೋರಿಸುವರು. ಹೃದಯಮಂಡಲವನ್ನು ವಿಶಾಲಾರ್ಥದಲ್ಲಿ ನೋಡಲಾದುದಕ್ಕೆ ಇದೊಂದು ತಡೆಯಾಗಿದೆ. ವಾಸ್ತವವಾಗಿ ಒಳ ಹೊರಗಿನ ಪ್ರತಿಯೊಂದು ವಸ್ತುವನ್ನೂ ಒಳಗೊಳ್ಳುವ ಒಂದು ವಿಶಾಲ ವೃತ್ತವಿದು. ಪರಾಮನಸ್ಸಿನ ಅನಂತರ ಬಂದ ಎಲ್ಲ ವಸ್ತುಗಳೂ ಹೃದಯ ಮಂಡಲಕ್ಕೇ ಸೇರಿದುವಾಗಿವೆ. ಅದರ ಪರಿಮಿತಿಯಲ್ಲಿಯೇ ಎಲ್ಲ ಚಕ್ರಗಳೂ ಅಡಕವಾಗಿವೆ. ಬೇರೆ ಶಬ್ದಗಳಲ್ಲಿ ಹೇಳಬೇಕಾದರೆ ಅವು ಈ ದೊಡ್ಡ ಕ್ಷೇತ್ರದ ಒಂದು ಭಾಗವೆಂದು ಹೇಳಬಹುದು. ಮಾನವನ ಪ್ರಗತಿಯ ಎಲ್ಲ ಸ್ತರಗಳೂ ಇದರಲ್ಲಿ ಅಡಗಿವೆ. ಪ್ರಜ್ಞಾನವು ಇಲ್ಲಿದೆ; ಸುಷುಪ್ತಿಯು ಇದರ ಒಂದು ಭಾಗವಾಗಿದೆ. ಈ ಕ್ಷೇತ್ರದಲ್ಲಿ ನಾವೆಲ್ಲರೂ ನೀರಲ್ಲಿಯ ಹಂಸಗಳಂತೆ ವಿಹರಿಸುತ್ತಿದ್ದೇವೆ. ದಿವ್ಯಲೋಕದ ಮುಕ್ತಾತ್ಮರೊಂದಿಗೆ ವ್ಯವಹರಿಸುವ ಸ್ಥಿತಿಯು ಇಲ್ಲಿಂದಲೇ ಆರಂಭವಾಗುವುದು. ಈ ವಲಯದಲ್ಲಿ ವ್ಯಷ್ಟಿಮನಸ್ಸು ತನ್ನ ಕಾರ್ಯ ಮಾಡುತ್ತಿರುವುದು. ಇದು ಭಗವಂತನ ಬಹು ಮುಖ್ಯವಾದ ಧಮನಿ. ಇದರ ಮೂಲಕ ಮುಂಬರಿಯದ ಹೊರತು ನಾವು ಆತನನ್ನು ಮುಟ್ಟಲಾರೆವು. ಈ ವಲಯದಲ್ಲಿ ನಾರದನು ವೀಣೆ ನುಡಿಸುತ್ತಿರುವನು. ಬಹುಸಂಖ್ಯಾತ ಜನರು ತಮ್ಮ ದೇಹವನ್ನಲ್ಲದೆ ಬೇರೆ ಏನನ್ನೂ ಅನುಭವಿಸರು. ಅವರ ವಿಚಾರಗಳು ಇದೇ ವಸ್ತುವಿನ ಮೇಲೆ ನೆಲೆಸಿರುವವು. ದೇಹವೊಂದೇ ಪೋಷಣೆಗೆ ಯೋಗ್ಯವೆಂದು ತಿಳಿದು ಅದನ್ನೇ ಸರ್ವಸ್ವವನ್ನಾಗಿ ಭಾವಿಸುವರು. ತಮ್ಮ ದೇಹವು ಭಂಗವಾಗುವದೆಂಬ ವಿಚಾರವನ್ನು ಅವರು ಸಹಿಸಲಾರರು. ಅದಕ್ಕೇನಾದರೂ ರೋಗ–ರುಜಿನಗಳುಂಟಾದರೆ ತತ್‌ಕ್ಷಣ ಡಾಕ್ಟರ್‌ರ ಹತ್ತಿರ ಓಡುವರು. ಶರೀರದ ಕಾಳಜಿಯೆ ಅವರ ಮುಖ್ಯ ಗುರಿಯಾಗಿ ಬಿಡುವುದು. ತಮ್ಮಲ್ಲಿ ಮನೆಮಾಡಿ

ಕೊಂಡ ವಿಚಾರದಿಂದ ಮುಕ್ತರಾಗಲು ಅವರು ಒಲ್ಲರು. ಅವರು ಯಾವಾಗಲೂ ತಮ್ಮ ಯಜಮಾನನಂತಿರುವ ದೇಹದ ಸೇವೆಯನ್ನೇ ಮಾಡುತ್ತಿರುವುದು ಕಂಡುಬರುತ್ತಿದೆ. ಅವರಿಗೆ, ಆತ್ಮದ ಬೆಲೆ ಕಿಂಚಿತ್ತಾದರೂ ಇಲ್ಲ. ಅವರಿಗದು ಗೌಣವಿಚಾರ. ಅಲ್ಲದೆ, ಅವರಿಗೆ ವಿರಾಮವೇ ಸಿಗುವುದಿಲ್ಲ. ಅವರು ತಮ್ಮ ಶರೀರದ ಸುತ್ತಲೂ ಎಷ್ಟು ವೃತ್ತಗಳನ್ನು ಹಾಕಿ ಕೊಂಡಿದ್ದಾರೆ! ಮೊದಲೇ ಅದು ಸ್ಥೂಲವಾಗಿದ್ದಿತು, ಅದನ್ನವರು ಮತ್ತಷ್ಟು ಗಟ್ಟಿ ಹಾಗೂ ಸ್ಥೂಲವಾಗುವಂತೆ ಮಾಡಿದ್ದಾರೆ. ಈಗ ಅವರ ವಿಚಾರಗಳು ಎಲ್ಲಿ ನೆಲೆಸಿವೆ? ದೇಹದ ಮೇಲೋ ದೇಹದೊಳಗೊ? ನೀವು ಒಂದು ವಸ್ತುವಿನ ಮೇಲೆ ಜೋರು ಕೊಟ್ಟಾಗ ವಿಚಾರಗಳು ನಿಮ್ಮೊಳಗೆ ಧುಮುಕ ಲಾರಂಭಿಸುವವು. ಅವು ಈ ಮೊದಲೇ ರೂಪುಗೊಂಡ ವಿಚಾರಗಳಿಗೆ ಅನುಗುಣವಾಗಿರುವವು. ಅದರೊಳಗೆ ದೇಹದ ಬಗೆಗೆ ಕಾರ್ಯ ಮಾಡುತ್ತಿರುವ ವಿಚಾರವೇ ಇರುವುದನ್ನು ನೀವು ಕಾಣುವಿರಿ. ಈಗ ದೇಹಕ್ಕಾಗಿ ನೀವು ಕೆಲಸ ಮಾಡಹತ್ತಿರುವಿರಿ. ಇಂಥ ದೇಹದೊಂದಿಗೆ ನೀವು ಸಂಪರ್ಕದಲ್ಲಿದ್ದು ಅದನ್ನು ಮತ್ತಷ್ಟು ಘನೀಭೂತವನ್ನಾಗಿ ಮಾಡುವಿರಿ. ಸಹಜವಾಗಿಯೇ, ನಿಮ್ಮ ವಿಚಾರ ಗಳು ದೇಹವನ್ನು ತಟ್ಟಿ ತಿರುಗಿ ಬಂದಾಗ ಘನೀಭೂತವಾಗುವವು. ಅವುಗಳಲ್ಲಿ ದೇಹದ ಭಾವನೆಯೂ ಒಂದಿಲ್ಲೊಂದು ರೂಪದಲ್ಲಿದ್ದಿತಾದುದರಿಂದ ಒಳಗಡೆ ಕೆಲಮಟ್ಟಿಗೆ ಸ್ಥೂಲತೆಯಿದ್ದಿತು. ಈಗ ಅವು ಪರಸ್ಪರ ಒಂದೇ ಬಗೆಯ ಸಂಬಂಧವನ್ನು ಪಡೆದು ದೇಹದೊಂದಿಗೆ ಸಮರಸವಾಗಿರುವವು. ಈಗ ನಿಮ್ಮನ್ನು, ಒಳಗೆ ಅಕ್ಷ ಹಾಗೂ ಧ್ರುವಗಳನ್ನುಳ್ಳ ಒಂದು ಘನವಾದ ಗೋಲವೆಂದೇ ಹೇಳಬಹುದು. ನಿಮಗೆ ದೇಹದ ಹಲವು ಅವಯವಗಳ ಬಗೆಗೆ ಜ್ಞಾನವಿದೆ. ಹೃದಯದ ಮಿಡಿತವನ್ನೂ ಕಾಣುವಿರಿ. ಉಸಿರಾಟವನ್ನು ಅನುಭವಿ ಸುತ್ತಿರುವಿರಿ. ಇವನ್ನೆಲ್ಲ, ಕಾರ್ಯ ಮಾಡುತ್ತಿರುವ ಹಲವು ಇಂದ್ರಿಯಗಳಿಗೆ ಹೊಂದಿಸುವಿರಿ. ಈ ಎಲ್ಲ ಭಾಗಗಳೂ ದೇಹದ ಬೇರೆ ಬೇರೆ ಸ್ಥಾನಗಳಲ್ಲಿವೆ ಯೆಂಬುದನ್ನೂ ನೀವು ಬಲ್ಲಿರಿ. ನಿಮಗೆ ಯಕೃತ್ತು, ಹೃದಯ, ಶ್ವಾಸಕೋಶ ಮೊದಲಾದವುಗಳ ಕಲ್ಪನೆಯಿದೆ. ನೀವು ವಾಸ್ತವವಾಗಿ ದೇಹದ ಪಾತ್ರವನ್ನೇ ಧರಿಸಿರುವಿರಿ. ಅದರೊಂದಿಗೆ ಒಂದಾಗಿಯೂ ವಸ್ತುಗಳ ಘನತ್ವ ಸಹಿತವಾಗಿರು

ವಿರಿ. ನಿಮ್ಮ ಮನಸ್ಸಿನಲ್ಲಿ ಇದರ ಹೊರತು ಮತ್ತೇನೂ ಇಲ್ಲ. ವಸ್ತುಗಳ ನಿಜವಾದ ಪಾತ್ರವನ್ನು ನೀವು ಅರಿತಿಲ್ಲ. ಈ ನಾಟಕಗಳೆಲ್ಲ ಎಲ್ಲಿ ನಡೆದಿವೆ ಎಂಬುದು ನಿಮಗೆ ತಿಳಿಯದು. ನೀವು ನಿಮ್ಮವೇ ಆದ ಕಲ್ಪನೆಗಳೊಂದಿಗೆ ಹೊಯ್ದಾಡುತ್ತಿರುವಿರೆಂಬುದು ನಿಮಗೆ ಗೊತ್ತಿಲ್ಲ. ನಿಮ್ಮನ್ನು ನೀವೇ ಭ್ರಮೆ ಗೊಳಿಸಿ ಕ್ಷೋಭೆಯಲ್ಲಿ ಬಿದ್ದಿರುವಿರಿ. ಇವೆಲ್ಲ ಏಕೆ ಸಂಭವಿಸುವವು? ಇಂಥ ವಿಚಾರಗಳೇಕೆ ಮೂಡುವವು? ಇವು ನಮ್ಮೊಳಗೆ ಬರುವಂತೆ ಯಾರು ಸಹಾಯ ಮಾಡಿದರು? ಇವೆಲ್ಲವುಗಳ ಸೂತ್ರವು ಯಾರ ಕೈಯಲ್ಲಿದೆ? ಇವುಗಳ ಮೇಲೆ ಯಾರ ಅಧಿಕಾರವಿದೆ? ಅದು 'ಹೃದಯ'ವಲ್ಲದೆ ಬೇರಾವುದೂ ಅಲ್ಲ. ಇಂಥ ಪರಿಣಾಮಗಳುಂಟಾಗುವಂತೆ ನೀವೇ ನಿಮ್ಮ ಹೃದಯವನ್ನು ಈ ರೀತಿ ಮಾಡಿಕೊಂಡಿರುವಿರಿ. ಫಲರೂಪವಾಗಿ ಅಶಾಂತಿ ಯಲ್ಲದೆ ಮತ್ತೇನೂ ಉಂಟಾಗದು. ಇವೆಲ್ಲ ಕಲ್ಪನೆಗಳು ಹೃದಯದ ದೆಸೆಯಿಂದಲೇ ಉಂಟಾದವು ಮತ್ತು ತರುವಾಯದ ನಿಮ್ಮ ಕ್ರಿಯೆಗಳೆಲ್ಲ, ಮೊದಲನೆಯ ಮೆಟ್ಟಿಲಿನಲ್ಲಿ, ಹೃದಯದಿಂದಲೇ ಶಾಸಿತವಾಗಿ ನಿಯಂತ್ರಿತ ವಾಗುವವು. ಅಧರ ನಿರ್ದೇಶವು ಸರಿಯಾಗಿದ್ದರೆ ಅವು ಸರಿಯಾದ ದಾರಿಯನ್ನು ಹಿಡಿಯುವವು; ಅವಿವೇಕದ್ದಾಗಿದ್ದರೆ ತಪ್ಪು ದಾರಿಯನ್ನು ಹಿಡಿಯುವವು. ಅರ್ಥಾತ್ ಅದು ಅವೆಲ್ಲವುಗಳ ಯಜಮಾನನಾಗಿದೆ; ನಿಯಮಾಕ ಶಕ್ತಿಯೂ ಆಗಿದೆ. ಹೀಗಿದೆ ನಿಮ್ಮೊಳಗಿನ ಹೃದಯದ ಸ್ಥಿತಿ. ಅದು ನಾನಾ ರೀತಿಯಿಂದ ನಾನಾ ವರ್ಣಗಳಲ್ಲಿ ಕಾರ್ಯ ಮಾಡುತ್ತಿದೆ. ಆದರ ಮೂಲಕ ಭಗವಂತನ ಮುಖ್ಯಧಮನಿಯು ಸೃಷ್ಟಿಯ ಸಂಕಲ್ಪದೊಂದಿಗೆ ಕೆಲಸ ಮಾಡುತ್ತಿದೆ. ನಿಮ್ಮ ಹೃದಯದೊಳಗಿನ ಲಂಬಕದಂತಹ ಬಡಿತವು ಕೇಂದ್ರದ ಅಡಿಯಲ್ಲಿರುವ ಅದೃಶ ಚಲನದ ಪರಿಣಾಮವಲ್ಲದೆ ಬೇರೇನೂ ಅಲ್ಲ. ಆ ಗುಪ್ತ ಚಲನದೊಂದಿಗೆ ನಮ್ಮ ಹೃದಯದ ಸಂಪರ್ಕವಿರುವುದರಿಂದ ತನ್ನ ಸಾಮರ್ಥ್ಯದ ಮಟ್ಟಿಗೆ ಅದು ತನ್ನ ಸ್ಥಳದಲ್ಲಿ ಅದೇ ಕಾರ್ಯವನ್ನು ಮಾಡುತ್ತಿದೆ. ಈ ಪ್ರಕಾರ ಅದರ ಕಾರ್ಯವು ಆ ಅದೃಶ್ಯ ಚಲನದಂತೆಯೇ ಇರುವುದು. ಅಗೋ, ಭಗವಂತನ ಅದೃಶ್ಯ ಚಲನದ ದೃಶ್ಯ ಸ್ವರೂಪ! ಅದು ಸಾಗರ ದಲ್ಲಿಯ ಒಂದು ಬಿಂದುವಾಗಿದೆ. ಕೇಂದ್ರದಿಂದ ಹೊರಹೊರಟ ಮೂಲಾಂಶ

ವದು. ಸೀಮಿತವಾದ ರೂಪದಲ್ಲಿ ಅದು ಮೂಲಶಕ್ತಿಯೇ ಆಗಿದೆ. ಆ ದೊಡ್ಡ ವಸ್ತುವು ಅಪರಿಮಿತ ಶಕ್ತಿಗಳನ್ನು ಹೊಂದಿದೆ. ಈ ಪರಿಮಿತತೆಯಾದರೋ ನಿಮ್ಮ ಸಂಕುಚಿತ ಮನದ ಪರಿಣಾಮವೇ ಆಗಿದೆ. ಮುಖ್ಯ ಧಮನಿಯಿಂದ ಅದೃಶ್ಯ ಚಲನಗಳು ವಿಶ್ವದ ರಚನೆಗಾಗಿ ಅವತರಣ ಮಾಡಿ ವಿಶಾಲ ವೃತ್ತದಲ್ಲಿ ಮಳೆಯ ಧಾರೆಗಳಂತೆ ಹರಡಿಕೊಂಡುವು. ನಿಸ್ಸಂದೇಹವಾಗಿ, ಪರಿಭ್ರಮಿಸುವ ಈ ಚಲನಗಳು ಜಗತ್ತನ್ನು ನಿರ್ಮಿಸಿದುವು; ಮತ್ತು ಸರ್ವ ಶಕ್ತನಿಂದ ಅದೃಶ್ಯ ಚಲನಗಳ ಮೂಲಕ ರಚಿತವಾದ ರೂಪಗಳೆಲ್ಲವೂ ದುಂಡಾಗಿರುವುದನ್ನೇ ಕಾಣುವೆವು. ಜಗತ್ತಿನಲ್ಲಿ ಕಾಣುತ್ತಿರುವ ಹಾಗೆ ಅದ್ಭುತ ಪರಿಣಾಮಗಳನ್ನುಂಟು ಮಾಡಿದ ಶಕ್ತಿಯೊಂದಿಗೆ ನಮ್ಮ ಸಂಬಂಧವಿದೆ ಎಂಬುದು ಇದರಿಂದ ಸ್ಪಷ್ಟವಾಗಿ ಸಿದ್ಧವಾಗುವುದು. ಹೀಗೆ, ಎಲ್ಲ ವಸ್ತುಗಳೂ ವಿವಿಧ ರೀತಿಯಲ್ಲಿ ಪರಸ್ಪರವಾಗಿ ಸಂಬಂಧಪಟ್ಟಿದ್ದರೂ ಕೊನೆಗೆ ಒಂದೇ ವಸ್ತುವಿಗೆ ಹೊಂದಿಕೊಂಡಿವೆ. ನಮ್ಮ ಹೃದಯವು ದೊಡ್ಡ ವೃತ್ತದ ಒಂದು ಅಂಗವಾಗಿದೆ. ಆ ವೃತ್ತದ ಸುತ್ತಲೂ ಈ ಪದಾರ್ಥಗಳು ಓಡಾಡುತ್ತಿವೆ. ನಮ್ಮ ಸಂಕಲ್ಪ ಬಲದಿಂದಲೇ ನಾವು ಎಲ್ಲೆಗಳನ್ನು ನಿರ್ಮಿಸಿದ್ದೇವೆ. ಆದುದರಿಂದಲೇ, ಮೇಲೆ ವಿವರಿಸಲಾದಂತಹ ಈ ವಸ್ತುಗಳಿಂದ ನಮ್ಮ ಹೃದಯದ ಆಂತರಿಕ ವಲಯವು ಬೇರೆಯಾದಂತೆ ಕಾಣುವೆವು. ಪ್ರತಿಯೊಂದು ವಸ್ತುವೂ ಈ ಕ್ಷೇತ್ರದಲ್ಲಿರುವುದು. ವಸ್ತುಗಳು ಮಾರ್ಪಟ್ಟು ತಾವು ಬಂದ ಮೂಲಸ್ಥಾನಕ್ಕೆ ಹಿಂತಿರುಗುವಾಗ ಇಲ್ಲಿ ಪ್ರಳಯವು ಗೋಚರವಾಗುವುದು. ಪದಾರ್ಥಗಳು ಈಗಿನ ರೂಪಕ್ಕೆ ಬರುವ ಮೊದಲು ಪರಿಭ್ರಮಿಸುವ ಚಲನಗಳು ಕೆಲವು ಸ್ಥಾನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿಯೂ ಉಳಿದೆಡೆಗಳಲ್ಲಿ ಕಡಿಮೆ ಪ್ರಮಾಣದಲ್ಲಿಯೂ ಪ್ರಾರಂಭವಾಗುವವು. ನಿಲ್ದಾಣಗಳು ಅರ್ಥಾತ್ ಚಲನ ಗಳ ಹೆಚ್ಚು ಕಡಿಮೆ ಪ್ರಮಾಣಗಳನ್ನುಳ್ಳ ಸ್ಥಾನಗಳು–ಪ್ರವಾಹದ ವೇಗವನ್ನು ಹೆಚ್ಚಿಸುವ ಕವಾಟಗಳಂತೆ ಪ್ರತಿರೋಧವನ್ನು ಹೆಚ್ಚಿಸುವ ಕೆಲಸ ಮಾಡುವವು. ಪ್ರತಿಯೊಂದು ಕವಾಟದಲ್ಲಿ, ತನ್ನ ಕೆಲಸಕ್ಕನುಗುಣವಾದ ಹೆಸರನ್ನುಳ್ಳ ಒಂದೊಂದು ಚಕ್ರವಿದೆ. ಈ ಪ್ರಕಾರ ಅವೆಲ್ಲ ಹೃದಯಮಂಡಲವೆಂಬ ಒಂದೇ ವೃತ್ತದೊಳಗಿವೆ. ಈ ಒಂದೊಂದು ಚಕ್ರದ ಕಾರ್ಯಗಳು ಬೇರೆ

ಬೇರೆಯಾಗಿವೆ. ಆಧ್ಯಾತ್ಮದಲ್ಲಿ ಮಾನವನ ಪ್ರಗತಿಯ ಘಟ್ಟಗಳು, ಚಕ್ರಗಳೆಂದು ಕರೆಯಲಾಗುವ ಈ ಉಪವೃತ್ತಗಳಿಗೆ ಸ್ವಲ್ಪ ಮಟ್ಟಿಗೆ ಅಧೀನ ವಾಗಿರುವವು.

ನಾವು ಹೇಗಾದರೂ ಈ ದೊಡ್ಡ ವೃತ್ತವನ್ನು ದಾಟಿದ್ದಾದರೆ, ಈ ಸೃಷ್ಟಿಗೆ ಕಾರಣವಾದ ಮೊಟ್ಟಮೊದಲನೆಯ ಅಥವಾ ಪರಾಮನಸ್ಸನ್ನು ದಾಟುವುದೊಂದೇ ಉಳಿಯುವುದು. ಅದರ ಹಿಂದೆ ಕೇಂದ್ರವಿದೆ; ಅದೇ ಜೀವನದ ನಿಜವಾದ ಗುರಿ. ಅದೊಂದು ದೊಡ್ಡದಾದ ಲಂಬಾಕೃತಿಯ ವರ್ತುಳವಾಗಿದೆ. ಕಾರಣವೇನೆಂದರೆ, ಪರಿಭ್ರಮಿಸುವ ಚಲನಗಳು ಆ ರೀತಿ ಚಲಿಸುವವು. ಅದರಡಿಯಲ್ಲಿ ಏನೋ ಇದೆಯೆಂದು ನಮಗೇಕೆನಿಸುವುದು? ಈ ಕ್ಷೇತ್ರದಲ್ಲಿ ಸರ್ವಶಕ್ತನ ಪ್ರವಾಹವು ಹರಿಯುವುದು ಅಥವಾ ತುಂಬಿ ತುಳುಕುವುದೆಂದರೂ ಅಡ್ಡಿಯಿಲ್ಲ. ಅದರಲ್ಲೊಂದು ದೊಡ್ಡ ರಹಸ್ಯವಿದೆ. ನೀವು ಕತ್ತಲೆಯ ಸ್ಥಾನವನ್ನು ಪ್ರವೇಶಿಸಿದಾಗ ಕಾಣುವಂಥ ಹಲವು ಕಣಗಳು ಪರಿಭ್ರಮಿಸುವ ಚಲನಗಳಿಂದಾಗಿ ಅಲ್ಲಿವೆ. ನೀವು ಒಂದು ಕತ್ತಲ ಕೋಣೆಯೊಳಗೆ ಹೋದಾಗ ವೃತ್ತಾಕಾರದ ಬೆಳಕಿನ ಥಳಕನ್ನು ಕಾಣುವಿರಿ. ನಿಮಗೆ ದಿನಾಲೂ ಇದರ ಅನುಭವವಿದೆ. ಈ ವೃತ್ತಾಕಾರದ ಕಿಡಿಗಳು ಪವಿತ್ರವಾದ ಭಗವತ್ ಕ್ಷೇತ್ರದಲ್ಲಿರುವವು. ಅವು ವೃತ್ತದಲ್ಲಿರುವ ವಿವಿಧ ಶಕ್ತಿಗಳು. ರಾಜಯೋಗದಗುಂಟ ನೀವು ಸಾಗಿದಂತೆಲ್ಲ ಇವು ಕರಗತೊಡಗಿ ಕೊನೆಗೆ ಇಲ್ಲದಂತಾಗುವವು. ಈ ವೃತ್ತದ ಮೇಲ್ತುದಿಯನ್ನು ಮುಟ್ಟಿದಾಗ ಅಭ್ಯಾಸಿಯಲ್ಲಿ ಬಗೆಬಗೆಯ ಶಕ್ತಿಗಳು ಬರುವವು. ಒಂದೊಂದು ಗ್ರಂಥಿಯು ಬಿಚ್ಚುವುದೆಂದರೆ ಯಾವುದಾದರೊಂದು ಶಕ್ತಿಯುದಿಸಿದಂತೆ. ರಾಜಯೋಗದ ಸಮರ್ಥ ಗುರುವು ಅವುಗಳನ್ನೆಲ್ಲ ಹದಮಾಡಿ ಸಮಗೊಳಿಸುವನು. ಈ ರೀತಿ ಸಮಗೊಳಿಸಲಾದ ಶಕ್ತಿಯು ಶಿಷ್ಯನಲ್ಲಿ ತಾನಾಗಿಯೆ ಬರುವುದು. ಇಂಥ ಪ್ರತಿಯೊಂದು ಕಿಡಿಯು, ಮೇಲಿನಿಂದ ಬರುವ ಇಂಥ ಚಲನದ ಪರಿಣಾಮವಾಗಿದೆ. ನೀವು ಈ ಎಲ್ಲ ವಸ್ತುಗಳನ್ನು ಕರಗಿಸಿದಾಗ ಈ ಶಕ್ತಿಯ ತುತ್ತತುದಿಯನ್ನು ಮುಟ್ಟಬಲ್ಲಿರಿ. ಈ ವಸ್ತುಗಳು ಸಂಪೂರ್ಣ ಕರಗಿ ಹೋದಾಗ ನೀವು ಮೊಟ್ಟಮೊದಲು ಈ ಜಗತ್ತಿನಲ್ಲಿ ಬರುವ ಕೊಂಚ

ಮುನ್ನ ಎಷ್ಟು ಶಾಂತವಾಗಿದ್ದರೋ ಅಷ್ಟೇ ಶಾಂತಿಯನ್ನು ಅನುಭವಿಸುವಿರಿ. ಎಲ್ಲ ಕಡೆಗೂ ಶಾಂತಿಯು ಪಸರಿಸುವುದು. ಸರಳತೆಯು ಹತ್ತಿರವೇ ನೆಲೆಸಿರುವುದು. ತತ್ಪರಿಣಾಮವಾಗಿ ಸಹಜತೆಯು ತಲೆದೋರುವುದು. ಹೃದಯ ಮಂಡಲದ ಉಪವೃತ್ತಗಳಲ್ಲಿ ದೇವರು ಕವಾಟಗಳನ್ನು ಕಲ್ಪಿಸಿದ್ದಾನೆ. ಅವು ತಮ್ಮ ಸ್ವರೂಪವನ್ನು ಕಳೆದುಕೊಂಡು ಒಂದು ನಿಲುಗಡೆಗೆ ಬರುವವರೆಗೂ ಶಿಥಿಲವಾಗುತ್ತ ಹೋಗುವವು. ಆಗ ಅವುಗಳಲ್ಲಿ ಯಾವ ಶಕ್ತಿಯೂ ಉಳಿಯುವುದಿಲ್ಲ. ಪ್ರತಿಯೊಂದು ಕಟ್ಟನ್ನೂ ನೀವು ಬಿಚ್ಚಿಬಿಡುವಿರಿ. ಗಂಟು ಬಿಚ್ಚುವ ಈ ಕ್ರಿಯೆಯು ಯಾವುದಾದರೊಂದು ಪರಿಣಾಮವನ್ನುಂಟು ಮಾಡುವುದು. ಏಕೆಂದರೆ ಪ್ರತಿಯೊಂದು ಕ್ರಿಯೆಯು ಒಂದು ಪರಿಣಾಮವನ್ನು ಹುಟ್ಟಿಸುವುದು ನಿಸರ್ಗದ ನಿಯಮವಾಗಿದೆ. ಉಪವೃತ್ತದ ಬೇರೆ ಬೇರೆ ಮೂಲೆಗಳಲ್ಲಿ ನೀವು ಅನುಭವಿಸುವ ಕಿರಣಗಳೆಲ್ಲ ಮಾಯವಾಗತೊಡಗುವವು. ಸತ್ಯ ವಸ್ತುವಿನೊಂದಿಗೆ ಜಡಪದಾರ್ಥವು ಸಮ್ಮಿಲಿತವಾಗುವದರಿಂದ ನೀವು ಯಾವ ಪ್ರಕಾಶವನ್ನನುಭವಿಸಿದಿರೋ ಅದೀಗ ಮಂದವಾಗತೊಡಗುವುದು. ಕೊನೆಗೆ ಅದು ಸಂಪೂರ್ಣ ಮಾಯವಾಗುವುದು. ಈ ವಲಯದಲ್ಲಿ ಕಣ್ಣನ್ನು ಕುಕ್ಕಿಸುವಂಥ ಪ್ರಕಾಶವುಳ್ಳ ಕೆಲವು ಭಾಗಗಳಿವೆ. ಹಲವು ಆಧ್ಯಾತ್ಮಿಕ ಸಂಸ್ಥೆಗಳಲ್ಲಿ ಜನರು ಈ ಪ್ರಕಾಶದ ಮೇಲೆಯೂ ಧ್ಯಾನ ಮಾಡುವರು. ಅವರು ಪ್ರಕಾಶವನ್ನು ಸತ್ಯವಸ್ತುವೆಂದು ಭಾವಿಸಿ ಪೂರ್ಣ ಸಂಕಲ್ಪವನ್ನು ಉಪಯೋಗಿಸುತ್ತ ಕುತೂಹಲದಿಂದ ಮುಂದುವರಿಯುತ್ತಾರೆ. ಅದರ ಪರಿಣಾಮವೆಂದರೆ, ಅವರು ಹೆಚ್ಚಿನ ಪ್ರಮಾಣದಲ್ಲಿ ಬೆಳಕು ಒಳಗೆ ಬರಲೆಂದು ಮಾಯೆಯನ್ನು ವಿಸ್ತರಿಸುವರು. ಪ್ರಕಾಶದ ಶಕ್ತಿಯಾದರೂ ಅದನ್ನು ಧರಿಸುವ ಸಾಮರ್ಥ್ಯವು ಬೆಳೆದಂತೆಲ್ಲ ಹೆಚ್ಚುವುದೆಂಬುದರಲ್ಲಿ ಸಂದೇಹವಿಲ್ಲ. ಆದರೆ ನಿಜವಾಗಿ ಹೇಳುವುದಾದರೆ ಅವರು ಸ್ಥೂಲರೂಪದಲ್ಲಿ ಮಾಯೆಯ ಬದಿಯಲ್ಲಿಯೇ ಇರುವರು. ನಾನಿಲ್ಲಿ ಪ್ರಕಾಶಕ್ಕೆ 'ಸ್ಥೂಲ' ಶಬ್ದವನ್ನು ಬಳಸಿದ್ದೇನೆ. ವಿಜ್ಞಾನಿಗಳು ಇದನ್ನು ಆಕ್ಷೇಪಿಸಬಹುದು. ಆದರೆ ನಿಜಸ್ಥಿತಿಯೊಂದಿಗೆ ಹೋಲಿಸಿದಾಗ ಪ್ರಕಾಶವು ಎಷ್ಟೋ ಘನವಾಗಿ ತೋರುವುದು; ಏಕೆಂದರೆ ಅಲ್ಲಿ ಬೆಳಕೂ ಇಲ್ಲ, ಕತ್ತಲೆಯೂ ಇಲ್ಲ. ಇದು ಸಾಮಾನ್ಯವಾಗಿ

ತ್ರಿಕುಟಿಯಲ್ಲೂ ಅದರಾಚೆಗೂ ಸಂಭವಿಸುವುದು. ಶರೀರದ ತುತ್ತತುದಿಯ ಭಾಗವೇ ಈ ದೊಡ್ಡ ವೃತ್ತದ ಕೊನೆ. ಇಷ್ಟಿದೆ, ಈ ಮಹಾವೃತ್ತದ ವಲಯ. ಇದರಲ್ಲಿ ಅನೇಕಾನೇಕ ಸಂಗತಿಗಳಿರುವವು. ಅವು ಕೇವಲ ಅನುಭವವೇದ್ಯವಾದುವು. ಯಾವ ಶಬ್ದಗಳೂ ಅವುಗಳನ್ನು ಬಣ್ಣಿಸಲಾರವು. ಇಲ್ಲಿ ನಿಸರ್ಗದ ನಾನಾ ಶಕ್ತಿಗಳು ನೆಲೆಸಿರುವವು. ಅತ್ರಿ ಋಷಿಯು ಇಲ್ಲಿ ತನ್ನ ಕಾರ್ಯ ಮಾಡುತ್ತಿರುವನು. ಸಾವಿರಾರು ವರ್ಷಗಳು ಕಳೆದಿದ್ದರೂ ಆತನು ಈ ವೃತ್ತದಲ್ಲಿ ಬಹಳ ಮೇಲೆ ಹೋಗಿಲ್ಲ. ಅಗಸ್ತ್ಯ ಋಷಿಯೂ ಇದೇ ವಲಯದಲ್ಲಿ ಕೆಲಸ ಮಾಡುತ್ತಿರುವನು. ಈ ಕ್ಷೇತ್ರವನ್ನು ದಾಟಿದ ವಿಭೂತಿಯಿಂದ ಅವರು ತಮ್ಮ ಕಾರ್ಯಗಳಿಗಾಗಿ ಆದೇಶ ಪಡೆಯುವರು. ಇವರಲ್ಲದೆ ಇದೇ ಕ್ಷೇತ್ರದಲ್ಲಿ ಬೇರೆ ಅನೇಕ ಋಷಿಗಳು ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ನಿಸರ್ಗದ ಒಂದು ರಹಸ್ಯವನ್ನು ಬಹಿರಂಗಪಡಿಸುವೆ; ನಾವು ವಿಷ್ಣುವನ್ನು ನಮ್ಮ ದೇವರೆಂದು ತಿಳಿದು ಪೂಜಿಸುವೆವು. ಆತನ ಸಾಮರ್ಥ್ಯವನ್ನು ಕುರಿತು ನಾನಿಂದು ಹೇಳುವೆನು. ಅವನು ಸೃಷ್ಟಿಯ ರಕ್ಷಣೆಗಾಗಿ ವಿವಿಧ ಕಣಗಳನ್ನು ವ್ಯವಸ್ಥಿತಗೊಳಿಸುವನು ಮಾತ್ರ. ಆತನ ಕಾರ್ಯಪರಿಮಿತಿ ಈ ಕ್ಷೇತ್ರದೊಳಗಿದೆ. ಯಾವ ದೇವತೆಯೂ ಈ ವೃತ್ತವನ್ನು ಎಂದೂ ದಾಟಿಲ್ಲ. ಸಾಧನ, ಸಾಮರ್ಥ್ಯಗಳು ತನ್ನ ಅಂಕಿತದಲ್ಲಿರುವ ಮನುಷ್ಯನಿಗೆ ಮಾತ್ರ ಇದು ಸಾಧ್ಯವಾಗಿ ಆತನು ದೇವತೆಗಳಿಗಿಂತಲೂ ಎಷ್ಟೋ ಮುಂದುವರಿಯುವನು. ನಿಜವಾಗಿಯೂ ನಾವೇ ನಮ್ಮಲ್ಲಿರುವ ಸಾಮರ್ಥ್ಯದಿಂದ ಅವರಿಗೆ ಶಕ್ತಿಯನ್ನು ಕೊಡುವೆವು. ಈ ಹೃದಯ ಮಂಡಲವನ್ನು ದಾಟಿ ಭಗವಂತನ ಮೊಟ್ಟಮೊದಲನೆಯ ಅಥವಾ ಪರಾಮನಸ್ಸಿನ ವಲಯವನ್ನು ಪ್ರವೇಶಿಸಿದ ವಿಭೂತಿ ಪುರುಷರಿಗೆ 'ನಾವು' ಎಂಬ ಶಬ್ದವನ್ನು ಬಳಸಿದ್ದೇನೆ. ಅಷ್ಟೇ ಅಲ್ಲ, ಈ ವಲಯವನ್ನೂ ದಾಟಿದ ಮಹಾಪುರುಷರಿಗೆ ಈ ಶಬ್ದವು ಅನ್ವಯಿಸುವುದು. ಇಷ್ಟಾದರೂ ನನ್ನ ಮಾತು ಪೂರ್ಣ ಸರಿಯಲ್ಲ, ಭಗವಂತನ ಆದಿಮನವನ್ನು ದಾಟಿ ಬಹಳ ಮೇಲೆ ಹೋದವರಿಗಾಗಿಯೇ ಈ ಶಬ್ದವೆಂದು ನಾನು ಹೇಳಬೇಕು.

ಗುರೂಪದೇಶವನ್ನನುಸರಿಸುವದರಿಂದ ವಿಸ್ತಾರವಾದ ಈ ಹೃದಯ ಮಂಡಲವನ್ನು ದಾಟುವುದು ಸುಲಭವಾಗಿದೆ. ಆದರೆ ಯಾರು ಎಲ್ಲ ಮಂಡಲಗಳನ್ನೂ ದಾಟಿ ಬಹು ಎತ್ತರಕ್ಕೆ ಹೋಗಿರುವನೋ ಮತ್ತು ಯಾರಲ್ಲಿ ಯೌಗಿಕ ಪ್ರಾಣಾಹುತಿಯ ಶಕ್ತಿಯಿದೆಯೋ ಆತನೇ ಸಮರ್ಥ ಗುರುವಾಗಲು ಯೋಗ್ಯನೆಂಬುದನ್ನು ನೆನಪಿನಲ್ಲಿಡತಕ್ಕದ್ದು. ನಿಸ್ಸಂದೇಹವಾಗಿ ಶಿಷ್ಯನಲ್ಲಿ ದೃಢಸಂಕಲ್ಪವು ಅಗತ್ಯವಾಗಿರಬೇಕು. ಇದು ಎಷ್ಟು ಕಠಿಣವೆಂದು ತೋರುವದೋ ನಿಜವಾಗಿಯೂ ಅಷ್ಟು ಕಠಿಣವಾಗಿಲ್ಲ. ಅಭ್ಯಾಸಿಗಳು ಸುಲಭ ವಾದ ವಸ್ತುವನ್ನು ಪಡೆಯಲು ಕ್ಲೇಶಕರ ಸಾಧನಗಳನ್ನು ಅನುಸರಿಸುವರಾದ ಕಾರಣ ಈ ಮಾರ್ಗದಲ್ಲಿ ಅದೊಂದು ಮುಖ್ಯ ತೊಂದರೆಯಾಗಿದೆ. ಈ ವಲಯವನ್ನು ಸೇರುವ ಸೋಪಾನ ಮಾರ್ಗದಲ್ಲಿ ನಾರದನು ಅತ್ಯಂತ ಕೆಳಗಿನ ಮೆಟ್ಟಿಲಿನಲ್ಲಿದ್ದನು. ಹೃದಯಮಂಡಲದ ಒಂದು ಮೂಲೆಯಲ್ಲಿ ಆತನು ತನ್ನ ವೀಣಾನಾದವನ್ನು ಮಾಡಿದನೆಂಬುದರಲ್ಲಿ ಸಂದೇಹವಿಲ್ಲ. ಅವನು, ಹೃದಯದಲ್ಲಿ ಅನುಭವಕ್ಕೆ ಬರುವ ಶಬ್ದವನ್ನಷ್ಟೇ ಗ್ರಹಿಸುವವನಾಗಿದ್ದನು. ಹೃದಯದಲ್ಲುಂಟಾಗುವ ಕೆಳಮಟ್ಟದ ಧ್ವನಿಯಲ್ಲಿಯೇ ಅವನು ಲೀನ ನಾಗಿದ್ದನು. ನಾನು ಬೇರೆ ಮಹರ್ಷಿಗಳ ಉದಾಹರಣೆಗಳನ್ನು ತೆಗೆದುಕೊಂಡು ಇದನ್ನು ಬೆಳೆಸಬಯಸುವುದಿಲ್ಲ. ಅವರ ನಿಜವಾದ ಸ್ಥಿತಿಯನ್ನು ಬಹಿರಂಗಪಡಿಸಿದರೆ ಜನರು ನನ್ನ ಮೇಲೆ ಆಕ್ರೋಶ ಮಾಡಬಹುದು. ಆದರೆ ಇವನ್ನೆಲ್ಲ ನಾನು ನನ್ನ ಪ್ರತಿನಿಧಿಗೆ – ಅವನು ಯಾರೇ ಆಗಲಿ ಹೇಳಿ ಕೊಡಬಹುದು. ನಾನಿನ್ನೂ ಅನೇಕ ವಿಷಯಗಳನ್ನು ಪ್ರಕಟಗೊಳಿಸಬೇಕಾಗಿದೆ. ಅವುಗಳಲ್ಲಿ ಹಲವು ನನ್ನ ಜೀವಿತ ಕಾಲದಲ್ಲಿಯೂ ಇನ್ನು ಕೆಲವು ನನ್ನ ಭೌತಿಕ ಶರೀರದ ಪತನಾನಂತರವೂ ಬೆಳಕಿಗೆ ಬರುವವು.


ಹೃದಯ ಮಂಡಲವು ಹೆಚ್ಚುಕಡಿಮೆ ಅಡಿಯಿಂದ ಮುಡಿಯವರೆಗೂ ಹಬ್ಬಿದೆ. ಸರ್ವಶಕ್ತನ ಸೃಷ್ಟಿಯೆಲ್ಲವೂ ಈ ವೃತ್ತದಲ್ಲಿಯೇ ಇದೆ. ಕಾರ್ಯವು ಮಾತ್ರ ವಿಭಕ್ತವಾಗಿದ್ದು ಬೇರೆಬೇರೆ ಇಂದ್ರಿಯಗಳ ಮೂಲಕ ನೆರವೇರುವುದು. ನಾವು ಹೃದಯ ಮಂಡಲದ ಮಧ್ಯಬಿಂದುವಿನ ಅಡಿಯಲ್ಲಿ ಹೋದರೆ ಬೇರೆ ಬೇರೆ ನಿಯೋಗಿಗಳು ತಮ ತಮಗೊಪ್ಪಿಸಲಾದಂತೆ ಕೆಲಸ ಮಾಡುತ್ತಿ

ರುವುದನ್ನು ಕಾಣುವೆವು. ಇದಕ್ಕೆ ಬೇಕಾಗುವ ಭಗವತ್ ಶಕ್ತಿಯೂ ಅವರಲ್ಲಿದೆ. ಈ ಪ್ರಕಾರ ಹೃದಯಮಂಡಲವು ನಿಸರ್ಗದ ದೊಡ್ಡ ಯಂತ್ರೋಪಕರಣ ವಾಗಿದೆ.

ನೀವು ಭೌತಿಕ ದ್ರವ್ಯವನ್ನು ತೆಗೆದುಹಾಕಿ ನಿಮ್ಮಿಂದ ಜನಿಸಿದ ಅರ್ಥಾತ್ ನೀವೇ ನಿರ್ಮಿಸಿದ ಶಕ್ತಿಯನ್ನೆಲ್ಲ ಬರಿದು ಮಾಡಿದಾಗ ಆದಿಯಲ್ಲಿದ್ದ ಸ್ಥಿತಿಯನ್ನು ಹೊಂದುವಿರಿ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಈ ಪ್ರದೇಶದಲ್ಲಿಯ ನಿಮ್ಮ ಗ್ರಂಥಿಗಳನ್ನು ನೀವು ಬಿಚ್ಚಿದಾಗ ಶಾಂತಿಯು ನೆಲೆಸಿ ಕ್ರಮೇಣ ಪ್ರಬಲವಾಗುವದು. ಅಲ್ಲೀಗ ಮೂಲಸ್ಥಿತಿಯು ಬಂದಿರುವದರಿಂದ ಅಲ್ಲಿರುವ ಪ್ರತಿಯೊಂದು ವಸ್ತುವು ಸರಳವಾಗಿಯೂ ಶಾಂತವಾಗಿಯೂ ಕಾಣಿಸುವುದು. ನೀವು ನಿರ್ಮಿಸಿದ ಯಾವುದೂ ಈಗ ಅಲ್ಲಿರುವುದಿಲ್ಲ. ಚುಕ್ಕೆಗಳೂ ಕಣಗಳೂ ಕಾಣದಂತಾಗುವವು. ಮಿಣುಕುವ ಬೆಳಕಾದರೂ ಶೂನ್ಯಕ್ಕೆ ಬರುವವರೆಗೆ ಮಸಕಾಗುತ್ತ ಹೋಗುವುದು. ಈಗ ಅಲ್ಲಿ ಭಾರವಿರುವುದಿಲ್ಲ. ಅಲ್ಲಿರುವ ಸತ್ಯದ ಮಟ್ಟಕ್ಕೆ ಇನ್ನೂ ಬಾರದಿರುವ ಜೀವಿಗೆ ಈ ಸ್ಥಿತಿಯು ಕಲ್ಪನಾತೀತವೆನಿಸುವುದೇನೋ ನಿಜ. ಆತ್ಮವು ಯಾವಾಗಲೂ ತನ್ನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದು. ಅದು ಕೇಂದ್ರ ದೊಂದಿಗೆ ಐಕ್ಯವಾದಾಗಲೇ ಇದು ಸಾಧ್ಯವಾಗುವುದು. ಬಾಹ್ಯ ಪದಾರ್ಥಗಳು (ಈ ವಲಯದಲ್ಲಿಯ ಆವರಣಗಳು) ಈಗ ಇಲ್ಲದಂತಾಗುವವು. ಹೃದಯದ ಈ ದೊಡ್ಡ ಪ್ರದೇಶದಲ್ಲಿ ವಿಶ್ವದ ಶಕ್ತಿಗಳು ವಾಸ ಮಾಡಿವೆ. ಈ ಕ್ಷೇತ್ರವನ್ನು ದಾಟಿ ನೀವು ನಿಜಮನಸ್ಸಿಗೆ ಬರುವ ಮುನ್ನ ನಿಮಗೆ ಅನೇಕ ಶಕ್ತಿಗಳು ಪ್ರಾಪ್ತವಾಗಿ ಭಗವತ್ ಕಾರ್ಯದಲ್ಲಿ ಅವುಗಳ ಉಪಯೋಗವಾಗುವುದು. ಈ ಪುಸ್ತಕದಲ್ಲಿ ನಾನು ಆ ಸಿದ್ಧಿಗಳನ್ನು ವಿವೇಚಿಸುವುದಿಲ್ಲ.

ಹೃದಯ ಮಂಡಲದ ಬಗ್ಗೆ ನಾನು ಮಾಡಿದ ಸಂಶೋಧನೆಯನ್ನು ನಿಮ್ಮೆದುರಿಗಿಡುವೆನು. ರಕ್ತ ಮಾಂಸಗಳಿಂದ ಕೂಡಿದ ಹೃದಯವನ್ನು ನಾನು ೧ನೆಯ ಆಕೃತಿಯಲ್ಲಿ ತೋರಿಸಿದಂತೆ ಎರಡು ಭಾಗ ಮಾಡುವೆನು. 'ಉ' ಎಂದು ಗುರುತಿಸಲಾದ ವೃತ್ತದ ಮೊದಲನೆಯ ಭಾಗವು 'ಲ' ಎಂದು ಗುರುತಿಸಲಾದ ಭಾಗಕ್ಕಿಂತ ಹೆಚ್ಚು ಪ್ರಕಾಶಮಾನವಾಗಿದೆ. ಅಲ್ಲಿ ಮೂರು


ಬಿಂದುಗಳಿವೆ. ಒಂದನೆಯದು ಮೇಲ್ಭಾಗದಲ್ಲಿ; ಎರಡನೆಯದು ಕೆಳಭಾಗದಲ್ಲಿ ಮತ್ತು ಮೂರನೆಯದು ಅವೆರಡರ ನಡುವೆ. ಮೇಲಿನ ಬಿಂದುವನ್ನು 'ಅ' ಎಂದೂ ಕೆಳಗಿನದನ್ನು 'ಬ' ಎಂದೂ ೨ನೆಯ ಆಕೃತಿಯಲ್ಲಿ ತೋರಿಸಲಾಗಿದೆ.



ಆಕೃತಿ ೧

ಅಲ್ಲಿ ನಾನಾ ಬಗೆಯ ವೃತ್ತಿಗಳೂ ಬೀಜಗಳೂ ಸುತ್ತಾಡುತ್ತಿರುವುದನ್ನು ನೀವು ಕಾಣುವಿರಿ. 'ಅ' ಮತ್ತು 'ಬ' ಬಿಂದುಗಳ ಮಧ್ಯದಲ್ಲಿ ಒಂದು ಬಿಂದುವಿದೆ. ರಾಜಯೋಗದ ಸ್ವಲ್ಪ ಅಭ್ಯಾಸದ ನಂತರ ಅದರ ಮೇಲೆ ಏಕಾಗ್ರತೆಯಿಂದ ಒತ್ತಡ ಹಾಕಿದ್ದಾದರೆ ಮುಕ್ತಾತ್ಮರೊಂದಿಗೆ ನೀವು ವ್ಯವಹರಿಸಬಹುದು. ನೀವು ಏನಾದರೊಂದು ವಿಚಾರ ಮಾಡಿದರೆ ಅದು ಮೊದಲು 'ಅ' ಬಿಂದುವಿನಲ್ಲಿ ಮೈದೋರುವುದು. 'ಅ'ದಲ್ಲಿ ಬಂದ ವಿಷಯವನ್ನು ಕುರಿತು ನೀವು ಮತ್ತೆ ಮತ್ತೆ ಚಿಂತಿಸಿದರೆ ಅದರಂತೆಯೇ ನಿಮ್ಮ ಭವಿಷ್ಯತ್ತನ್ನು ನಿರ್ಮಿಸಿಕೊಳ್ಳುವಿರಿ. 'ಬ' ಬಿಂದುವಿನ ಮೇಲೆ ನೀವು ವಿಷಯಾದಿಗಳಿಂದ ಮುಕ್ತರಾಗುತ್ತಿರುವುದಾಗಿ ಧ್ಯಾನ ಮಾಡಿದರೆ ಅದರ ಪರಿಣಾಮವು ಅತಿ ಶೀಘ್ರದಲ್ಲಿಯೇ ಕಂಡುಬರುವುದು. ಇದನ್ನು ನೀವು ಪ್ರತ್ಯಕ್ಷ ಮಾಡಿ ನೋಡದ ಹೊರತು ಕಲ್ಪನೆಯಲ್ಲಿ ಸಹ ತರಲಾರಿರಿ. ನಮ್ಮ ಸಹಜಮಾರ್ಗದ ಪದ್ಧತಿಯಿಂದ ಸಾಧಕರು ಈ ಬಿಂದುಗಳ ಮೇಲೆ ಅಭ್ಯಾಸ ಮಾಡಿ ಗಮನಾರ್ಹ ಪ್ರಗತಿಯನ್ನು ಹೊಂದಿದ್ದಾರೆ. ಇವೆರಡೂ ಬಿಂದುಗಳ ಮೇಲೆ ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡಿದ್ದಾದರೆ ಶೀಘ್ರವಾಗಿಯೇ ವಾಸನಾದಿಗಳು ಮಾಯವಾಗತೊಡಗುವವು. 'ಅ' ಮತ್ತು 'ಬ'ಗಳ ನಡುವಿನ ಬಿಂದುವನ್ನು ಸರಿಯಾದ

ರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ಅನಾಹುತಗಳುಂಟಾಗಬಹುದೆಂಬ ದೃಷ್ಟಿಯಿಂದ ಅದನ್ನು ಗೌಪ್ಯವಾಗಿರಿಸಲಾಗಿದೆ. ಆದುದರಿಂದ ನಾನದನ್ನು ಬಹಿರಂಗಪಡಿಸುವುದೇ ಇಲ್ಲ. 'ಉ' ಎಂದು ಗುರುತಿಸಲಾದ ಮೇಲಿನ ಭಾಗವು ಹೃದಯದ ಮೊದಲನೆಯ ಭಾಗವಾಗಿದೆ ಮತ್ತು 'ಲ' ಎಂದು ಗುರುತಿಸಲಾದ ಭಾಗವು ಎರಡನೆಯದು. ಮೇಲಿನ ಭಾಗವು ಮಹರ್ಷಿಗಳ ಗಮ್ಯ ಸ್ಥಾನವಾಗಿದೆ. ಸುದೀರ್ಘ ತಪಸ್ಸು ಹಾಗೂ ತ್ಯಾಗದ ನಂತರ ಅವರು ಈ ಸ್ಥಿತಿಗೆ ಬರುವರು. ಇದು ಇಷ್ಟು ಸಮೀಪದಲ್ಲಿಯೇ ಇದ್ದರೂ ಪ್ರತಿಯೊಬ್ಬರಿಗೂ ಲಭ್ಯವಿಲ್ಲ. ಅದಕ್ಕೆ ಅರ್ಹರಾದವರು ಮಾತ್ರ ಪಡೆಯಬಲ್ಲರು. ಕೆಳಗಿನದು ಸಾಮಾನ್ಯ ಜನರ ಸ್ಥಾನ. 'ಉ' ಎಂದು ಗುರುತಿಸಲಾದ ಕ್ಷೇತ್ರದಲ್ಲಿ ಕೆಳದರ್ಜೆಯ ಪ್ರಜ್ಞಾನವಿದೆ. ಈ ಕ್ಷೇತ್ರದಲ್ಲಿ ನೀವು ವಾಸಿಸತೊಡಗಿದ ಮೇಲೆ ನಿಮಗೆ ಅನೇಕ ದೈವೀ ಸಂಗತಿಗಳ ಅರಿವಾಗುವುದು. ಯಾವಾಗಲೂ ಪ್ರಾಪಂಚಿಕ ವಿಷಯಗಳಿಂದ ಮತ್ತನಾದ





ಆಕೃತಿ ೨

ಮನುಷ್ಯನು ಈ ಕೆಳ ದರ್ಜೆಯ ಪ್ರಜ್ಞಾನದ ಸ್ಥಿತಿಯನ್ನು ಕೂಡ ಮುಟ್ಟಲಾರನು. 'ಅ' ಮತ್ತು 'ಬ' ಬಿಂದುಗಳನ್ನೂ ಶುದ್ಧಗೊಳಿಸಿ ಮೇಲಿನ ಕ್ಷೇತ್ರವನ್ನು ಪ್ರವೇಶಿಸಿದರೆ ಹೃದಯ ಮಂಡಲದಲ್ಲಿರುವ ಬೇರೆ ಬಗೆಯ ಪ್ರಜ್ಞಾನದ ಸ್ಥಿತಿಯನ್ನು ಹೊಂದಲು ನೀವು ಅರ್ಹರಾಗುವಿರಿ. 'ಬ' ಬಿಂದುವನ್ನು ಪೂರ್ಣ ಶುದ್ಧಗೊಳಿಸಿದವನು ಮುಂದೆ ವಿವರಿಸಲಾಗುವ ಪ್ರಜ್ಞಾನದ ಸ್ಥಿತಿಯಲ್ಲಿ ಪ್ರವೇಶಿಸಿದ ಶುಭಸಮಾಚಾರವನ್ನು ಪಡೆಯುವನು.

‘ಅ’ ಮತ್ತು ‘ಬ’ ಬಿಂದುಗಳನ್ನು ನಾನು ಪ್ರತ್ಯಕ್ಷ ಅಳತೆಯಿಂದ ತೋರಿಸುವೆನು. ಹೃದಯವು ದೇಹದ ಎಡಭಾಗದಲ್ಲಿ ಅಥವಾ ಎಡ ಪುಪ್ಪುಸದ ಕೆಳಭಾಗದಲ್ಲಿರುವುದು ಎಡ ಚೂಚುಕದ ಬಲಗಡೆಗೆ ಎರಡು ಬೆರಳಿನ ಅಂತರವನ್ನು ತೆಗೆದುಕೊಳ್ಳಿರಿ. ಆಮೇಲೆ ಮೂರು ಬೆರಳಿನಷ್ಟು ಕೆಳಗಡೆ ಅಳೆಯಿರಿ. ಇದೇ ‘ಅ’ ಬಿಂದುವಿನ ಸ್ಥಾನ. ಈಗ ‘ಅ’ ಬಿಂದುವಿನಿಂದ ಮತ್ತೆ ಎರಡು ಬೆರಳು ಕೆಳಗಡೆ ಹೋಗಿರಿ. ಎದೆಗೂಡಿನ ಕೆಳ ಎಲುವಿನ ತುಸು ಮೇಲ್ಗಡೆಯಲ್ಲಿಯೇ ‘ಬ’ ಬಿಂದುವಿದೆ. ಅಳತೆಯನ್ನು ತಮ್ಮ ತಮ್ಮ ಬೆರಳುಗಳಿಂದಲೇ ಮಾಡತಕ್ಕದ್ದು. ಶ್ರೇಷ್ಠ ಪ್ರಜ್ಞಾನವೆಂದು ಕರೆಯಲಾದ ಬಿಂದುವಿಗೆ ಬರುವವರೆಗೂ ನಮ್ಮ ಪ್ರಜ್ಞಾನವು ಈ ಕ್ಷೇತ್ರದಲ್ಲಿ ಸಂಚರಿಸುವುದು. ಇದನ್ನು ೩ನೆಯ ಆಕೃತಿಯಲ್ಲಿ ತೋರಿಸಲಾಗಿದೆ.

ಹೃದಯದಲ್ಲಿ, ಮೇಲಿನ ಕ್ಷೇತ್ರವು ಬಲಗಡೆ ಇದೆ. ಈ ಭಾಗದಲ್ಲಿ ಅದು ಎಡಗಡೆಗೂ ಕೆಳಗಿನ ಕ್ಷೇತ್ರವು ಬಲಗಡೆಗೂ ಇದೆ. ಇಲ್ಲಿ ‘ಅ೧’ ಮತ್ತು ‘ಬ೧’ ಎಂಬ ಬಿಂದುಗಳು ಹೃದಯದಲ್ಲಿದ್ದ ‘ಅ’ ‘ಬ’ ಬಿಂದುಗಳನ್ನು ಹೋಲುವವು. ‘ಡ೧’ ಎಂದು ತೋರಿಸಲಾದ ಭಾಗದಲ್ಲಿ ಶ್ರೇಷ್ಠ ತರದ ಪ್ರಜ್ಞಾನವಿದೆ. ಭೇದವಿಷ್ಟೇ: ‘ಅ೧’ರಲ್ಲಿ ಉದಿಸುವ ವಿಚಾರಗಳು ಸೂಕ್ಷ್ಮತಮವಾಗಿರುವವು. ಸೂಕ್ಷ್ಮ ವಿಷಯಗಳು ನೆಲಸಲಾರಂಭಿಸಬೇಕೆಂಬ ದೃಷ್ಟಿಯಿಂದ ‘ಬ೦’ ಬಿಂದುವನ್ನು ಶುದ್ಧಗೊಳಿಸುವುದು ಅಭ್ಯಾಸಿಯನ್ನು ಕೂಡಿದೆ. ಹೃದಯದ ‘ಅ’ ಮತ್ತು ‘ಬ’ ಬಿಂದುಗಳಲ್ಲಿ ನೀವು ಮಾಡಿರುವಷ್ಟೇ ಪರಿಶುದ್ಧತೆಯು ಇಲ್ಲಿಯೂ




ಆಕೃತಿ ೩

ದೊರೆಯುವುದು. ಜನರು ಸಾಮಾನ್ಯವಾಗಿ ಕೆಳಗಿನ ಕ್ಷೇತ್ರವೆಂದು ಕರೆಯಲಾದ ಬಲಭಾಗದಿಂದ ಹೊರಡುವರು. ಏಕೆಂದರೆ, ಪ್ರಕಾಶಮಾನ ಸ್ಥಿತಿಯಲ್ಲಿ ಈ ಭಾಗವನ್ನು ಪ್ರವೇಶಿಸಲು ಅರ್ಹರಾಗುವಷ್ಟು ತಮ್ಮ ಹೃದಯವನ್ನು ಶುದ್ಧೀಕರಿಸಿರುವುದಿಲ್ಲ. ತಮ್ಮಲ್ಲಿರುವ ಎಲ್ಲ ವಸ್ತುಗಳೊಂದಿಗೆ ಅವರು ಈ ಪ್ರದೇಶವನ್ನು ಪ್ರವೇಶಿಸಬಯಸುವರು. ಈ ರೀತಿ ಅವರು ಎಡಭಾಗದಿಂದ ಸಾಗಲು ಯತ್ನಿಸುವುದರ ಮೂಲಕ ಅಶಕ್ಯವಾದುದನ್ನು ಸಾಧಿಸಲು ಯತ್ನಿಸಿದಂತಾಗುವುದನ್ನು ಶಿಷ್ಯನ ಎಲ್ಲ ಸಂಸ್ಕಾರಗಳನ್ನು ಛೇದಿಸಿ ಆತನನ್ನು ಸರಿಯಾದ ಮಾರ್ಗದಲ್ಲಿ ನಡೆಸುವುದು ಬಹುಮಟ್ಟಿಗೆ ಯೋಗ್ಯ ಗುರುವನ್ನವಲಂಬಿಸಿದೆ. ಹೃದಯದ ವಿಶಾಲವೃತ್ತದ ಒಂದು ಭಾಗವಾದ ವಿಶ್ವವು ಇಲ್ಲಿ ಪ್ರಾರಂಭವಾಗುವುದು. ಈ ಸ್ಥಳದಲ್ಲಿ ಜನರು ಎಷ್ಟೋ ಸಲ ಬೆಳಕಿನ ಮಳೆಗರೆದಂತೆ ಅನುಭವಿಸುವರು. ಆದರೆ ಇದು ನಮ್ಮ ಗುರಿಯಲ್ಲ. ಹೃದಯದ ದೊಡ್ಡ ವರ್ತುಳವನ್ನು ದಾಟುವ ಮೊದಲು ನಾವಿದನ್ನು ಕಡಿದೊಗೆಯಬೇಕು.

ಅದರಂತೆ ನಾವೀಗ ಮೇಲ್ಗಡೆಯಲ್ಲಿರುವ 'ಡ೨' ಎಂಬ ಭಾಗಕ್ಕೆ ಬರುವವು. ೪ನೆಯ ಆಕೃತಿಯಲ್ಲಿ ತೋರಿಸಲಾದಂತೆ, ಬಲಗಡೆಯಲ್ಲಿ ಕೆಳಗಿನ ಪ್ರದೇಶವಿದೆ. ಇಲ್ಲಿ ಶ್ರೇಷ್ಠತಮವಾದ ಪ್ರಜ್ಞಾನವಿದೆ. ಇದೆಲ್ಲ ಹೃದಯದ 'ಬ' ಬಿಂದುವನ್ನೇ ಅವಲಂಬಿಸಿದ್ದು ಅದನ್ನು ಸಂಪೂರ್ಣವಾಗಿ ಶುದ್ಧಗೊಳಿಸಿದ್ದಾದರೆ 'ಡ೨' ಪ್ರದೇಶದಲ್ಲಿರುವ 'ಅ೨' ಬಿಂದುವಿಗೆ ನಿಮ್ಮನ್ನು ಕೊಂಡೊಯ್ಯುವುದು. ಶ್ರೇಷ್ಠತಮ ಪ್ರಜ್ಞಾನದ ಸ್ವಲ್ಪ ಕೆಳಗಡೆ (ಅರ್ಥಾತ ಕಪಾಲದ ಹಿಂದುಗಡೆ) ಮನೋಮಂಡಲವು ಪ್ರಾರಂಭ




ಆಕೃತಿ ೪

ವಾಗುವ ಸ್ಥಾನದಲ್ಲಿ ಮತ್ತೆ ಅಂಥವೇ ಬಿಂದುಗಳನ್ನುಳ್ಳ ಎರಡು ಭಾಗಗಳಿವೆ. ಆದರೆ ಮುಂದೆ ಆಕೃತಿಯ ಮೂಲಕ ತೋರಿಸಲಾಗುವ ಬಿಂದುವನ್ನು ಮುಟ್ಟಲು ಅವನ್ನು ಸುಲಭವಾಗಿ ದಾಟಬಹುದು. ಹೃದಯ ಮಂಡಲವನ್ನು ಕುರಿತು ದಿಗ್ದರ್ಶನ ಮಾತ್ರವೇ ಆದರೂ ಸಾಕಷ್ಟು ಚರ್ಚೆ ಮಾಡಿದ್ದೇನೆ. ನಮ್ಮ ಮುನ್ನಡೆಯಲ್ಲಿ ಪ್ರಾಪ್ತವಾಗುವ ಸೂಕ್ಷ್ಮತರ ಸ್ಥಿತಿಗಳ ಬಗ್ಗೆ ಇನ್ನು ಮುಂದೆ ವಿವರಿಸುವೆನು.

* * *

# ಮನೋಮಂಡಲ


ಹೃದಯಮಂಡಲವನ್ನು ದಾಟಿದ ನಂತರ, ನಾವು ಭಗವಂತನ ಆದಿ ಮನವನ್ನು ಅಥವಾ ಪರಾಮನಸ್ಸನ್ನು ಪ್ರವೇಶಿಸುವವು. ಇಲ್ಲಿ ಅನುಭವಕ್ಕೆ ಬರುವ ಸ್ಥಿತಿಯನ್ನು ಯಾವ ಶಬ್ದಗಳಿಂದಲೂ ವರ್ಣಿಸಲಾಗದು. ಈ ವಿಸ್ತೃತವಾದ ಕ್ಷೇತ್ರದ ಕಲ್ಪನೆಯನ್ನು ತಂದುಕೊಡುವ ಹಲವು ಲಕ್ಷಣಗಳು ಮಾತ್ರ ಉಂಟು. ಹೃದಯಮಂಡಲದಲ್ಲಿ ನಾವು ಪಡೆದುಕೊಂಡುದು ಕಲ್ಪನೆಗೆ ನಿಲುಕಲಾರದು. ಈಗ ನಾವು ಉಚ್ಚತರ ಸ್ಥಿತಿಯನ್ನು ಹೊಂದುವೆವು. ಹೃದಯ ಮಂಡಲದ ಸಾರಸರ್ವಸ್ವವೂ ಇಲ್ಲಿದೆ. ವಿಶ್ವದ ಸದ್ಯದ ಸ್ವರೂಪವು ಆ ಮಹಾ ಮನಸ್ಸಿನ ಕಾರ್ಯಗಳ ಮೂಲಕವೇ ಆಗಿದೆ. ಆ ಕಾರ್ಯಗಳೆಲ್ಲ ಯಾವ ಸಂಮ್ಮಿಶ್ರಣವೂ ಇಲ್ಲದ, ಬೆಳಕೂ ಇಲ್ಲದ ಶುದ್ಧಶಕ್ತಿಗಳು. ಹೃದಯ ಮಂಡಲವು ಮೂಲ ರೂಪದಲ್ಲಿ ಬಂದಾಗ ಅದು ಶಾಂತಿಯಿಂದ ತುಂಬಿ ತುಳುಕುತ್ತಿರುವುದೆಂದು ನಾವು ಆಗಲೇ ಹೇಳಿದ್ದೇವೆ. ಅದು ಎಂಥ ಶಾಂತಿಯೆಂಬುದು ಮಾತ್ರ ಕಲ್ಪನಾತೀತವಾಗಿದೆ. ಆದರೆ ಹೇಗಾದರೂ ಅದನ್ನು ವ್ಯಕ್ತಗೊಳಿಸಬೇಕೆಂಬ ದೃಷ್ಟಿಯಿಂದ ಹೇಳುವುದಾದರೆ, ಹೃದಯಮಂಡಲ ದಲ್ಲಿಯ ಶಾಂತಿಗಿಂತ ಅದು ನಯವುಳ್ಳದ್ದಾಗಿರುತ್ತದೆಂದು ಸ್ಥೂಲವಾಗಿ ಹೇಳಬಹುದು. ಈಗ ಅಲ್ಲಿ ಉಳಿದಿರುವುದು ಶಾಂತಿಯ ಕಲ್ಪನೆ ಮಾತ್ರ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಶಾಂತಿಯನ್ನಷ್ಟೇ ಪಡೆಯುವುದು ನಮ್ಮ ಗುರಿಯಲ್ಲವಾದ್ದರಿಂದ ಶಾಂತಿಯ ಮರೆವಿನ ಸ್ಥಿತಿಯು ಅಲ್ಲಿ ಗಾಢವಾಗಿರುವುದು. ಈ ಮಜಲನ್ನು ಪ್ರವೇಶಿಸಿದಾಗ ನಮ್ಮ ಅನುಭವ ಶಕ್ತಿಯು ಬಹುಮಟ್ಟಿಗೆ ಹೆಚ್ಚುವುದು. ಈಗ, ಅನುಭವ ಪಡೆಯುವುದೊಂದೇ ಉಳಿಯುವುದು. ಇಲ್ಲಿಂದಲೇ ಪದಾರ್ಥಗಳು ರೂಪುಗೊಂಡು ಬೆಳಕಿಗೆ ಬರುವವು. ಇಲ್ಲಿ ಚಲನವಿದೆ. ಸೃಷ್ಟಿರಚನೆಯ ಉದ್ದೇಶದಿಂದ ಅವ್ಯಕ್ತ ಚಲನಗಳು ವೃದ್ಧಿ ಹೊಂದಿ ಕೆಳಗಡೆ ಒತ್ತಡವನ್ನು ಹೆಚ್ಚಿಸುವವು. ತತ್ಪರಿಣಾಮವಾಗಿ ನಾವು ಸೃಷ್ಟಿಯಲ್ಲಿ ಅಸಂಖ್ಯ ವೈವಿಧ್ಯಗಳನ್ನು ಕಾಣುವೆವು. ಈ ಮಂಡಲವು ಆಕಾಶದ ಒತ್ತಡವನ್ನು ಮೀರಿದೆಯಾದ್ದರಿಂದ ಅಲ್ಲಿ ಗಾಳಿಯು ಬೀಸುವುದಿಲ್ಲ. ಇದು ಭಗವಂತನ ಅತ್ಯಂತ ಪ್ರಬಲವಾದ

ಕ್ಷೇತ್ರ. ನಿಮ್ಮ ತಿಳುವಳಿಕೆಗಾಗಿ. ನೀವದನ್ನು ದೈವೀಯಂತ್ರವನ್ನು ನಡೆಸುವ ಶಕ್ತಿ ಕೇಂದ್ರವೆಂದು ಕರೆಯಬಹುದು. ಕಂಪನಗಳನ್ನು ಉದ್ರೇಕಿಸುವ ಅದ್ಭುತ ಶಕ್ತಿಯುಳ್ಳ ಅಚಲ ವಸ್ತುಗಳು ಅಲ್ಲಿರುವವು. ಈ ಕಲ್ಪನೆಯನ್ನು ಸ್ಪಷ್ಟಪಡಿಸುವುದು ಬಹಳ ಕಠಿಣ. ಅದನ್ನು ಅನುಭವಿಸಿಯೇ ತಿಳಿಯಬೇಕು. ಅವ್ಯಕ್ತವಾಗಿದ್ದರೂ, ಚಲನವಿರುವಾಗ ಅಲ್ಲಿ ಶಾಂತಿಯು ಹೇಗಿರುವುದೆಂದು ಜನರು ಸಂದೇಹಪಡಬಹುದು. ಸೃಷ್ಟಿಯ ಕಲ್ಪನೆಯನ್ನು ಅಗೋಚರವೆಂದು ಹೇಳಿದಂತೆ ಶಾಂತಿಯಾದರೂ ಅತಿ ಸೂಕ್ಷ್ಮವೂ ಅಗೋಚರವೂ ಆಗಿದೆಯೆಂದು ಹೇಳಬಹುದು. ಎಷ್ಟಾದರೂ ಅದು ಏನಾದರೊಂದು ವಿಷಯವೇ ಆಯಿತು. 'ಅಸತ್' ಅಥವಾ 'ಶೂನ್ಯ'ವೆಂದು ಹೇಳಲಾದ ಬಿಂದುವಿಗೆ ನಾವಿನ್ನೂ ಬಂದಿಲ್ಲ. ಹಾಗಾದರೆ ಆ ಸ್ಥಿತಿಯನ್ನು ನಾವು ಯಾವಾಗ ಮುಟ್ಟುವೆವು? ನಾವು ನಮ್ಮನ್ನು ಶೂನ್ಯರನ್ನಾಗಿ ಮಾಡಿಕೊಂಡಾಗ ಮಾತ್ರ ಆ ಸ್ಥಿತಿಯನ್ನು ಹೊಂದುವೆವು. ಆ ಶೂನ್ಯ ಸ್ಥಿತಿಯನ್ನು ಹೊಂದಲು ನಾವು ಪರಾಮನಸ್ಸಿನಿಂದ ಬಲವನ್ನು ಪಡೆಯುವೆವು. ಈ ಸ್ಥಿತಿಯನ್ನು ಹೊಂದಲು ದೇವತೆಗಳು ಸಹ ಹಂಬಲಿಸುವರು. ಆದರೆ ಯಾರು ಎಲ್ಲ ಸಂಸ್ಕಾರಗಳಿಂದ ಮುಕ್ತರಾಗಿ 'ಜೀವನ್ಮೃತ'ರಾಗಿರುವರೋ ಅವರಿಗೆ ಮಾತ್ರ ಈ ಸ್ಥಿತಿಯ ಸ್ಪರ್ಶವುಂಟಾಗುವುದು. ಈಗ ದೈವೀ ಪ್ರಭೆಯೂ ಮಾಯ ವಾಗುವುದು. ಆದರೂ ಕಿಂಚಿತ್ ಪ್ರಮಾಣದಲ್ಲಿ ಉಳಿದಿರುವುದು. ಆದರೆ ಸ್ವಲ್ಪ ದೂರ ಹೋದ ಮೇಲೆ ಅದೂ ಕೈಬಿಡುವುದು. ಇದರರ್ಥವಿಷ್ಟೆ. ಈಗ ನೀವು ಮುಟ್ಟಬೇಕಾದ ಸ್ಥಿತಿಯನ್ನು ಪ್ರವೇಶಿಸಲು ಸಿದ್ಧತೆ ನಡೆಸಿರುವಿರಿ. ದೈವೀ ಪ್ರಭೆಯ ಎಲ್ಲೆಯು ಸ್ವಲ್ಪ ದೂರದವರೆಗೆ ಚಾಚಿಕೊಂಡಿದ್ದು ಅಲ್ಲಿಂದ ಮುಂದೆ ಅದರ ಕಲ್ಪನೆ ಮಾತ್ರ ಉಳಿಯುವುದು. ಮುಂದೆ ನಡೆಯಿರಿ; ಅದೂ ಮಾಯವಾಗುವುದು. ಈಗ ಅಭಿವ್ಯಕ್ತಿಯು ಸಾಧ್ಯವಿಲ್ಲ. ಮನೋಮಂಡಲ ವನ್ನು ದಾಟಿದ್ದಾಯಿತು.

* * *

# ಕೇಂದ್ರಮಂಡಲ

ಮನೋಮಂಡಲವನ್ನು ದಾಟಿದ ಮೇಲೆ ಕೇಂದ್ರಮಂಡಲ ಬರುವುದು. ಈ ಕ್ಷೇತ್ರದಲ್ಲಿ ಅತ್ಯಂತ ಶ್ರೇಷ್ಠವಾದ ಪ್ರಜ್ಞಾನವಿರುವುದು. 'ಸಹಜ ಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ'ದಲ್ಲಿ ತಿಳಿಸಲಾದಂತೆ ಇಲ್ಲಿ ಮತ್ತೆ 'ವಿಲೋಮ'ದ ಸಿದ್ಧಾಂತವು ಅನ್ವಯಿಸುವುದು. ಹೃದಯದ ಬಲಭಾಗದಲ್ಲಿರುವುದೆಲ್ಲ ಈ ಪ್ರದೇಶದಲ್ಲಿಯೂ ಇದೆ. 'ಡ೩' ಎಂಬ ಬಿಂದುವು ಪ್ರಜ್ಞಾನದ ಚರಮಾವಸ್ಥೆಯಾಗಿದೆ. ಅಲ್ಲಿ ಎಲ್ಲವೂ ಕೊನೆಗೊಂಡು ಶೂನ್ಯದ ಸ್ಥಿತಿಯಿರುವುದು. ಅದು ಪ್ರಜ್ಞಾನದ ಅತ್ಯಂತ ಶ್ರೇಷ್ಠವಾದ ಸ್ಥಿತಿ.




ಆಕೃತಿ ೫

ಇಂಥ ಪ್ರಜ್ಞಾನ ವಿಶೇಷವು ಭಗವದವತಾರಕ್ಕಾಗಿ ಮೀಸಲಾಗಿದೆ. ಬಹು ವಿರಳ ಹಾಗೂ ಅಸಾಧಾರಣವಾದ ಹಲವು ಸಂದರ್ಭಗಳಲ್ಲಿ ಜಗತ್ತಿನ ಬದಲಾವಣೆಗಾಗಿ ಬಂದ ವಿಭೂತಿಗೂ ಇದನ್ನು ಕರುಣಿಸಲಾಗುವುದು. ಭಗವದವತಾರದ ನಂತರ ಆತನ ಸ್ಥಾನವು ಬರುವುದು. ನಿಸರ್ಗದ ಕಾರ್ಯಕ್ಕಾಗಿ ಆತನು ವಸ್ತುತಃ ಅದೇ ಸ್ಥಾನವನ್ನು ಪಡೆದಿರುವನು.

ಈಗ ನಿಸರ್ಗದಲ್ಲಿ ಆಮೂಲಾಗ್ರ ಪರಿವರ್ತನವಾಗಬೇಕಾಗಿದೆ. ಮತ್ತು ಈ ಕಾರ್ಯಕ್ಕಾಗಿ ವಿಭೂತಿಯೊಬ್ಬನುದಯಿಸಿ ಸುಮಾರು ಎರಡೂವರೆ

ವರ್ಷಗಳಿಂದ * ಆ ಕಾರ್ಯದಲ್ಲಿ ತೊಡಗಿರುವನೆಂದು ನಾನು ನಿಮಗೆ ಆಶ್ವಾಸನೆ ಕೊಡಬಲ್ಲೆ. ಜಗತ್ತಿಗೆ ಸಾಮಾನ್ಯವಾಗಿ ಅಜ್ಞಾತವಾಗಿಯೇ ಉಳಿದ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅತ್ಯುನ್ನತ ಮಟ್ಟದಲ್ಲಿರುವ ಇಂದಿನ ಮಹರ್ಷಿಗಳು ಈತನ ನಿರ್ದೇಶದಂತೆ ಕೆಲಸ ಮಾಡುತ್ತಿದ್ದಾರೆ. ಇಷ್ಟೇ ಅಲ್ಲ, ಮುಂದಿನ ಕಾರ್ಯಕ್ಕಾಗಿ ವ್ಯಕ್ತಿಗಳು ತರಬೇತಿ ಹೊಂದುತ್ತಿದ್ದಾರೆ. ದರ್ಶನ ಶಕ್ತಿಯನ್ನು ಪಡೆದವರು ಆತನ ಕೆಲಸವನ್ನೂ ಅದರ ಪರಿಣಾಮವನ್ನೂ ಅರಿಯ ಬಲ್ಲರು. ಮುಂದಿರುವ ಕೆಲಸವು ಬಹಳ ಮಹತ್ತ್ವದ್ದಾಗಿದೆ. ಕೊನೆಗೆ ಅದರ ಪರಿಣಾಮವೆಂದರೆ ಪರಿವರ್ತನೆ. ಇದಕ್ಕಾಗಿ ಆತನಿಗೆ ತುಂಬ ಸಮಯ ಹಿಡಿಯಬಹುದಾದರೂ ಪರಿಣಾಮವು ಅಪರಿಹಾರ್ಯವಾಗಿದೆ. ಅನಂತರ ಜಗತ್ತು ತನ್ನ ನಿಜರೂಪದಿಂದ ಶೋಭಿಸುವುದು. ಆತನ ಅಧೀನದಲ್ಲಿರುವ ನಿಸರ್ಗದ ವಿವಿಧ ಶಕ್ತಿಗಳು, ಆತನು ಕ್ಷೇತ್ರವನ್ನು ಸಿದ್ಧಗೊಳಿಸಿದ ನಂತರ, ಆತನ ನಿರ್ದೇಶದಂತೆ ಕೆಲಸದಲ್ಲಿ ತೊಡಗುವ ಕಾಲವು ಶೀಘ್ರದಲ್ಲಿಯೇ ಬರಲಿದೆ. ಆ ಶಕ್ತಿಗಳೆಲ್ಲ ಆ ಕಾರ್ಯಕ್ಕಾಗಿ ಕಾಯ್ದು ಕುಳಿತಿವೆ. ಇಂಥ ವಿಭೂತಿಯು ನಿಸರ್ಗದ ಯಂತ್ರೋಪಕರಣವನ್ನು ಸರಿಯಾಗಿ ನಡೆಸುವಂತೆ ಮಾಡಲು ನೇರವಾಗಿ ಶಕ್ತಿಯನ್ನು ಪಡೆಯುವನು. ಶ್ರೇಷ್ಠವಾದ ಅತೀಂದ್ರಿಯ ದರ್ಶನ ಶಕ್ತಿಯುಳ್ಳ ಹಾಗೂ ಮುಕ್ತಾತ್ಮರೊಂದಿಗೆ ವ್ಯವಹರಿಸುವ ಶಕ್ತಿಯುಳ್ಳ ಮಹಾತ್ಮರು ಆ ವಿಭೂತಿಯೊಂದಿಗೆ ನೇರವಾಗಿ ಸಂಲಾಪಿಸಿಯಾಗಲಿ, ನಿಸರ್ಗವನ್ನು ವೀಕ್ಷಿಸಿಯಾಗಲಿ ಈ ಸಂಗತಿಗಳನ್ನು ಮನಗಾಣಬಹುದು. ಉಳಿದವರು ಕಾಲಕ್ರಮದಲ್ಲಿ ಪರಿಣಾಮಗಳು ವ್ಯಕ್ತವಾದಾಗ ನೋಡುವರು.

ಈಗ ಮತ್ತೆ ಮೂಲ ವಿಷಯಕ್ಕೆ ಬರೋಣ. ಇಲ್ಲಿ ನಮ್ಮ ಚುವಟಿಕೆಗಳೆಲ್ಲ ಕೊನೆಗೊಂಡು ನಾವೀಗ ಶುದ್ಧರೂಪದಲ್ಲಿ ಭಗವತ್ ಕ್ಷೇತ್ರವನ್ನು ಪ್ರವೇಶಿಸಿದ್ದೇವೆ. ನಾವು ಗುರಿಯನ್ನು ಮುಟ್ಟಿ ಅದರಲ್ಲಿ

---

* ಎರಡೂವರ ವರ್ಷಗಳೆಂದರೆ ಈ ಪುಸ್ತಕವು ಬರೆಯಲ್ಪಟ್ಟ ಕಾಲದಿಂದ ಅರ್ಥಾತ್ ಇದು ಮೊಟ್ಟಮೊದಲು ಪ್ರಕಾಶಿತವಾದ ವರ್ಷಕ್ಕಿಂತ (೧೯೫೦) ಆರು ವರ್ಷ ಹಿಂದೆ. ಎಂದರೆ ಕ್ರಿ.ಶ. ೧೯೪೪ನೆಯ ಇಸ್ವಿಯಿಂದಲೂ ಸೃಷ್ಟಿಯ ಪರಿವರ್ತನೆಗಾಗಿ ಈ ವಿಭೂತಿ ಪುರುಷನು ಕಾರ್ಯೋನ್ಮುಖನಾಗಿದ್ದಾನೆ.

ಪ್ರವೇಶ ಹೊಂದಿದ್ದೇವೆ. ಆತ್ಮ ಸಾಕ್ಷಾತ್ಕಾರವಾಗಿದೆ. ಹೃದಯ ಮಂಡಲದಲ್ಲಿರುವ ಪ್ರಜ್ಞೆ ಹಾಗೂ ಮನೋಮಂಡಲದಲ್ಲಿ ಬೇರು ಬಿಟ್ಟಿರುವ ಅದರ ಮೂಲ ಶಕ್ತಿಗಿಂತ ನಾವು ಬಹಳ ಮೇಲ್ಮಟ್ಟದಲ್ಲಿದ್ದೇವೆ. ಈಗ ನಾವು ಕೊನೆಯಿಲ್ಲದ ಪುನರ್ಜನ್ಮದ ಚಕ್ರದಿಂದ ಮುಕ್ತರಾಗಿರುವೆವು.

ಜನರು ಈ ಘಟ್ಟವನ್ನು 'ಸತ್ಯ'ವೆಂದು ಕರೆಯಬಹುದು. ಆದರೆ ನಾವು ಸೇರಿದುದು 'ಸತ್ಯ'ವನ್ನಲ್ಲ. ಸತ್ಯವು ಬಹಳ ಹಿಂದುಳಿದಿದ್ದು ಈಗ ನಾವು ಅದರಲ್ಲಿ ನೆಲೆಸಿರುವುದಿಲ್ಲ. 'ಸತ್ಯ'ದ ಅರ್ಥವು ಏನಾದರೊಂದರ ಇರುವಿಕೆಯನ್ನು ಸೂಚಿಸುವುದು. ಆದರೆ ಇಲ್ಲಿ ಅದಿಲ್ಲ. ನಿಜವಾಗಿ, 'ಸತ್ಯ'ವು 'ಶೂನ್ಯ'ವೆಂದು ವರ್ಣಿಸಲಾದ ಸ್ಥಿತಿಯ ಅವಶೇಷ. ಹೆಚ್ಚು ಸ್ಪಷ್ಟಪಡಿಸಬೇಕಾದರೆ, ಪ್ರಜ್ಞೆಯ ಸ್ಥಿತಿಯಲ್ಲಿ ಕಾಣುವುದನ್ನೆಲ್ಲ ಜನರು 'ಸತ್ಯ'ವೆಂದು ಹೊಗಳುವರು. ಆದರೆ ಪ್ರಜ್ಞೆಯು ನಮ್ಮ ಗುರಿಯಲ್ಲ. ಅದು ಕೇವಲ ಮಕ್ಕಳ ಆಟಿಕೆಯ ವಸ್ತುವಾಗಿದೆ. ಪ್ರಜ್ಞೆಯು ಎಲ್ಲಿ ತನ್ನ ನೈಜ ರೂಪವನ್ನು ತಾಳಿರುವುದೋ ಆ ಬಿಂದುವನ್ನು ನಾವು ಮುಟ್ಟಬೇಕಾಗಿದೆ. ಯಾವುದರಿಂದ ಔಷಧಗಳು ಸಿದ್ಧವಾಗುವವೋ ಆ 'ಮೂಲಾರ್ಕ'ವನ್ನು ನಾವು ಶೋಧಿಸಬೇಕಾಗಿದೆ. ಪ್ರಜ್ಞೆಯನ್ನು ಸೃಷ್ಟಿಸುವ ಶಕ್ತಿಯನ್ನು ನಾವು ಶೋಧಿಸುತ್ತಿದ್ದೇವೆ. ಅದೂ ಇಲ್ಲದಂತಾದಾಗ ನಾವು ಶುದ್ಧ ಸರಳ 'ಸತ್ಯ'ದ ದಂಡೆಗೆ ಬರುವೆವು. ಈ ತತ್ವವು ಶಬ್ದಗಳಿಂದ ಸರಿಯಾಗಿ ವರ್ಣಿಸಲು ಬಾರದಷ್ಟು ಸೂಕ್ಷ್ಮವಾಗಿದೆ.

ಮೂಲಶಕ್ತಿಯನ್ನು ಹುಡುಕಬೇಕೆಂದು ನಾನು ಹೇಳುವುದರ ಅರ್ಥವಾಯಿತೆ? ಅದರ ಮೂಲವಾವುದು? ಅಥವಾ ಅದು ಎಲ್ಲಿಂದ ಬರುವುದು? ನಿಜವಾದ ಯೋಗಿಯ ವಿಶ್ರಾಮ ಧಾಮವಾದ 'ತಮ'ದಿಂದ ಅದು ಉದ್ಭವಿಸುವುದು. ಅದು ತ್ರಿಗುಣಗಳಲ್ಲೊಂದಾದ 'ತಮ'ವಲ್ಲ; ಆದರೆ 'ಸಹಜ ಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ'ವೆಂಬ ನನ್ನ ಪುಸ್ತಕದಲ್ಲಿ ವರ್ಣಿಸಲಾದ ಸ್ಥಿತಿಯನ್ನು ಸೂಚಿಸುವ ಪದವಾಗಿದೆ. ಮುಕ್ತಾತ್ಮರು ತಮ್ಮ ತಮ್ಮ ಅಂತಸ್ತಿಗನುಸಾರವಾಗಿ ಆ ನಿಜ ಸ್ಥಿತಿಯಲ್ಲಿ ಭಾಗಿಗಳಾಗುವರು. ಕೆಲ ತತ್ವಜ್ಞಾನಿಗಳು ತಿಳಿಯುವಂತೆ, ಮುಕ್ತಾತ್ಮರು ಪ್ರತ್ಯಕ್ಷ ಪ್ರಜ್ಞೆಯನ್ನು ಹೊಂದಿರದೆ ಕೇವಲ ಪ್ರಜ್ಞೆಯ ಬೀಜವನ್ನು ಮಾತ್ರ ಪಡೆದಿರುವರೆಂಬುದು

ತಪ್ಪುಗ್ರಹಿಕೆಯಾಗಿದೆ. ನಿಸ್ಸಂದೇಹವಾಗಿ ಮುಕ್ತಾತ್ಮರು ತಮ್ಮ ಸಾಮರ್ಥ್ಯವನ್ನು ಎಷ್ಟರ ಮಟ್ಟಿಗೆ ಬೆಳೆಸಿಕೊಳ್ಳುವರೆಂದರೆ, ಅವರು ಪ್ರಜ್ಞೆ ಹಾಗೂ ಅದರ ಬೀಜವೆರಡನ್ನೂ ತಮಗೆ ಬೇಕಾದ ರೀತಿಯಲ್ಲಿ ಉಪಯೋಗಿಸಬಲ್ಲವರಾಗಿದ್ದರೂ ಅವೆರಡಕ್ಕಿಂತ ಮೇಲಿನ ಮಟ್ಟದಲ್ಲಿರುವರು ಮತ್ತು ಆಗ ಮಾತ್ರವೇ ಮುಕ್ತಿಯು ಸಾಧ್ಯವಾಗುವುದು. ನಿಮ್ಮಲ್ಲಿ ಬೀಜವಿದ್ದರೆ 'ಶೂನ್ಯಾವಸ್ಥೆ'ಯ ಕಲ್ಪನೆಯಿಂದ ಬಹುದೂರವಿರೆಂದು ಅದರರ್ಥವಾಯಿತು.

ಸಾಮಾನ್ಯವಾಗಿ ತತ್ತ್ವಜ್ಞಾನಿಗಳು ತಮ್ಮ ವಿಚಾರಗಳಿಗನುಸಾರವಾಗಿಯೇ ಜನರನ್ನು ಎಳೆಯಲು ಯತ್ನಿಸುವರು. ಆದರೆ ಅದು ಸರಿಯಾದ ದಾರಿಯಲ್ಲವೆಂದು ನನಗೆನಿಸುವುದು. ಆತ್ಮ ಸಾಕ್ಷಾತ್ಕಾರದಲ್ಲಿ ಪ್ರತ್ಯಕ್ಷಾನುಭವವೇ ಸಹಾಯಕಾರಿಯಾಗುವುದು. ಈ ದಿಶೆಯಲ್ಲಿ ಬೇರೆ ಯಾವುದೇ ಮಾರ್ಗವಾಗಲಿ ಗ್ರಂಥವಾಗಲಿ ಶಾಸ್ತ್ರವಾಗಲಿ ಪ್ರಯೋಜನಕ್ಕೆ ಬರುವುದಿಲ್ಲ. 'ಏಕತ್ವ'ದ ಅಥವಾ 'ಶೂನ್ಯಾವಸ್ಥೆ'ಯ ಸಾಕ್ಷಾತ್ಕಾರವನ್ನು 'ಸತ್ಯ'ದ ಸಾಕ್ಷಾತ್ಕಾರವೆಂದು ಹೇಳುವುದು ಎಂಥ ವಿಪರ್ಯಾಸ! 'ಸತ್ಯಕ್ಕೆ ತನ್ನದೇ ಆದ ಒಂದು ವ್ಯಾಖ್ಯೆಯಿದೆ. ಆದರೆ ನಾವು ಕಟ್ಟಕಡೆಗೆ ತಲುಪಬೇಕಾದುದು ಎಲ್ಲವುಗಳ ಆಚೆಗಿದೆ.

ಕೇಂದ್ರಮಂಡಲದ ಶೋಧಕ್ಕಿಂತ ಮುಂಚೆ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ 'ಸತ್ಯ'ವೇ ಪ್ರಧಾನವಾಗಿದ್ದಿತು. ಸತ್ಯವು ಎಲ್ಲೆಡೆಯಲ್ಲಿಯೂ ಇದೆ; ಅದು ಮಾನವ ಜೀವನದ ವಿಕಾಸದ ಪ್ರತಿಯೊಂದು ಘಟ್ಟದಲ್ಲಿಯೂ ಇದೆ. ಆಧ್ಯಾತ್ಮ ವಿಜ್ಞಾನದಲ್ಲಿ ಪದಾರ್ಥಗಳ ಸತ್ಯತೆಯನ್ನು ತೋರಿಸಲು ಜನರು ಸಾಮಾನ್ಯವಾಗಿ ಈ ಪದವನ್ನು ಬಳಸುವರು. ಭೌತ ವಸ್ತುವಿನಿಂದ ದೂರವಾದ ಯಾವುದೇ ಪದಾರ್ಥವನ್ನು ಅರ್ಥಾತ್ ಭೌತಿಕತ್ವವು ಮುಗಿದ ನಂತರ ಉಳಿಯುವುದನ್ನು 'ಸತ್ಯ'ವೆಂದು ಹೇಳಬಹುದು. ಆದರೆ ಇವೆರಡೂ ಕೊನೆಗೊಂಡಾಗ ನೀವು ಏನೆನ್ನುವಿರಿ? ಅದನ್ನು 'ಸತ್ಯ'ವೆಂದು ಕರೆಯಲಾದೀತೇ? ಇಲ್ಲ. ಏಕೆಂದರೆ ಭೌತಿಕತ್ವ ಅಥವಾ ಜಡತ್ವವು ಮುಗಿದಾಗ ಪ್ರವೃತ್ತಿ ಅಥವಾ ಚೈತನ್ಯತೆಯು ಬರುವುದು. ಇವೆರಡರ ಆಚೆ ನೀವು ನಡೆದಾಗ ಈ ವಸ್ತುಗಳು ಎಲ್ಲಿಂದ ಬಂದುವೋ ಆ ಸ್ಥಿತಿಯನ್ನು ತಲುಪುವಿರಿ. ಅವುಗಳನ್ನು ದಾಟದೆ ಇರುವವರೆಗೆ ನೀವು 'ಸತ್ಯ'ದ ಸೀಮೆ

ಯಲ್ಲಿಯೇ ಇರುವಿರಿ. ಅದನ್ನು ದಾಟಿದಾಗ ಸತ್ಯವೂ ಹೊರಟುಹೋಗಿ "ನಿಷ್ಕ್ರಿಯತೆ" ಅಥವಾ "ಶೂನ್ಯತೆ"ಯೇ ಉಳಿಯುವುದು.

ಜನರು ಅಹಂಕಾರದ ಬೆನ್ನುಹತ್ತಿದ್ದು ಅದಕ್ಕೆ ಬಲಿಯಾಗುತ್ತಿದ್ದಾರೆ. ಅದು ಜಡ ಶರೀರದ ರೂಪದಲ್ಲಾಗಲಿ ಅದರ ಸೂಕ್ಷ್ಮರೂಪದಲ್ಲಾಗಲಿ ಅದಕ್ಕಿಂತ ಮೇಲಾಗಲಿ ಕಾಣಿಸಿಕೊಳ್ಳುತ್ತದೆ. ಭಗವಂತನನ್ನು ಸಾಕ್ಷಾತ್ಕರಿಸಿ ಕೊಳ್ಳಲು ಇದೊಂದು ಪ್ರತಿಬಂಧಕವಾಗಿದೆ. ಅದು ಹೃದಯ ಮಂಡಲದಿಂದ ಪ್ರಾರಂಭವಾಗಿ ಅದನ್ನು ದಾಟಿದ ಮೇಲೆ ತನ್ನ ಜಡತ್ವವನ್ನು ಕಳೆದು ಕೊಳ್ಳುವುದು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ 'ಅಹಂ'ಕಾರವು ತೊಲಗಿ ಹೋಗುವುದು. ಹೃದಯಮಂಡಲವನ್ನು ದಾಟಿದ ನಂತರ 'ಮಮ'ಕಾರವೂ ಅಪ್ಪಣೆ ತೆಗೆದುಕೊಳ್ಳುವುದು. ಈಗ ಆತನು ಭಗವಂತನ ಮನೋಮಂಡಲ ದಲ್ಲಿ ಪ್ರವೇಶಿಸಿದ್ದಾನೆ. ಈ ವಲಯದಲ್ಲಿ ಬಹು ಸೂಕ್ಷ್ಮವಾದ ಅಹಂಕಾರ ವಿರುವುದು. ಅದನ್ನು ನಯವಾದ ಅಹಂಕಾರವೆಂದು ಹೇಳಬಹುದು. ಆದರೆ ದೋಷವು ಎಷ್ಟೆಂದರೂ ದೋಷವೇ. ಅದು ತನ್ನ ವಾಸಸ್ಥಾನವಾದ ಮನೋಮಂಡಲಕ್ಕೆ ಬಂದಾಗ ಅದರ ಶಕ್ತಿಯು ಹೆಚ್ಚಾಗುವುದು. ಏಕೆಂದರೆ ನೀವು ಅದರೊಂದಿಗೇ ಮುಂದುವರಿಯುತ್ತ ಕಂಪನಗಳ ರೂಪದಲ್ಲಿ ಕಾಣಿಸಿಕೊಳ್ಳುವ ಚಲನದಿಂದ ಶಕ್ತಿಯನ್ನು ಪಡೆಯುವಿರಿ. ಈಗ ನಿಮ್ಮ ಗುರಿಯು ಯಥಾರ್ಥವಾದುದಾಗಿದ್ದು ಅದನ್ನು ಸಾಧಿಸಬೇಕೆಂಬ ನಿಮ್ಮ ಸಂಕಲ್ಪವಾದರೂ ದೃಢವೂ ಪೂರ್ಣವೂ ಆಗಿದ್ದರೆ ನೀವು ಕೇಂದ್ರಮಂಡಲ ದಿಂದ ಶಕ್ತಿಯನ್ನು ಹೀರತೊಡಗುವಿರಿ. ಆಗ ಮುಂದಿನ ನಿಮ್ಮ ಪ್ರಗತಿಗೆ ಆ ಶಕ್ತಿಯು ಸಂಕಲ್ಪವನ್ನು ರೂಪಿಸುತ್ತ ಹೋಗುವುದು. ನೀವು ಕೇಂದ್ರಮಂಡಲ ದಲ್ಲಿ ಮುಂದುವರಿದಾಗ ಆ ಅಹಂಕಾರವು ಸಾರೂಪ್ಯವಾಗಿ ಕಾಣಿಸಿ ಕೊಳ್ಳುವುದು. ನೀವು ನಿಮ್ಮ ಶರೀರವನ್ನು ಬಿಡುವವರೆಗೂ ಅದು ಆ ಕ್ಷೇತ್ರ ದಲ್ಲಿ ಕಾರ್ಯ ಮಾಡುವುದು. ಅಲ್ಲಿ ಚಿತ್ತವಿಲ್ಲ. ಒಂದು ರೀತಿಯಿಂದ ನೀವು ಆವರಣರಹಿತರಾಗುವಿರಿ. ಆದುದರಿಂದ ಅಹಂಕಾರವಾದರೂ ಆವರಣರಹಿತ ವಾಗಿರುವುದು. ಕೊನೆಗೆ ಅದು ಮುಕ್ತಾತ್ಮರ ಸಾರೂಪ್ಯ ಚಿಹ್ನವಾಗುವುದು. ಅದೀಗ ಬಹುಮಟ್ಟಿಗೆ ನಾಶವಾಗಿದೆ ಎಂದೇ ಹೇಳಬಹುದು.


ಬೇರೆ ಬೇರೆ ವಲಯಗಳಲ್ಲಿಯ ಅಹಂಕಾರದ ಸ್ಥಿತಿಗಳನ್ನು ಓದುಗರು ನಿರ್ಣಯಿಸಲೆಂಬ ದೃಷ್ಟಿಯಿಂದ ಈ ವಿಷಯವಾಗಿ ಸ್ವಲ್ಪಮಟ್ಟಿಗೆ ಹೆಚ್ಚು ವಿವರಣೆ ಮಾಡಿದರೆ ಅಪ್ರಸ್ತುತವಾಗಲಾರದು. ಅಹಂಕಾರದ ಕಲ್ಪನೆಯು ದೇಹದಿಂದ ಆರಂಭವಾಗುವುದು. ಈ ಪ್ರಭಾವದಲ್ಲಿ ನೀವು ಯಾವುದಾದರೊಂದು ಕಾರ್ಯವನ್ನು ಮಾಡಿದಾಗ ಅದನ್ನು ನೀವು (ನಿಮ್ಮ ದೇಹವು) ಮಾಡುತ್ತಿರುವಿರೆಂಬ ಕಲ್ಪನೆಯಿಂದ ವಿಷಯಗಳ ಸ್ಥೂಲತೆಯನ್ನು ಅನುಭವಿಸುವಿರಿ. ಇದು ಅತ್ಯಂತ ಕೆಳದರ್ಜೆಯ ಅಥವಾ ಸ್ಥೂಲತಮವಾದ ಅಹಂಕಾರ. ಈ ಸ್ಥಿತಿಯಲ್ಲಿ ಮನುಷ್ಯನ ದೃಷ್ಟಿಯು ತನ್ನ ಶರೀರದ ಮೇಲೆಯೇ ನೆಟ್ಟಿರುವುದು. ಅವನು ತನ್ನ ಶರೀರವೇ ಕರ್ತೃವೆಂದು ತಿಳಿದು ಹಾಗೆ ಅನುಭವಿಸಿ ಅದಕ್ಕಿಂತ ಮುಂದೆ ಹೋಗಲಾರನು. ಅವನಿಗೆ ಸ್ಥೂಲ ದೇಹದ ಹೊರತಾಗಿ ಬೇರೆ ಯಾವ ಕಲ್ಪನೆಯೂ ಇರುವುದಿಲ್ಲ. ಇದು ಜಗತ್ತಿನ ಸಾಮಾನ್ಯ ಜನರ ಸ್ಥಿತಿ.

ನೀವು ಮುಂದುವರಿದಂತೆಲ್ಲ ನಿಮ್ಮ ದೇಹದಿಂದ ಬೇರೆಯಾದ ಯಾವುದೋ ಒಂದು, ಕಾರ್ಯಗಳ ಕರ್ತೃವೆಂಬುದನ್ನು ಅನುಭವಿಸುವಿರಿ. ಇದು ಅಹಂಕಾರದ ಎರಡನೆಯ ಘಟ್ಟ. ಇಲ್ಲಿ ಮನುಷ್ಯನ ದೃಷ್ಟಿಯು ಭೌತಿಕ ಶರೀರವನ್ನು ದಾಟಿ ಒಳಗಡೆ ಸೂಕ್ಷ್ಮ ವಸ್ತುವಿನ ಮೇಲೆ ಬೀಳುವುದು. ಜನರು ತಮ್ಮ ತಮ್ಮ ವಿಚಾರ–ವಿಶ್ವಾಸಗಳಿಗನುಗುಣವಾಗಿ ಬೇರೆ ಬೇರೆ ಅನುಭವ ಗಳನ್ನು ಪಡೆಯುವರು. ಕೆಲವರು ಆತ್ಮವೇ ಎಲ್ಲ ಕೆಲಸಗಳನ್ನು ಮಾಡುತ್ತಿ ರುವುದಾಗಿಯೂ ದೇಹವು ಕಾರ್ಮಿಕನ ಕೈಯಲ್ಲಿಯ ಯಂತ್ರದಂತೆಯೊ ಉಪಕರಣದಂತೆಯೊ ಕೆಲಸ ಮಾಡುತ್ತಿರುವುದಾಗಿಯೂ ಅನುಭವಿಸುವರು. ನಿಜವಾಗಿ ಕೆಲಸ ಮಾಡುತ್ತಿರುವವನು ಕಾರ್ಮಿಕನು. ಉಪಕರಣಗಳು ಆತನ ಸಹಾಯಕ್ಕಾಗಿ ಮಾತ್ರ. ಅದರಂತೆಯೇ ನಿಜವಾದ ಕರ್ತೃವು ಆತ್ಮವೇ ಹೊರತು ದೇಹವಲ್ಲ. ಕೆಲವರು, ಪ್ರಜ್ಞಾನ, ದೇವರು, ಗುರು ಅಥವಾ ತಾವು ಆದರ್ಶವಾಗಿಟ್ಟುಕೊಂಡ ಯಾವುದೇ ವಸ್ತುವು ನಿಜವಾದ ಕರ್ತೃವೆಂದು ಅನುಭವಿಸುವರು. ಇಲ್ಲಿ ಭೌತಿಕ ಶರೀರವು ಕಾರ್ಯ ಮಾಡುತ್ತಿರುವುದೆಂಬ ಕಲ್ಪನೆಯು ಮರೆತುಹೋಗಿದೆ. ಹೀಗೆಯೇ ಮುಂದುವರಿದರೆ ನೀವು ಮಾಡುವು

ಅಥವಾ 'ಮುಕ್ತಾತ್ಮರ ಸಾಮಾನ್ಯ ಕುರುಹು' ಇನ್ನೂ ಉಳಿದಿರುವುದು. ಅದು ಮಹಾಪ್ರಳಯದ ಕಾಲಕ್ಕೆ ಮಾತ್ರ ಎಲ್ಲವೂ ನಷ್ಟವಾದಾಗ ಇಲ್ಲದಂತಾಗುವುದು. 'ಶೂನ್ಯ'ವೆಂಬುದು ಆಗಲೂ ಉಳಿಯುವುದು. ಎಂದರೆ ಮುಕ್ತಾತ್ಮರ ಎಲ್ಲ ಸಾರೂಪ್ಯಗಳೂ, ಅಸ್ತಿತ್ವದಲ್ಲಿರುವ ಪ್ರತಿಯೊಂದು ವಸ್ತುವಿನ ಸಾರೂಪ್ಯವೂ ತಮ್ಮ ಪೃಥಕ್ ಚಿಹ್ನೆಗಳನ್ನು ಕಳೆದುಕೊಂಡು ಒಂದರಲ್ಲಿ ಲಯವಾಗುವವು ಮತ್ತು ಸಮಯ ಬಂದಾಗ ಮುಂದೆ ಹೊಸ ಸೃಷ್ಟಿಯನ್ನು ರಚಿಸಲು ಇದು ಸ್ವಯಂ ಒಂದು ಸಾರೂಪ್ಯವಾಗುವುದು.

ಆ ಸ್ಥಾನವನ್ನು ಸೇರಿದಾಗ ಮನುಷ್ಯನು ತಾನು ಆದೇಶ ಪಡೆದ ರೀತಿಯಲ್ಲಿ ವಿಶ್ವವನ್ನು ನಿಯಂತ್ರಿಸುವನು. ಆದೇಶಗಳು ಕೇವಲ ಮೂಲದಿಂದ ಬರುವವು. ಅವು ಹೇಗೆ ಬರುವವೆಂಬುದನ್ನು ನಾನು ಹೇಳಬಹುದಾಗಿತ್ತು. ಆದರೆ, ಅಂಥ ಅನುಭವವು ಪ್ರಾಪ್ತವಾಗದೆ, ತಪ್ಪು ತಿಳುವಳಿಕೆಯಾಗುವ ಸಂಭವವಿರುವುದರಿಂದ ಅದನ್ನಿಲ್ಲಿ ಹೇಳುವುದಿಲ್ಲ. ಆತನಿಗೆ ವಿಶಿಷ್ಟ ಶಕ್ತಿಗಳನ್ನು ಕೊಡಲಾಗುತ್ತದೆ ಮತ್ತು ಅವನು ಅವುಗಳಿಂದ ಕೆಲಸ ಮಾಡಲಾರಂಭಿಸುತ್ತಾನೆ. ಆತನು ಭಗವತ್ಕಾರ್ಯದ ತರಂಗವನ್ನು ಅನುಭವಿಸಿ ಅದರಂತೆ ಮಾಡತೊಡಗುವನು. ಭಗವಂತನ ಪ್ರತಿಯೊಂದು ಆಜ್ಞೆಯೂ ಆತನ ಮೂಲಕವಾಗಿಯೇ ಹೊರಡುತ್ತದೆ. ಅವನು ನಿಸರ್ಗದಲ್ಲಿಯ ಪ್ರತಿಯೊಂದನ್ನೂ ಗ್ರಹಿಸುವನು ಆತನ ದೃಷ್ಟಿಗೆ ಎಲ್ಲವೂ ಸ್ಪಷ್ಟವಾಗುವುದು. ಐಕ್ಯವು ಸಂಪೂರ್ಣ ವ್ಯಾಪಿಸಿ ಒಳಗೂ ಹೊರಗೂ ಅದನ್ನೇ ಅನುಭವಿಸುವನು. ಆತನು ಕಲ್ಲು, ಮನುಷ್ಯ ಅಥವಾ ಸಸ್ಯವನ್ನು ಜಡರೂಪದಲ್ಲಿರುವ ಹಾಗೆ ಗುರುತಿಸಲಾರನು. ಇಲ್ಲಿಗೆ ಬಂಧನಗಳೆಲ್ಲ ಮುಗಿದುಹೋಗುವವು. ಇದು ಚರಮ ಗುರಿಯಾಗಿದ್ದು ಜೀವನದ ಸಮಸ್ಯೆಯು ಪೂರ್ಣವಾಗಿ ಪರಿಹಾರವಾಯಿತು. ಇಲ್ಲಿ ಯಾವುದೇ ತರದ ಧ್ಯಾನವಾಗಲಿ ಪೂಜೆಯಾಗಲಿ ಬೇಕಾಗುವುದಿಲ್ಲ. ನಿಸರ್ಗದ ವಿವಿಧ ಶಕ್ತಿಗಳು ಆತನ ಅಂಕಿತದಲ್ಲಿದ್ದು ಅವುಗಳಿಂದ ಕೆಲಸ ತೆಗೆದುಕೊಳ್ಳುವನು. ಅವೆಲ್ಲ ಅವನ ಆಜ್ಞೆಯನ್ನು ಪಾಲಿಸುವವು. ಯಾವುದೇ ಒಂದು ಕಾಲಕ್ಕೆ ಇಂಥ ವಿಭೂತಿಯು ಸಮಸ್ತ ವಿಶ್ವದಲ್ಲಿ ಕೇವಲ ಒಬ್ಬನೇ ಒಬ್ಬನಿರುವನು. ಮಹಾಪ್ರಳಯದ ಕಾಲ ಬಂದಾಗ ಆಗ ಇರುವ ವಿಭೂತಿಯು, ಸೃಷ್ಟಿಯನ್ನು

ಲಯಗೊಳಿಸಲು ನಿಯಮಿತನಾದ ಮುಕ್ತಾತ್ಮನೊಂದಿಗೆ ಕೆಲಸ ಮಾಡುವನು. ಈ ಮುಕ್ತಾತ್ಮನು ಇತರರಿಗಿಂತ ಕೇಂದ್ರಕ್ಕೆ ಅತಿ ಸಮೀಪವಾಗಿರುವನು. ಆರನೆಯ ಆಕೃತಿಯಲ್ಲಿ ಮುಕ್ತಾತ್ಮರ ತರಣಸ್ಥಾನವನ್ನು ತೋರಿಸಲಾಗಿದೆ. ಅವರು ಕೇಂದ್ರಕ್ಕೆ ಸಮೀಪದಲ್ಲಿಯೇ, ವಿಶಾಲವಾದ ಅನಂತ ಕ್ಷೇತ್ರದಲ್ಲಿ ಈಜಾಡುತ್ತಿರುವರು. ಮೇಲೆ ವಿವರಿಸಲಾದಂತೆ ಮಹಾ ಪ್ರಳಯ ಬಂದಾಗಲೇ ಮುಕ್ತಾತ್ಮರು ತಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಳ್ಳುವರು.




ಆಕೃತಿ ೬

'ಕ' ಎಂದು ಗುರುತಿಸಲಾದ ಕೇಂದ್ರದ ಸುತ್ತಮುತ್ತಲಿನ ಸ್ಥಾನವು ಮುಕ್ತಾತ್ಮರು ಈಜಾಡುವ ಹಾಗೂ ಉತ್ತರಣ ಮಾಡುವ ಸ್ಥಾನವಾಗಿದೆ. ಇದು ಎಷ್ಟು ವಿಸ್ತಾರವಾಗಿದೆ ಎಂದರೆ, ಸೃಷ್ಟಿಯ ಆರಂಭದಲ್ಲಿಯ ಮೊಟ್ಟಮೊದಲನೆಯ ಋಷಿಯು ಇನ್ನೂ ಈಜುತ್ತಿದ್ದು ಈ ಸಾಗರದ ಮಧ್ಯ ಹಂತವನ್ನು ಕೂಡ ಮುಟ್ಟಲು ಶಕ್ತನಾಗಿಲ್ಲ. ದಿವ್ಯದೃಷ್ಟಿಯುಳ್ಳವರು ಅರ್ಥಾತ್ ಕೇಂದ್ರ ಮಂಡಲವನ್ನು ಮುಟ್ಟಿದಾಗ ಇರಬೇಕಾದ ದೃಷ್ಟಿಯುಳ್ಳವರು ನಾನು ಹೇಳಿದುದರ ಯಥಾರ್ಥತೆಯನ್ನು ಮನಗಾಣಬಹುದು.

ಈ ಕ್ಷೇತ್ರದಲ್ಲಿ, ನಾನು 'ಶೂನ್ಯತೆ'ಯೆಂದು ವರ್ಣಿಸಿದ ಸ್ಥಿತಿಯು ಶಕ್ತಿರಾಹಿತ್ಯದ ಕಲ್ಪನೆಯನ್ನು ಕೊಡುವುದು. ಕೇಂದ್ರದ ಸುತ್ತಮುತ್ತಲೂ ನಿಸ್ಸಂದೇಹವಾಗಿ ಅವ್ಯಕ್ತ ಚಲನಗಳಿದ್ದರೂ ಸ್ವಯಂ ಕೇಂದ್ರದಲ್ಲಿ ಯಾವ

ಕ್ರಿಯೆಯೂ ಇಲ್ಲ. ಅದು ನಿಷ್ಕ್ರಿಯ ಮತ್ತು ಮೂಕ ವಸ್ತುವಿನ ಕಲ್ಪನೆಯನ್ನು ಕೊಡುವುದು. ಇದಕ್ಕಿಂತ ಹೆಚ್ಚಿಗೇನಾದರೂ ಹೇಳಿದರೆ ಜನರು ಗೊಂದಲದಲ್ಲಿ ಬೀಳಬಹುದು. ಅದು ಸ್ವತಃ ಅನಂತವಾಗಿದ್ದು, ಯಾರಾದರೂ ಅದರೊಳಗೆ ಮುಂದುವರಿದರೆ ಆಶ್ಚರ್ಯಸಾಗರದಲ್ಲಿ ಮುಳುಗುವರು. ಅದು ಕೇವಲ ಅತ್ಯುಚ್ಚತರದ ಅನುಭವಕ್ಕೆ ಸಂಬಂಧಿಸಿದುದು. ಕಲ್ಪನೆಯಾಗಲಿ, ಅಭಿವ್ಯಕ್ತಿಯಾಗಲಿ ಸಂಪೂರ್ಣ ನಿಂತುಹೋಗುವುದು. ಉಚ್ಚ ಸ್ಥಿತಿಯನ್ನು ಹೊಂದಿದ ಯಾರಾದರೂ ಇದನ್ನನುಭವಿಸಲು ಸಿದ್ಧರಾಗಿ ನನ್ನ ಈ ಅಲ್ಪಸೇವೆಗೆ ಅವಕಾಶ ಕೊಟ್ಟರೆ ನನಗೆ ತುಂಬ ಸಂತೋಷವಾಗುವುದು. ಈಗ, ಸರ್ವಸಾಮಾನ್ಯವಾಗಿ ದೇವರು ಸರ್ವಶಕ್ತನೆಂದು ವರ್ಣಿಸಲಾಗುತ್ತದೆ. ನಮ್ಮಲ್ಲಿರುವ ಶಕ್ತಿಯು ಆ ಮಹತೀಶಕ್ತಿಯ ಅಂಶವೆಂದು ತಿಳಿದೇ ನಾವು ಆತನನ್ನು ಸರ್ವಶಕ್ತನೆಂದು ಕರೆಯುವೆವು. ನಮ್ಮಲ್ಲಿರುವ ಶಕ್ತಿಯು ಆ 'ದೊಡ್ಡ ಚಲನ'ದ ಪರಿಣಾಮವಾಗಿದ್ದು ಅದು ಕ್ರಮೇಣ ಶಕ್ತಿಯಾಗಿ ಬೆಳೆದಿದೆ. ವಿದ್ಯುಜ್ಜನಕದ ಉದಾಹರಣೆಯನ್ನು ತೆಗೆದುಕೊಂಡರೆ ನಿಮಗಿದು ಚೆನ್ನಾಗಿ ತಿಳಿಯುವುದು. ಇದು ಆಯಸ್ಕಾಂತಗಳನ್ನು ಒಂದು ವಿಧವಾಗಿ ಜೋಡಿಸಿ ತಯಾರಿಸಲಾದ ಯಂತ್ರ. ಸ್ವಯಂ ಈ ಜನಕದಲ್ಲಿ ಶಕ್ತಿಯಿಲ್ಲ. ಆದರೆ ಅದು ಚಲಿಸಿದಾಗ ಒಂದು ರೀತಿಯ ವಿದ್ಯುತ್ ಕ್ಷೇತ್ರವನ್ನು ನಿರ್ಮಿಸುವುದು; ಮತ್ತು ಆ ಕ್ಷೇತ್ರದಿಂದ ಶಕ್ತಿಯು ಹೊರಹೊಮ್ಮತೊಡಗುವುದು. ಕ್ಷೇತ್ರದ ಕೆಲವು ವಿಶಿಷ್ಟ ಸ್ಥಾನಗಳಲ್ಲಿ ಇರಿಸಲಾದ ತುದಿಗಳು ಆ ಶಕ್ತಿಯನ್ನು ಆಕರ್ಷಿಸಿ ಕೊಳ್ಳುವುದರಿಂದ, ತುದಿಗಳನ್ನು ಜನಕದ ಆಯಸ್ಕಾಂತಗಳಿಗೆ ಕೂಡಿಸಿರ ದಿದ್ದರೂ ಅವುಗಳಿಂದ ವಿದ್ಯುತ್ಪ್ರವಾಹವು ಬರತೊಡಗುವುದು. ಅದರಂತೆ ಕೇಂದ್ರದ ಸಮೀಪದಲ್ಲಿರುವ ಅವ್ಯಕ್ತ ಚಲನಗಳು ಶಕ್ತಿಯ ಕ್ಷೇತ್ರವನ್ನು ನಿರ್ಮಿಸುವವು. ಅದನ್ನು ನೀವು ಕೇಂದ್ರಮಂಡಲವೆಂದು ಕರೆಯಬಹುದು. ಆದರೆ ಅಲ್ಲಿ ಯಾವ ಕ್ರಿಯೆಯೂ ಇಲ್ಲದೆ ಶಾಂತವಾಗಿದೆ. ಅದು ಕೇವಲ ಯೋಗ್ಯ ದ್ವಾರಗಳ ಮೂಲಕ ನಿಸರ್ಗದ ವಿವಿಧ ಶಕ್ತಿಗಳ ರೂಪದಲ್ಲಿ ಕೇಂದ್ರ ಮಂಡಲದಿಂದ ಹೊರಹೊಮ್ಮಲಾರಂಭಿಸುವುದು.

ನಿಮಗೆ 'ನಾಸ್ತಿತ್ವ' ಅಥವಾ 'ಶೂನ್ಯ'ದ ಕಲ್ಪನೆಯಾಯಿತೆ? ನಾನು ನಿಮ್ಮೆದುರಿಗಿಡುತ್ತಿರುವುದು ಬಹುದೊಡ್ಡ ತತ್ವದರ್ಶನ. ಜನರು ಅದನ್ನು ಮೊದ ಮೊದಲು ತಿಳಿಯಲಿ ತಿಳಿಯದಿರಲಿ, ಕಾಲಾಂತರದಲ್ಲಿ ಇದರ ಸತ್ಯತೆಯನ್ನು ಮನಗಾಣುವರು. ಭಗವಂತನ ಕಾರ್ಯಗಳು ರಹಸ್ಯಮಯವೆಂದು ಹೇಳುವರು. ಕಾರಣವೆಂದರೆ, ದೃಶ್ಯಜಗತ್ತಿನ ಹಿಂದಿರುವ ರಹಸ್ಯವು ಮರೆಯಾಗಿದೆ. ಯಾರು ತರಂಗಗಳಲ್ಲಿ ಈಜುತ್ತ ಹೋಗಿ ಕೇಂದ್ರದ ಸಾಮೀಪ್ಯವನ್ನು ಹೊಂದುವರೋ ಅವರಿಗೆ ಮಾತ್ರ ಭಗವಂತನ ನಿಜಸ್ವರೂಪವು ಕಂಡು ಬರುವುದು. ಇದೆಲ್ಲವೂ ನನ್ನ ವಾಸ್ತವಿಕ ಅನುಭವವೆಂದು ದೃಢವಾಗಿ ಹೇಳಬಲ್ಲೆ. ಇದೆಲ್ಲ, ರಾಜಯೋಗದ ಸಂಪೂರ್ಣ ಅಭ್ಯಾಸದಿಂದಲೂ ನನ್ನ ನರನರಗಳಲ್ಲಿ ಪ್ರವಹಿಸುವ ನನ್ನ ಸದ್ಗುರುಗಳ ಆಶೀರ್ವಾದದಿಂದಲೂ ಸಾಧ್ಯವಾಗಿದೆ.

ಕೇಂದ್ರದಿಂದ ಬರುವ ಪ್ರಕಾಶವು ಕೇಂದ್ರ ಮಂಡಲದ ತುದಿಯ ವರೆಗೂ ಹೊರಹೊಮ್ಮಿ, ಅದು ಮುಗಿಯುವಲ್ಲಿ ವರ್ತುಳಾಕಾರದಂಥ ಏನೋ ಒಂದನ್ನು ರಚಿಸಿರುವುದೆಂದು ಹೇಳಿದರೆ ಜನರು ಆಶ್ಚರ್ಯಪಡಬಹುದು. 'ಪ್ರಕಾಶ'ವೆನ್ನುವುದು ಆ ವಸ್ತುವಿನ ಸರಿಯಾದ ವ್ಯಾಖ್ಯೆಯಲ್ಲ. ಪ್ರಕಾಶವು ಅಲ್ಲಿರುವ ವಸ್ತುವಿಗಿಂತ ಬಹಳ ಜಡವಾಗಿದ್ದು ಹಿಂದೆ ಬಹು ದೂರವುಳಿದಿದೆ. ಕೇವಲ ತಿಳುವಳಿಕೆಗಾಗಿ ಹೀಗೆ ಹೇಳಲಾಗಿದೆ, ಅಷ್ಟೇ. ಕೇಂದ್ರ ಮಂಡಲದಲ್ಲಿ ನಾವು ಕಾಣುವುದೆಲ್ಲ, ಶುದ್ಧ ಹಾಗೂ ನೈಜರೂಪದಲ್ಲಿರುವ ಸತ್ಯ ವಸ್ತುವೆ. ಅಲ್ಲಿ ಯಾವ ತರದ ಸಮ್ಮಿಶ್ರಣವೂ ಇಲ್ಲ. ಈಗ, ಈ ಕ್ಷೇತ್ರವನ್ನು ಪ್ರವೇಶಿಸ ಬೇಕಾದರೆ ವರ್ತುಳವೆಂದು ಮೇಲೆ ವರ್ಣಿಸಲಾದುದನ್ನು ದಾಟಬೇಕಾಗುವುದು. ತಿಳುವಳಿಕೆಗಾಗಿಯೆ ಏಕಾಗಲೊಲ್ಲದು, 'ಪ್ರಕಾಶ'ವೆಂದು ಕರೆಯಲಾದ ಪ್ರಬಲ ಪದಾರ್ಥವು ಇಲ್ಲಿ ಕೊನೆಗೊಳ್ಳುವುದು. ಗುರುವಿನ ಶಕ್ತಿಯಿಂದ ಮಾತ್ರ ಈ ಕೇಂದ್ರಮಂಡಲದ ಮಾರ್ಗವು ಸುಗಮವಾಗುವುದು. ಪ್ರಕಾಶವು ಕೊನೆಗೆ ಒಂದು ತರದ ಶಕ್ತಿಯನ್ನು ನಿರ್ಮಿಸುವುದು. ಅದನ್ನು ನಾವು ದಾಟಬೇಕಾಗು ವುದು. ಗುರುವೇ ನಮ್ಮನ್ನು ದಾಟಿಸುವ ಸಮರ್ಥಶಕ್ತಿ. ಆತನು ಮನೋ ಮಂಡಲದಿಂದ ನಮ್ಮನ್ನು ಮುಂದಕ್ಕೆ ತಳ್ಳಿದಾಗ ಮಾತ್ರ ಇದು ಸಾಧ್ಯ.

ಆರನೆಯ ಆಕೃತಿಯಲ್ಲಿ 'ಕ' ಎಂದು ಗುರುತಿಸಲಾದ ಬಿಂದುವು ಕೇಂದ್ರವಾಗಿದೆ. ಇದನ್ನು ಬೇಕಾದರೆ ದೇವರೆಂದೆನ್ನಲಿ ಅಥವಾ ಅಭಿವ್ಯಕ್ತಿಗಾಗಿ ಮತ್ತೇನಾದರೂ ಹೇಳಲಿ, ಇದೇ ಮುಖ್ಯ ಬಿಂದು. ಈ ಬಿಂದುವು ಕೇವಲ ಅಚಲವಾಗಿರುವುದು. ಅಲ್ಲಿ ಯಾವುದೇ ತರದ ಶಕ್ತಿಯಾಗಲಿ, ಇನ್ನೇನಾಗಲಿ ಇರುವುದಿಲ್ಲ. ಅದಕ್ಕೆ ತೀರ ಸಮೀಪದಲ್ಲಿ, ಶಕ್ತಿಯನ್ನು ಹುಟ್ಟಿಸುವ ಗುಪ್ತ ಚಲನವಿದೆ. ಕೇಂದ್ರವು ಆ ಗುಪ್ತ ಚಲನವನ್ನು ಕಾಪಾಡುವುದು ಮಾತ್ರ. ಈ ಸ್ಥಳದ ಬಣ್ಣವು ವರ್ಣರಾಹಿತ್ಯದ ಮಸಕಾದ ಪ್ರತಿಚ್ಛಾಯೆಯೆಂದು ಹೇಳಬಹುದು. ಕೇಂದ್ರವು ತನ್ನ ಮಂಡಲದಲ್ಲಿ, ಮೇಲೆ 'ಪ್ರಕಾಶ'ವೆಂದು ಕರೆಯಲಾದ ಯಾವುದೋ ಒಂದು ವಸ್ತುವನ್ನು ಛಾಯಾರೂಪದಲ್ಲಿ ಎಸೆಯುತ್ತಿದೆ. ಈ ಛಾಯಾವಲಯವು ಅದರ ದೆಸೆಯಿಂದಲೇ ಉಂಟಾಗಿದ್ದು ಅದು ಮುಕ್ತಾತ್ಮರು ಈಜುವ ಸ್ಥಾನವಾಗಿದೆ. ನಾವು ಸದೇಹರಾಗಿಯೇ ಅಲ್ಲಿ ತಲುಪಬಹುದು ಮತ್ತು ಈ ಜನ್ಮದಲ್ಲಿಯೇ ಅಲ್ಲಿ ಮುಕ್ತಾತ್ಮರಂತೆ ಈಜಾಡ ಬಹುದು. ಇದು ನನ್ನ ಪೂಜ್ಯ ಗುರುಗಳಾದ ಫತೆಹಗಡ ನಿವಾಸಿ (ಉತ್ತರ ಪ್ರದೇಶ) ಮಹಾತ್ಮಾ ಶ್ರೀರಾಮಚಂದ್ರಜಿಯವರ ಶೋಧಗಳಲ್ಲೊಂದಾಗಿದ್ದು ಇದನ್ನು ಎಲ್ಲರಿಗೂ ಶಕ್ಯವಾಗುವಂತೆಯೂ ಸುಲಭವಾಗುವಂತೆಯೂ ಮಾಡಿದ್ದಾರೆ. ನನ್ನ ಅಂತರ್ದೃಷ್ಟಿಯ ಮೇರೆಗೆ ಆಧ್ಯಾತ್ಮಿಕ ಸಿದ್ಧಿಗಳ ಇತಿಹಾಸದಲ್ಲಿಯೇ ಇಂಥ ಬೇರೊಂದು ಉದಾಹರಣೆಯಿಲ್ಲ. ಈ ಸ್ಥಿತಿಯನ್ನು ನಾವು ಬೆಳೆಸಿಕೊಂಡುದಾದರೆ, ಈ ದೇಹವನ್ನು ಬಿಡುವುದಕ್ಕೆ ಮುಂಚಿತವಾಗಿಯೇ ಅಲ್ಲಿ ನೆಲೆಸುವೆವು ಮತ್ತು ದೇಹ ಬಿಟ್ಟ ನಂತರ ನಮ್ಮ ಈಜು ಹಾಗೆಯೇ ಮುಂದುವರಿಯುವುದು. ಈಗ ನಾವು ಪೂರ್ಣ 'ಶೂನ್ಯತೆ'ಯಲ್ಲಿ ಎಂಬಂತೆ ಈಜುತ್ತಿರುವೆವು.

ಗುಪ್ತ ಚಲನಗಳು ಶಕ್ತಿಯನ್ನು ಹುಟ್ಟಿಸಿದುವು. ಆ ಶಕ್ತಿಯು ಮುನ್ನುಗ್ಗಿ ಯಾವುದೋ ಒಂದು ವಸ್ತುವನ್ನು ನಿರ್ಮಿಸಿತು. ಅದನ್ನು, ತಿಳಿವಳಿಕೆ ಗಾಗಿ ಮೀನಾಂಡದಲ್ಲಿರುವ ಮೊಟ್ಟೆಯೆಂದು ಹೇಳಬಹುದು. ಮೊಟ್ಟೆ ಗಳಂತಿರುವ ಈ ವಸ್ತುಗಳು ಅವ್ಯಕ್ತ ಚಲನೆಗಳಿಂದ ನಿರ್ಮಿತವಾದ ಶಕ್ತಿಯ ಸಾರಸರ್ವಸ್ವದಿಂದ ತುಂಬಿವೆ. ಈಗ ಈ ಮೂರು ವಸ್ತುಗಳು – ಕೇಂದ್ರ, ಗುಪ್ತಚಲನ ಮತ್ತು ಮೊಟ್ಟೆಯಂತಿರುವ ವಸ್ತುಗಳು – ಒಂದಕ್ಕೊಂದು

ಎಷ್ಟು ಸಮೀಪದಲ್ಲಿರುವುದೆಂದರೆ, ಅವು ಮೂರು ಒಂದೇ ಎಂಬಂತಿದ್ದು, ಅವುಗಳನ್ನು ಬೇರೆ ಬೇರೆಯಾಗಿ ಗುರುತಿಸುವುದು ಸಾಧ್ಯವಿಲ್ಲ. ಈ ಸ್ಥಾನವು ಉಷಃಕಾಲದಂತೆ ಬೂದಿ ಬಣ್ಣವುಳ್ಳದೆಂದು ಹೇಳಬಹುದು ಅಥವಾ ಆ ಬಣ್ಣದ ಮಸುಕಾದ ಪ್ರತಿಬಿಂಬವಾಗಲಿ, ಪ್ರಭಾತವು ಯಾವುದರ ಮೂರ್ತ ಸ್ವರೂಪವಾಗಿದೆಯೋ ಆ ಬಣ್ಣದ ಸತ್ವವಾಗಲಿ ಆಗಿದೆಯೆಂದು ಹೇಳಿದರೆ ಹೆಚ್ಚು ಸಮಂಜಸವಾಗುವುದು.

ಇನ್ನು ಮತ್ತೆ ಮೂಲವಿಷಯಕ್ಕೆ ಬರೋಣ. ಒಂದು ಜೀವಕೋಶವು (ಮೇಲೆ ವಿವರಿಸಲಾದ ತತ್ತಿಯಂಥ ಪದಾರ್ಥ) ಒಂದು ಸೃಷ್ಟಿಯ ಅಧಿಪತಿಯಾಗಿದ್ದು ವಿಶ್ವದ ಆ ಭಾಗಕ್ಕೆ ಜೀವಕಳೆಯನ್ನು ಕೊಟ್ಟು ಅದನ್ನು ನಿಯಂತ್ರಿಸುವುದು ಕೇಂದ್ರದ ಸುತ್ತುಮುತ್ತಲೂ ಎಷ್ಟು ಜೀವಕೋಶ (ತತ್ತಿಯಂಥ ವಸ್ತು)ಗಳಿವೆಯೋ ಅಷ್ಟೇ ಜಗತ್ತುಗಳು ಈ ವಿಶ್ವದಲ್ಲಿವೆ. ಯೋಗಿಯು ಈ ಜೀವಕೋಶಗಳಲ್ಲಡಗಿದ ಶಕ್ತಿಯನ್ನು ವಿಭಜನೆ ಮಾಡಿ ಉಪಯೋಗಿಸಿದ್ದಾದರೆ ಜನರು ಅಣ್ವಸ್ತ್ರವನ್ನು ಮರೆತುಬಿಡುವರು. ಅರ್ಜುನನು ಈ ಶಕ್ತಿಯನ್ನು ವಿಭಾಗಿಸುವ ಸಾಮರ್ಥ್ಯವನ್ನು ಹೊಂದಿದ್ದು ಅದನ್ನು ಬೇಕಾದಾಗ ಬಳಸಿ ಅನಾಹುತವನ್ನೆಸಗಲು ಶಕ್ತನಾಗಿದ್ದನು. ಆದರೆ ಅಂದಿನ ಯುದ್ಧನೀತಿಗನುಸರಿಸಿ, ಉಪಸಂಹರಿಸಲು ಬಾರದ ಯಾವ ಅಸ್ತ್ರವನ್ನೂ ಯಾರು ಉಪಯೋಗಿಸುವಂತಿರಲಿಲ್ಲವಾದುದರಿಂದ ಅರ್ಜುನನಾದರೂ ಅದನ್ನು ಉಪಯೋಗಿಸಲಿಲ್ಲ. ಮುಂಬರುವ ಕುರುಕ್ಷೇತ್ರ ಯುದ್ಧದ ಬಗ್ಗೆ ದುರ್ಯೋಧನನು ಭೀಷ್ಮ ಪಿತಾಮಹರ ಸಲಹೆ ಪಡೆಯಲು ಹೋದಾಗ ಅವರು ಈ ವಿಷಯವನ್ನು ಅವನಿಗೆ ಹೇಳಿದರು.

ಆದುದರಿಂದ ಇಂದಿನ ಕಾಲದಲ್ಲಿ ಅಣುಶಕ್ತಿಯನ್ನು ವಿಭಜಿಸುವುದು ಇದುವರೆಗೂ ಜಗತ್ತಿಗೆ ಗೊತ್ತಿರದ ತೀರ ಹೊಸ ಸಂಗತಿಯೇನಲ್ಲ. ಮಹಾಭಾರತಕ್ಕಿಂತಲೂ ಪುರಾತನವಾದ ಮತ್ತೊಂದು ಉದಾಹರಣೆಯು ನನಗೆ ಪ್ರಕಟವಾಗಿದೆ. ರಾಮಾಯಣ ಕಾಲದಲ್ಲಿ ಹನುಮಂತನು ರಾವಣನ ಪಟ್ಟಣ ಹಾಗೂ ಕೋಟೆಗಳನ್ನು ಸುಡುವುದಕ್ಕಾಗಿ ತನ್ನ ಸಂಕಲ್ಪಶಕ್ತಿಯಿಂದ ಲಂಕೆಯ ಸುತ್ತಮುತ್ತಲಿನ ಸಮುದ್ರದ ನೀರಿನಲ್ಲಿದ್ದ ಯಾವುದೋ ಅನಿಲ ಶಕ್ತಿಯನ್ನುಪಯೋಗಿಸಿದನು. ಅದು ಇನ್ನೂ ಅಲ್ಲಿದೆಯೋ ಹೇಗೆಂಬು

ದನ್ನು ಆಧುನಿಕ ವಿಜ್ಞಾನಿಗಳು ಶೋಧ ಮಾಡಲಿ. ಯಾವುದರ ಉಪಯೋಗಕ್ಕಾಗಿ ಆತನಿಗೆ ಕೇವಲ ಸಂಕಲ್ಪಶಕ್ತಿ ಮಾತ್ರ ಸಾಕಾಯಿತೋ, ಪಾಶ್ಚಿಮಾತ್ಯ ವಿಜ್ಞಾನಿಗಳಿಗಿಂದು ಯಂತ್ರೋಪಕರಣಗಳು ಬೇಕಾಗುವವು.

''ಕೇಂದ್ರದ ಸುತ್ತಮುತ್ತಲಿರುವ ಶಕ್ತಿಯು ತತ್ತಿಗಳಂಥ ವಸ್ತುಗಳಲ್ಲೀಗ ಕಾಣಿಸಿಕೊಂಡ ಪ್ರಯುಕ್ತ ಈ ವಸ್ತುಗಳೂ ಕೇಂದ್ರದ ಅವಿಭಾಜ್ಯ ಅಂಶವಾಗಿವೆ. ಹೀಗೆ ಕೇಂದ್ರವು ಸ್ವಯಂ ಒಂದು ಗೂಡಾಗಿದೆ'' ಎಂದು ಜನರು ಆಕ್ಷೇಪಿಸಬಹುದು. ಆದರೆ ಅವು ಈ ರೀತಿ ಘನರೂಪದ ಉದಾಹರಣೆಯೊಂದಿಗೆ ವರ್ಣಿತವಾದುದು ಕೇವಲ ಅಭಿವ್ಯಕ್ತಿ ಹಾಗೂ ತಿಳುವಳಿಕೆಗಾಗಿ ಮಾತ್ರ, ಎಂಬುದನ್ನು ಅವರು ಗಮನಿಸಬೇಕು. ಕೇಂದ್ರದ ಸಮೀಪದಲ್ಲಿ ತತ್ತಿಯಂಥ ವಸ್ತುಗಳಿವೆ ಎಂಬುದೇನೋ ನಿಜ. ಅವನ್ನು ನೀವು, ನಿರ್ದಿಷ್ಟ ಕ್ರಮದಿಂದ ಕೆಲಸ ಮಾಡುತ್ತಿರುವ ಶಕ್ತಿಯೆಂದು ಕರೆಯಬಹುದು. ಅದನ್ನು ಉಕ್ತರೀತಿಯಲ್ಲಿ ಮಾತ್ರ ಅಭಿವ್ಯಕ್ತಗೊಳಿಸಲು ಸಾಧ್ಯ. ಆಯಸ್ಕಾಂತ ಧ್ರುವದ ಕ್ಷೇತ್ರವನ್ನು ಉದಾಹರಣೆಗೆ ತೆಗೆದುಕೊಂಡರೆ ನಿಮಗಿನ್ನೂ ಹೆಚ್ಚು ಸ್ಪಷ್ಟವಾದೀತು. ಅದರ ಕ್ಷೇತ್ರ ಮತ್ತು ಶಕ್ತಿಯನ್ನಾಗಲಿ ಅದು ಕೆಲಸ ಮಾಡುವ ದಿಶೆ ಮತ್ತು ಸ್ಥಾನಗಳನ್ನಾಗಲಿ ಗುರುತಿಸಬೇಕಾದರೆ ಒಂದು ಕಾಗದದ ತುಂಡನ್ನೋ ಕಾಜಿನ ಹಲಗೆಯನ್ನೋ ಇಟ್ಟು, ಸ್ವಲ್ಪ ಕಬ್ಬಿಣದ ಪುಡಿಯನ್ನು ಹಾಕಿರಿ. ಕೆಳಗಡೆ ಒಂದು ಆಯಸ್ಕಾಂತವನ್ನಿಟ್ಟು ಕಾಗದವನ್ನು ಸ್ವಲ್ಪ ತಟ್ಟಿರಿ. ಚೂರ್ಣವು ಒಂದು ವಿಶಿಷ್ಟ ರೀತಿಯಲ್ಲಿ ಹರಡಿಕೊಳ್ಳುವುದು. ಅದನ್ನು ಕಲಸಿ ಮತ್ತೆ ತಟ್ಟಿದರೆ ಮತ್ತೆ ಅದೇ ರೀತಿಯಲ್ಲಿ ಕೂಡಿಕೊಳ್ಳುವವು. ಇದು ಆಯಸ್ಕಾಂತ ಧ್ರುವದ ಆಕರ್ಷಣ ಶಕ್ತಿಯ ರೇಖೆಗಳನ್ನೂ ಸ್ಥಾನಗಳನ್ನೂ ತೋರಿಸುವುದು. ಆದರೆ ಆ (ಕಬ್ಬಿಣದ ತುಂಡುಗಳಿಂದ ಸೂಚಿತವಾಗುವ) ರೇಖೆಗಳು ಪ್ರತ್ಯಕ್ಷವಾದ ಕ್ಷೇತ್ರವಾಗಲಿ ಶಕ್ತಿಯಾಗಲಿ ಅಲ್ಲ. ಅದರ ಕ್ಷೇತ್ರವನ್ನೂ ಶಕ್ತಿಯನ್ನೂ ಸೂಚಿಸಲು ಅಥವಾ ತಿಳಿಯಲು ಅವನ್ನು ಉಪಯೋಗಿಸಲಾಗಿದೆ. ಅದರಂತೆಯೆ ಕೇಂದ್ರದ ಸುತ್ತಲೂ ಕೆಲಸಮಾಡುವ ಹಾಗೂ ಕೇಂದ್ರದಿಂದ ನಿಯಂತ್ರಿಸಲ್ಪಡುವ ಶಕ್ತಿಗಳನ್ನು ಅಭಿವ್ಯಕ್ತಗೊಳಿಸಲು ಮೀನದತತ್ತಿಗಳ ಉದಾಹರಣೆಯನ್ನು ಕೊಡಲಾಗಿದೆ. ಹೀಗೆ, ಇದರ ಪರಿಣಾಮವಾಗಿ ಸೂರ್ಯ

ಮಂಡಲವೂ ವಿಶ್ವದೊಳಗಿನ ಬೇರೆ ಪ್ರತಿಯೊಂದು ವಸ್ತುವೂ ಪರಿಪೂರ್ಣ ವಾಗಿದೆ. ಆದರೆ ಅದು ಬೇರೆ ವಿಷಯವಾದ್ದರಿಂದ ಅದನ್ನು ನಾನಿಲ್ಲಿ ಚರ್ಚಿಸು ವದಿಲ್ಲ. ಸಮಯ ದೊರೆತರೆ ಮತ್ತೊಂದು ಕಡೆಗೆ ನಿರೂಪಿಸುವೆನು. ಉಳಿದೆಲ್ಲ ವುಗಳಿಗಿಂತ ದೊಡ್ಡದಾದ ಹಾಗೂ ಹೆಚ್ಚು ಪ್ರಕಾಶಮಾನವಾದ ಒಂದು ಜೀವ ಕೋಶವಿದೆ. ಅದನ್ನು ನೀವು ಪ್ರಧಾನಕೋಶವೆಂದು ಹೇಳಬಹುದು. ಪ್ರಧಾನ ಕೋಶವು ನಾವು ವಾಸಿಸುತ್ತಿರುವ ಜಗತ್ತಿಗೆ ನೇರವಾಗಿ ಸಂಬಂಧಪಟ್ಟಿದ್ದು ಅದನ್ನು ನಿಯಂತ್ರಿಸುವುದು. ಅಲ್ಲದೇ ಇದೇ ಕಾರಣದಿಂದಾಗಿ ಈ ಜಗತ್ತಿನಲ್ಲಿ ನಮಗೆ ಕಾಣಬರುವಂಥ ವಿಭೂತಿಗಳು ಬೇರೆ ಯಾವ ಲೋಕದಲ್ಲಿಯೂ ಕಂಡುಬರುವುದಿಲ್ಲ. ನಾವು (ಅರ್ಥಾತ್ ನಮ್ಮ ಜಗತ್ತು) ಪ್ರಧಾನಕೋಶ ದೊಂದಿಗೆ ಸಂಬಂಧಪಟ್ಟಿರುವುದರಿಂದ ಅದರ ಶಕ್ತಿಗಳೇ ಬಹುಮಟ್ಟಿಗೆ ನಮ್ಮಲ್ಲಿಯೂ ಇರುವವು.

ಸೃಷ್ಟಿರಚನೆಯ ಕುರಿತಾದ ನಿಜಾಂಶವನ್ನು ಕೂಡ ನಾನೀಗ ಹೇಳಿ ಬಿಡುವೆನು. ಜಗತ್ತು ಹುಟ್ಟುವ ಮುಂಚೆ ಕೇಂದ್ರದ ಸಮೀಪದಲ್ಲಿ ಅವ್ಯಕ್ತ ಗತಿಯಿದ್ದು ಅದರಲ್ಲಿ ಹಾಗೂ ಅದರ ಹತ್ತಿರವೇ ಕ್ಷೋಭವಿದ್ದಿತು. ಅದನ್ನು ನೀವು ಚಲನವೆಂದಾಗಲಿ ಕಂಪನವೆಂದಾಗಲಿ ಶಕ್ತಿಯೆಂದಾಗಲಿ, ನಿಮ್ಮ ತಿಳುವಳಿಕೆಗಾಗಿ ಏನಾದರೂ ಕರೆಯಬಹುದು. ಅದು ಸೃಷ್ಟಿಯ ಹಾಗೂ ಅದಕ್ಕೆ ಬೇಕಾಗುವ ಇತರ ಸಾಮಗ್ರಿಯ ಮೂಲ ಕಾರಣವಾಗಿದ್ದಿತು. ಸೃಷ್ಟಿ ರಚನೆಯ ಕಾಲವು ಸಮೀಪಿಸಿದಾಗ ಅವ್ಯಕ್ತ ಚಲನದಲ್ಲಿದ್ದ ಸುಪ್ತಕಲ್ಪನೆಯು ಪರಿಪಕ್ವವಾಗಿ ಇಡೀ ಚಲನವನ್ನು ಮಥಿಸಿದಾಗ ಒಂದು ಶಕ್ತಿಯು ಹುಟ್ಟಿಕೊಂಡು ಹೊರಹೊಮ್ಮಿತು. ಧಕ್ಕೆಗಳು, ಮೇಲೆ ವರ್ಣಿಸಲಾದ ಜೀವಕೋಶಗಳ ಅಥವಾ ಮೊಟ್ಟೆಯಂತಹ ವಸ್ತುಗಳ ರೂಪದಲ್ಲಿ, ಶಕ್ತಿ ಯನ್ನು ಘನೀಕರಿಸಿದುವು. ಪ್ರಧಾನಕೋಶವು ಮೊದಲನೆಯ ಧಕ್ಕೆಯ ಪರಿಣಾಮವಾಗಿರುವುದರಿಂದ ಅದರಲ್ಲಿ ಎಲ್ಲ ಶಕ್ತಿಗಳ ಕೇಂದ್ರೀಕರಣವು ಹೆಚ್ಚಿನ ಪ್ರಮಾಣದಲ್ಲಾಗಿದ್ದು ಅದು ಉಳಿದವುಗಳಿಗಿಂತ ದೊಡ್ಡದೂ ಹೆಚ್ಚು ಪ್ರಕಾಶಮಾನವೂ ಆಗಿರುವುದು. ಉಳಿದ ಮೊಟ್ಟೆಗಳು ಪ್ರವಹಿಸುವ ಶಕ್ತಿಯ ಘನೀಕರಣದಿಂದ ಉಂಟಾದುವು. ಆದುದರಿಂದ ಅವು ಅಷ್ಟು ಶಕ್ತಿಯುತವೂ ಹೊಳಪುಳ್ಳವುಗಳೂ ಆಗಿಲ್ಲ. ನಾವು ಒಂದು ಮಡ್ಡಿನ

ಕುಳ್ಳಿಯ ಉದಾಹರಣೆಯನ್ನು ತೆಗೆದುಕೊಂಡರೆ ಈ ವಿಷಯವು ಚೆನ್ನಾಗಿ ತಿಳಿಯುವುದು. ಮುಖ್ಯ ಧಾರೆಯು ನೇರವಾಗಿ ತುಂಬ ರಭಸದಿಂದ ಬರುವುದು. ಉಳಿದ ಕಿಡಿಗಳಿಗೆ ಅಷ್ಟು ಬಲವಿರುವುದಿಲ್ಲ. ಆದರೆ ಎಲ್ಲವೂ ಒಟ್ಟುಗೂಡಿ ಕಿಡಿಗಳ ತುಷಾರವೇ ಉಂಟಾಗುವುದು.

ಕೇಂದ್ರದ ಅಡಿಯಲ್ಲಿರುವ ವಸ್ತುವು ಜೀವನದ ಅಧಿಷ್ಠಾನವಾಗಿರುವಂತೆ, ಮುಖ್ಯ ಕೋಶವಾದರೂ ಮೊಟ್ಟೆಗಳಂತಹ ವಸ್ತುಗಳೆಂದು ವರ್ಣಿಸಲಾದ ರೂಪವುಳ್ಳ ಪದಾರ್ಥಗಳ ಸಾರಸರ್ವಸ್ವವಾಗಿದೆ. ಉಳಿದ ಚಿಕ್ಕವುಗಳು ದೊಡ್ಡದರಲ್ಲಿಯೇ ಸಮಾವೇಶವಾಗಿದ್ದು ಮುಖ್ಯ ಕೋಶವೆಂದು ಕರೆಯಲಾದುದರೊಂದಿಗೆ ಸಂಬಂಧಪಟ್ಟಿವೆ. ಅದು ನೊರೆಗಳು ತೇಲಾಡುತ್ತಿರುವ ಸಾಗರದಲ್ಲಿ ಒಂದು ದೊಡ್ಡ ಹನಿಯಂತಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಅದು ಈ ದೊಡ್ಡ ಹನಿಯೊಂದಿಗೆ ಸಂಬಂಧಿಸಿದ ಸೃಷ್ಟಿಗಳ ಶಕ್ತಿ ಕೇಂದ್ರವಾಗಿದೆ. ಮುಖ್ಯ ಕೋಶದಲ್ಲಿಯೂ ಅದೇ ತರಂಗವು ಪ್ರವಹಿಸುತ್ತಿದ್ದು ಅದರ ಶಕ್ತಿಯು ಇತರ ಕೋಶಗಳಿಗೂ ಅನ್ವಯಿಸುವುದು. ಇದು ಮೊದಲನೆಯ ಚಲನದಿಂದ ಕಡೆದು ತೆಗೆದ ಕೆನೆಯಂತಿದೆ. ಮಹಾ ವಿಭೂತಿಯು ಈ ಲೋಕದಲ್ಲಿ ಯಾವಾಗಲೂ ವಾಸಿಸುತ್ತಿರುವುದನ್ನು ನೀವು ಕಾಣಬಹುದು. ಈ ಲೋಕದಲ್ಲಿ ಹುಟ್ಟಿದ ಋಷಿಗಳು ಎಷ್ಟೋ ಸಲ, ಕೇಂದ್ರ ಮಂಡಲದಲ್ಲಿ ಸ್ಪಂದನರೂಪದಿಂದ ಬರುವ ಮೂಲ ಆಧಾರದ ನಿರ್ದೇಶಗಳಂತೆ ಇತರ ಲೋಕಗಳನ್ನೂ ನಿಯಂತ್ರಿಸಿದ್ದಾರೆ.

ನಿಮಗೆ ನಿಜ ಹೇಳಬೇಕಾದರೆ, ಈಗ ಪರಿವರ್ತನೆಗಾಗಿ ಅವತರಿಸಿದ ವಿಭೂತಿಯು ಇಡೀ ವಿಶ್ವದಲ್ಲಿ ಒಬ್ಬನೇ ಆಗಿದ್ದಾನೆ. ಆತನು ಸೂಕ್ಷ್ಮ ರೂಪದಲ್ಲಿ ಸೂರ್ಯನಲ್ಲಿಯೂ ಚಂದ್ರನಲ್ಲಿಯೂ ತನಗೆ ಬೇಕಾದಾಗ ಕಾಣಿಸಿಕೊಳ್ಳಬಲ್ಲನು. ಈ ಲೋಕದ ಕೆಲಸವನ್ನಲ್ಲದೆ ಬೇರೆ ಲೋಕಗಳ ಕೆಲಸವನ್ನೂ ಅವನು ಕೈಗೊಳ್ಳುವನು. ನೀವು ಅಂತರ್ದೃಷ್ಟಿಯನ್ನು ಬೆಳೆಸಿಕೊಂಡುದಾದರೆ, ಇಂಥ ವಿಭೂತಿಯು ತನ್ನ ಭೌತಿಕ ಶರೀರವು ಒಂದೇ ಕಡೆಗಿದ್ದರೂ ಭಗವಂತನ ಸಾಮ್ರಾಜ್ಯದ ತುಂಬ ವ್ಯಾಪಿಸಿದುದನ್ನು ಕಾಣುವಿರಿ. ಜನರಿಗೆ ಇದು ಕೇವಲ ಒಂದು ಕಾಲ್ಪನಿಕ ನಾಟಕವೆಂದೆನಿಸ

ಬಹುದು. ಆದರೆ ನನ್ನ ಅಭಿಪ್ರಾಯ ಬೇರೆಯಾಗಿದೆ. ಆತನು ನಿಜವಾದ ಅರ್ಥದಲ್ಲಿ ಪ್ರಕೃತಿಯ ಪಾತ್ರವನ್ನು ನಿರ್ವಹಿಸುತ್ತಿದ್ದಾನೆ.

ಸರ್ವಸಾಮಾನ್ಯವಾಗಿ, ದೇವರು ತನ್ನ ರೂಪದಂತೆಯೇ ಮನುಷ್ಯನನ್ನು ಹುಟ್ಟಿಸಿದನೆಂದು ನಂಬಲಾಗುತ್ತಿದೆ. ಈ ಬಗ್ಗೆ ಪ್ರಪಂಚದ ಎಲ್ಲ ಧರ್ಮಗಳೂ ದರ್ಶನಗಳು ಹಾಗೂ ವಿಜ್ಞಾನಗಳೂ ಒಮ್ಮತವಾಗಿವೆ. ಅಸ್ತಿ ಮಾಂಸಾದಿಗಳಿಂದ ರಚಿತವಾಗಿ ಕೈಕಾಲು ಮುಂತಾದ ಅವಯವ ಗಳನ್ನುಳ್ಳ ಮನುಷ್ಯನ ರೂಪದಂತೆಯೇ ದೇವರ ಭೌತಿಕ ರೂಪವಿದೆ ಎಂದು ಇದರರ್ಥವಲ್ಲ. ಅದರ ನಿಜಾರ್ಥವಿಷ್ಟೆ: ನಿಸರ್ಗದಲ್ಲಿದ್ದ ಕ್ರಮದಲ್ಲಿಯೇ ಮನುಷ್ಯನಲ್ಲಿಯೂ ಎಲ್ಲ ಶಕ್ತಿ–ಸಾಮರ್ಥ್ಯಗಳೂ ಇವೆ.

ಒಬ್ಬ ಕವಿ ಹೀಗೆ ಹೇಳಿದ್ದಾನೆ:

**''ಯಹ್ ಜೋ ಸೂರತ್ ಹೈ ತೇರೀ ಸೂರತ್–ಎ–ಜಸಾನ್ ಹೈ ಯಹೀ**
**ಯಹೀ ನಕ್‌ಶಾ ಹೈ, ಯಹೀ ರಂಗ ಹೈ, ಸಾಮಾನ್ ಹೈ ಯಹೀ ॥''**

''ನಿನ್ನ ರೂಪವು ಪ್ರಿಯತಮನ ರೂಪದ ಹಾಗೆಯೇ ಇದೆ. ಅದರ ಆಕಾರ, ಬಣ್ಣ ಮುಂತಾದವು ತದ್ರೂಪವಾಗಿಯೇ ಇವೆ.''

ಈಗ, ಮನುಷ್ಯ ದೇಹದಲ್ಲಿ ಇವುಗಳ ಸ್ಥಾನವನ್ನು ಕುರಿತು ಹೇಳುವೆನು. ನಾನು ತಿಳಿಸಿದಂತೆ, ಕೇಂದ್ರವು ಮನುಷ್ಯನ ಕಪಾಲದ ಹಿಂದುಗಡೆಯ ಉಬ್ಬಾದ ಭಾಗ (occipital prominence) ದಲ್ಲಿದೆ. ಇದನ್ನು ಜನೆಯ ಆಕೃತಿಯಲ್ಲಿ ತೋರಿಸಲಾಗಿದೆ. ಕೇವಲ ಸತ್ಯ ವಸ್ತುವಿನೊಂದಿಗೆ ಅದರ ಸಂಬಂಧವಿದೆ. ಅದು ಜೀವನದ ಸಾರವಾಗಿದ್ದು ಶರೀರ ರಕ್ಷಣೆಗಾಗಿ ಅಗತ್ಯವಾದ ಎಲ್ಲ ಶಕ್ತಿಗಳೂ ಅಲ್ಲಿವೆ. ಅದು ಕೂದಲೆಳೆಗಿಂತ ಸೂಕ್ಷ್ಮವೂ ಬಹಳ ಮೃದುವೂ ಆದ ಪದಾರ್ಥವಾಗಿದ್ದು ನಸುಕಿನ ಬಣ್ಣದಂತೆ ಅಥವಾ ಕೇವಲ ಅದರ ಮಸುಕು ಪ್ರತಿಬಿಂಬದಂತೆ ಬೂದಿಬಣ್ಣವುಳ್ಳದಾಗಿದೆ. ಈಗಾಗಲೇ ವರ್ಣಿಸಲಾದ ಕೇಂದ್ರದ ಹತ್ತಿರವಿದ್ದ ಜೀವಕೋಶಗಳು (ಮೊಟ್ಟೆಗಳಂತಹ ವಸ್ತುಗಳು) ಈ ಬಿಂದುವಿನ ಹತ್ತಿರದಲ್ಲಿಯೇ ಭೌತಿಕ ರೂಪದಲ್ಲಿಯೂ ಇವೆ. ಕೇಂದ್ರದ ಹತ್ತಿರದ ಮುಖ್ಯ ಕೋಶದೊಂದಿಗೆ ಅವುಗಳ ಸಂಬಂಧವಿದೆ. ಈ ಕಲ್ಪನೆಯನ್ನು ಪೂರ್ಣವಾಗಿ ಸ್ಪಷ್ಟಪಡಿಸಲು ನನಗೆ ಶಕ್ಯವಾಗಿದೆಯೋ ಇಲ್ಲವೋ ತಿಳಿಯದು. ಅದನ್ನು

ಶಬ್ದಗಳಿಂದ ವ್ಯಕ್ತಪಡಿಸಲು ಬಾರದುದರಿಂದ ಅನುಭವಿಸಿಯೇ ಅರಿತುಕೊಳ್ಳ ಬೇಕು. ಸಾಧ್ಯವಾದ ಮಟ್ಟಿಗೆ ಅದನ್ನು ಅಭಿವ್ಯಕ್ತಗೊಳಿಸಲು ಸಾಕಷ್ಟು ಹೇಳಿದ್ದೇನೆ. ಇದು ನಿಸರ್ಗದ ಸೂಕ್ಷ್ಮಾವಲೋಕನದಿಂದ ಅಥವಾ ಅನುಭವದಿಂದ ನಾನು ಮಾಡಿದ ಸಂಶೋಧನೆ, ನನ್ನ ಗುರುಗಳು ಪರಮ ಕೃಪೆಯಿಂದ ನನಗೆ ಅನುಗ್ರಹಿಸಿದ ದಿವ್ಯದೃಷ್ಟಿಯ ಫಲವೇ ಇದಾಗಿದೆ.

ಈಗ ಮುಖ್ಯ ವಿಷಯವನ್ನು ನಾವು ನಿಜವಾಗಿ ಮುಗಿಸಿದಂತಾಯಿತು. ಮನುಷ್ಯ ದೇಹದಲ್ಲಿ ಕೇಂದ್ರಮಂಡಲದ ಕೆಳಗಿರುವ ಇನ್ನೊಂದು ಬಿಂದುವನ್ನು ತೆಗೆದುಕೊಳ್ಳೋಣ. ಅದು ಕೇಂದ್ರದ ಸ್ಥೂಲ ರೂಪವಾಗಿದ್ದು ಪ್ರತಿಘಾತಾತ್ಮಕವಾಗಿದೆ. ಅದನ್ನು ನಾನು 'ವಿಧ್ವಂಸಕ ನೇತ್ರ'ವೆಂದು ಕರೆಯುವೆನು. ಅದರ ಪರಿಣಾಮದಿಂದ ಅನಾಹುತಗಳನ್ನೆಸಗಬಹುದಲ್ಲದೆ ಪ್ರಪಂಚವನ್ನೇ ಸಂಪೂರ್ಣವಾಗಿ ನಷ್ಟಗೊಳಿಸಬಹುದು. ಮುಖ್ಯ ವಿಷಯ ದೊಂದಿಗೆ ಇದರ ಸಂಬಂಧವಿಲ್ಲವಾದ ಕಾರಣ ಅದರ ನಿಜಸ್ಥಾನವನ್ನು ನಾನು ಹೇಳುವುದಿಲ್ಲ; ಹೇಳಲು ನನಗೆ ಅಪ್ಪಣೆಯೂ ಇಲ್ಲ. ಇದಕ್ಕೆ ಸಂಬಂಧಪಡ ಬಹುದಾದ ಎಲ್ಲವನ್ನೂ, ಸಂಕ್ಷೇಪವಾಗಿಯೇ ಏಕಾಗಲ್ಲೊಲ್ಲದು, ಸಂಪೂರ್ಣ ವಾಗಿ ಚರ್ಚಿಸಿದ್ದೇನೆ. ವರ್ಣನೀಯಾಂಶಗಳ ಮಾಲೆಯನ್ನು ಪೂರ್ತಿಗೊಳಿಸಲು ಇದರ ಬಗೆಗೂ ಸ್ವಲ್ಪ ಹೆಚ್ಚು ವಿವರಿಸುವೆನು.

ಮಹಾಭಾರತ ಕಾಲದಲ್ಲಿ, ಅವಶ್ಯಕವಾದ ವಿನಾಶವನ್ನುಂಟು ಮಾಡಲು ರಣರಂಗದಲ್ಲಿ ಹದಿನೆಂಟು ದಿನಗಳವರೆಗೆ ಶ್ರೀಕೃಷ್ಣನು ಈ 'ವಿಧ್ವಂಸಕ ನೇತ್ರ'ವನ್ನು ತೆಗೆದಿಟ್ಟಿದ್ದನು. ಅದನ್ನು ಮತ್ತೊಂದು ಸಲ ತೆರೆಯಲಾಗುವುದು. ಶ್ರೀ ಕೃಷ್ಣನು ಪರಿವರ್ತನ ಮಾಡಲು ಅವತರಿಸಿದ್ದನು. ಆ ಕಾಲದ ಹಲವು ಪರಿಸ್ಥಿತಿಗಳಿಂದ ವಾತಾವರಣವೆಲ್ಲ ವಿಷಪೂರಿತವಾದುದನ್ನು ಆತನು ಕಂಡನು. ಕಟ್ಟಕಡೆಗೆ ಆತನು ಮಹಾಭಾರತ ಯುದ್ಧದ ಯೋಜನೆಯನ್ನು ಚಿಂತಿಸಿದನು. ಪ್ರತ್ಯಕ್ಷವಾಗಿ ಯುದ್ಧ ವಾಗುವುದಕ್ಕಿಂತ ಇಪ್ಪತ್ನಾಲ್ಕು ವರ್ಷಗಳ ಮುಂಚೆಯೇ ಆತನು ತನ್ನ ಸಂಕಲ್ಪಶಕ್ತಿಯಿಂದ ದೂಷಿತಾಂಶಗಳನ್ನು ನಾಶಗೊಳಿಸತೊಡಗಿದನು. ಮಹಾಭಾರತ ಯುದ್ಧದ ಕಾಲವೊದಗಿ, ಯೋಧರು ರಣರಂಗದಲ್ಲಿ ನಿಂತಾಗ ಆತನು ತನ್ನ 'ವಿಧ್ವಂಸಕ ನೇತ್ರ'ವನ್ನು ತೆರೆದನು. ಆ ಕಾಲದಲ್ಲಿದ್ದಷ್ಟು,

ಉಗ್ರರೂಪದಲ್ಲಿ ಅಲ್ಲದಿದ್ದರೂ ಅವೇ ಚಿಹ್ನೆಗಳು ಮತ್ತೆ ಕ್ಷಿತಿಜದಲ್ಲಿ ಕಾಣ ಬರುತ್ತಿವೆ. ಅಂಧಕಾರವು ವ್ಯಾಪಿಸುತ್ತಿದೆ. ವಿಷ ಬೀಜಗಳು ವಿಶ್ವವನ್ನು ಪ್ರವೇಶಿಸಿವೆ. ಜಗತ್ತಿಗೆ ಪರಿವರ್ತನೆ ಬೇಕಾಗಿದೆ. ಈ ಕಾರ್ಯವನ್ನು ಸ್ವತಃ ನಿಸರ್ಗವೇ ಒಬ್ಬ ವ್ಯಕ್ತಿಗೆ ಒಪ್ಪಿಸಿಬಿಟ್ಟಿದೆ.

ನಾನು ರಾಜಯೋಗದ ಪ್ರಭಾವವನ್ನು ತೋರಿಸಿಕೊಟ್ಟುದಾಯಿತು. ಅದೃಷ್ಟವನ್ನು ರೂಪಿಸಬಲ್ಲ ವಸ್ತುವೆಂದರೆ ಅದೊಂದೇ. ಅದು ಸ್ವಯಂಪೂರ್ಣವಾಗಿದೆ. ಅಭ್ಯಾಸ ಹಾಗೂ ಅನುಭವಗಳೇ ಇದನ್ನು ತೋರಿಸಿ ಕೊಡಬಲ್ಲುವು. ನಾನು ಹೇಳಿದುದನ್ನು ಕುರುಡರಂತೆ ನಂಬಿರೆಂದು ನಾನೆನ್ನು ವುದಿಲ್ಲ. ಆದರೆ ಮನಃಪೂರ್ವಕ ಅಭ್ಯಾಸಮಾಡಿ ಮನಗಾಣಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ರಾಜಯೋಗವನ್ನು ಅಭ್ಯಾಸ ಮಾಡಲು ಬೇರೆ ಪದ್ಧತಿಗಳೂ ಇವೆ. ಆದರೆ ಈ (ಪುಸ್ತಕದಲ್ಲಿ ವಿವರಿಸಲಾದ) ಪದ್ಧತಿಯೇ ಅತ್ಯಂತ ಯೋಗ್ಯವಾದುದು. ಇದರಲ್ಲಿ ಸಿದ್ಧಿಪಡೆದವರನ್ನೇ ಹುಡುಕಬೇಕೆಂದು ಓದುಗರಿಗೆ ನನ್ನ ಹೃತ್ಪೂರ್ವಕ ಸೂಚನೆಯಿದೆ. ಇಂಥವರನ್ನು ಹುಡುಕುವುದು ಬಹಳ ಕಠಿಣವಾದರೂ ಈ ಪ್ರಪಂಚದಲ್ಲಿ ನಿಸ್ಸಂದೇಹವಾಗಿ ಅಂತಹವರಿದ್ದಾರೆ.

ಅವರನ್ನು ಹುಡುಕಲು ಒಂದು ಸುಲಭೋಪಾಯವನ್ನು ಹೇಳಿ ಕೊಡುವೆನು. ಇಂಥ ವ್ಯಕ್ತಿಯ ಮುಂದೆ ನೀವು ಕುಳಿತರೆ – ಆತನು ಸಂನ್ಯಾಸಿಯಿರಲಿ, ಗೃಹಸ್ಥನಿರಲಿ – ಆತ್ಮದ ಸಹಜ ಗುಣವಾದ ಶಾಂತಿಯು ಪ್ರಬಲವಾಗಿ ಕೆಲಕಾಲ ನೀವು ನಿಶ್ಚಿಂತರಾಗಿರುವಿರಿ. ಆತನೊಂದಿಗೆ ಇರುವಷ್ಟು ಕಾಲ ನೀವು ಸತ್ಯ ವಸ್ತುವಿನ ಸಂಪರ್ಕದಲ್ಲಿರುವಿರಿ. ಪರಿಣಾಮವು ತಾನಾಗಿಯೇ ಎಂದರೆ ಇದಕ್ಕಾಗಿ ಆತನು ಶ್ರಮಪಡದಿದ್ದರೂ – ಆಗುವುದು. ಆದುದರಿಂದ ನೀವು ಇಂಥ ವ್ಯಕ್ತಿಯನ್ನು ನಿಜವಾಗಿ ಹುಡುಕ ಬಯಸಿದರೆ, ನಿಮ್ಮ ಹೃದಯದ ಕಡೆಗೇ ದೃಷ್ಟಿಯನ್ನಿಟ್ಟು ನಿಮ್ಮ ಮನಸ್ಸಿನ ಸ್ಥಿತಿಯನ್ನು ಗಮನಿಸಬೇಕು. ಅದು ಮೊದಲಿಗಿಂತಲೂ ಹೆಚ್ಚು ಶಾಂತವೂ ಸ್ಥಿರವೂ ಆಗುವುದು. ನಿಮ್ಮ ಮನಸ್ಸಾನವರಿಸಿ ಯಾವಾಗಲೂ ತೊಂದರೆ ಕೊಡುತ್ತಿದ್ದ ಬೇರೆ ಬೇರೆ ವಿಚಾರಗಳು ಆತನೊಂದಿಗೆ ನೀವು ಇರುವಷ್ಟು ಕಾಲ ದೂರವಾಗುವವು.. ಆದರೆ ಒಂದು ವಿಷಯವನ್ನು ಮಾತ್ರ ಸ್ಪಷ್ಟವಾಗಿ

ನೆನಪಿನಲ್ಲಿಡತಕ್ಕದ್ದು. ಅದೆಂದರೆ ಮನಸ್ಸಿಗೆ ಯಾವ ವಿಧದಿಂದಲೂ ಶ್ರಮ ವಾಗಕೂಡದು ಮತ್ತು ಅದರಲ್ಲಿ ಜಡತ್ವವು ಬರಕೂಡದು. ಏಕೆಂದರೆ, ಇಂದ್ರಜಾಲ, ಸಂಮ್ಮೋಹನವಿದ್ಯೆ ಮುಂತಾದ ಕೆಳದರ್ಜೆಯ ಶಾಸ್ತ್ರಗಳನ್ನು ಅಭ್ಯಾಸ ಮಾಡಿದವರೂ ಈ ಪರಿಣಾಮವನ್ನು (ವಿಚಾರಗಳನ್ನು ದೂಡಿ ಮನಸ್ಸಿನ ಕಾರ್ಯವನ್ನು ಸ್ಥಗಿತಗೊಳಿಸುವುದು; ಮನಸ್ಸನ್ನು ವಿಚಾರಶೂನ್ಯ ಮಾಡುವುದು) ಉಂಟು ಮಾಡಬಲ್ಲರು. ಆದರೆ ಇವೆರಡರಲ್ಲಿ ಭೇದವಿಷ್ಟೆ: ಎರಡನೆಯದರಲ್ಲಿ ದೇಹದ ಹಾಗೂ ಮನಸ್ಸಿನ ಭಾರವೂ ದಣಿವೂ ಮಂದತೆಯೂ ಅನುಭವಕ್ಕೆ ಬಂದರೆ ಮೊದಲನೆಯದರಲ್ಲಿ ಲಘುತ್ವವೂ ಶಾಂತಿಯೂ ನೆಲೆಸಿರುವವು. ಮೊದಲ ನೋಟದಲ್ಲಿ ಇದನ್ನು ಗುರುತಿಸಲು ಕದಾಚಿತ್ ನಿಮಗೆ ಶಕ್ಯವಾಗಲಿಕ್ಕಿಲ್ಲ. ಆದರೆ ಆ ವ್ಯಕ್ತಿಯ ಸತತ ಸಂಪರ್ಕದಿಂದ ಈ ವಿಷಯದಲ್ಲಿ ನಿಮಗೆ ನಿಚ್ಚಳವಾದ ಸೂಚನೆಗಳು ನಿಶ್ಚಿತವಾಗಿ ದೊರೆಯುವವು.

ಇತ್ತೀಚೆಗೆ ಈ ಶಾಸ್ತ್ರದಲ್ಲಿ ಸಂಶೋಧನೆಗಳ ಬಗೆಗೆ ಅನಾದರವುಂಟಾಗಿದೆ. ನಾವಿನ್ನೂ ಅನೇಕ ಸಂಗತಿಗಳನ್ನು ಹುಡುಕಿ ತೆಗೆದು ತಿಳಿದುಕೊಳ್ಳಬೇಕಾಗಿದೆ. ಆದರೆ ಸಾಗರದ ಆಳಕ್ಕಿಳಿದರೆ ಮಾತ್ರ ಮುತ್ತುಗಳನ್ನು ಆಯ್ದುಕೊಳ್ಳಬಹುದು.

* * *

# ಉಪಸಂಹಾರ

ನನ್ನ ಅನುಭವವು ಶಕ್ಯಗೊಳಿಸಿದ ಮಟ್ಟಿಗೆ ಸಾಕಷ್ಟು ವಿಷಯಗಳನ್ನು ಚರ್ಚಿಸಿದ್ದೇನೆ. ಸಾಧಕರ ಯಶಸ್ಸಿನ ರಹಸ್ಯವನ್ನು ಕುರಿತು ಈಗ ಕೆಲವು ಮಾತುಗಳನ್ನು ಸೇರಿಸಬಹುದು. ಧ್ಯಾನವು ಆಧ್ಯಾತ್ಮದ ಅಡಿಗಲ್ಲು. ನಿಮ್ಮ ನಿಜವಾದ ಗುರಿಯನ್ನು ಎದುರಿಗಿಟ್ಟುಕೊಂಡು ಧ್ಯಾನ ಮಾಡಿದುದಾದರೆ ನೀವು ನಿಶ್ಚಯವಾಗಿ ಧ್ಯೇಯವನ್ನು ತಲುಪುವಿರಿ. ನಿಜವಾದ ಗುರಿಯ ಕಡೆಗೆ ಅನೇಕ ದಾರಿಗಳಿದ್ದು ಶಾಸ್ತ್ರಗಳಲ್ಲಿ ಅವನ್ನು ಕುರಿತು ಸಾಕಷ್ಟು ಚರ್ಚಿಸಲಾಗಿದೆ. ಮಾರ್ಗದರ್ಶನವು ಸರಿಯಾಗಿದ್ದರೆ, ಬಾಹ್ಯ ಶಕ್ತಿಗಳೂ ನಮ್ಮನ್ನು ಗುರಿಯ ಕಡೆಗೆ ಒಯ್ಯಲು ಸಹಾಯಕವಾಗುವವು. ಪೌರ್ವಾತ್ಯ ದಾರ್ಶನಿಕರು ಆಹಾರದ ಬಗ್ಗೆ ವಿಶೇಷ ಗಮನ ಕೊಟ್ಟಿದ್ದಾರೆ. ಸ್ವಚ್ಛತೆಯ ಕಡೆಗೆ ಲಕ್ಷ್ಯವಿಟ್ಟು ಯೋಗ್ಯ ರೀತಿಯಲ್ಲಿ ಅಡುಗೆ ಮಾಡಬೇಕು. ಅದು ಆರೋಗ್ಯದ ದೃಷ್ಟಿಯಾಯಿತು. ಇನ್ನು, ಅಡುಗೆಯು ಸಾತ್ತ್ವಿಕವಾಗಿದ್ದು ನಿರಂತರವಾಗಿ ಭಗವಂತನ ಸ್ಮರಣೆಯಲ್ಲಿ ಮಾಡಿದುದಾದರೆ ಅದರ ಪರಿಣಾಮವು ಅದ್ಭುತವಾಗುವುದು. ಭಗವಂತನನ್ನು ಧ್ಯಾನಿಸುತ್ತಲೇ ಅದನ್ನು ತೆಗೆದುಕೊಂಡುದಾದರೆ, ಎಲ್ಲ ಆಧ್ಯಾತ್ಮಿಕ ವ್ಯಾಧಿಗಳನ್ನೂ, ನಮ್ಮ ಪ್ರಗತಿಗೆ ಬಾಧಕವಾಗುವ ಎಲ್ಲ ವಿಷಯಗಳನ್ನೂ ದೂರ ಮಾಡುವುದು. ನಮ್ಮ ಧಾರ್ಮಿಕ ಗ್ರಂಥಗಳಲ್ಲಿ ಈ ಬಗ್ಗೆ ವಿಸ್ತಾರವಾಗಿ ಹೇಳಲಾದುದರಿಂದ ನಾನಿಲ್ಲಿ ಹೆಚ್ಚಿಗೆ ಹೇಳಬಯಸುವುದಿಲ್ಲ. ''ಆದರೆ ನಿಜವಾಗಿಯೂ ಅಗತ್ಯವಾದ ಆಹಾರದ ಆಧ್ಯಾತ್ಮಿಕ ಹಾಗೂ ಆರೋಗ್ಯದ ತಳಹದಿಯನ್ನು ದುರ್ಲಕ್ಷಿಸಿ ಅನ್ಯಮತದವರು ಅದನ್ನು ಮುಟ್ಟಿದರೆ ಅದು ಅಪವಿತ್ರ ವಾಗುವುದೆಂಬ ಭ್ರಾಮಕ ಕಲ್ಪನೆಯನ್ನಿಟ್ಟುಕೊಳ್ಳಬಾರದು. ಕದಾಚಿತ್ ಅವರು ಹೆಚ್ಚು ಸಾತ್ವಿಕರೂ ಪವಿತ್ರರೂ ಆಧ್ಯಾತ್ಮದಲ್ಲಿ ಉನ್ನತ ಸ್ಥಿತಿಯನ್ನು ಹೊಂದಿದವರೂ ಇರಬಹುದು. ಹಿಂದುಗಳೂ ಈ ದಿಶೆಯಲ್ಲಿ ಸಾಕಷ್ಟು ಅನುಭವಿಸಿದ್ದಾರೆ. ಆಹಾರದ ಇಂದಿನ ನೀತಿಯು ಸಾಮಾಜಿಕವೂ ಅಲ್ಲ ಅಧ್ಯಾತ್ಮಿಕವೂ ಆಗಿಲ್ಲ ವೆಂಬುದನ್ನು ಅವರು ತಿಳಿದುಕೊಳ್ಳಬೇಕು'' ಈ ಅಭಿಪ್ರಾಯವನ್ನು ಪುಷ್ಟಿ

ಗೊಳಿಸಲು, ಆಧ್ಯಾತ್ಮಿಕ ವಿಷಯಗಳಲ್ಲಿ ಪ್ರಮಾಣರಾಗಿರುವ ಸ್ವಾಮಿ ವಿವೇಕಾನಂದರ ನುಡಿಗಳನ್ನು ಉದಾಹರಿಸುವೆನು: "ನಮ್ಮ ಅನೇಕ ಮತಗಳಲ್ಲಿ ಕಾಣುವಂತೆ ನಿರರ್ಥಕವಾದ ಅಳತೆಗೆಟ್ಟ ಮತಾಂಧತೆಯು, ಧರ್ಮವನ್ನು ಅಡುಗೆಯ ಮನೆಯೊಳಗೆ ಅಟ್ಟಿಬಿಟ್ಟಿದೆ. ಅಂಥ ಧರ್ಮದಲ್ಲಡಗಿದ ಸತ್ಯವು ಎಂದಿಗೂ ಆಧ್ಯಾತ್ಮದ ಬೆಳಕಿಗೆ ಬರುವ ಆಶೆಯೇ ಇರುವುದಿಲ್ಲ. ಅದೊಂದು ವಿಲಕ್ಷಣವಾದ ಶುದ್ಧ ಭೌತಿಕತೆಯೇ ಆಗಿದೆ. ಅದು ಜ್ಞಾನವೂ ಅಲ್ಲ, ಕರ್ಮವೂ ಅಲ್ಲ; ಭಕ್ತಿಯೂ ಅಲ್ಲ. ಅದೊಂದು ವಿಶಿಷ್ಟ ರೀತಿಯ ಬುದ್ಧಿಭ್ರಂಶವಾಗಿದೆ. ಇದಕ್ಕೆ ಅಂಟಿಕೊಂಡವರು ಬ್ರಹ್ಮಲೋಕಕ್ಕೆ ಹೋಗುವುದರ ಬದಲಾಗಿ ಹುಚ್ಚರ ಆಸ್ಪತ್ರೆಗೆ ಹೋಗುವ ಸಂಭವವು ಹೆಚ್ಚಾಗಿರುತ್ತದೆ." ಆರಂಭದ ಸಾಧಕನಿಗೆ ಅಗತ್ಯವಾದ ಇನ್ನೊಂದು ಬಾಹ್ಯ ವಸ್ತುವೆಂದರೆ ಅವನು ಅನ್ಯರ ಹೃದಯವನ್ನು ಚುಚ್ಚಿ ಮನಸ್ಸನ್ನು ನೋಯಿಸ ದಂತೆ ವಿಚಾರದಲ್ಲಿಯೂ ಮಾತಿನಲ್ಲಿಯೂ ಕೃತಿಯಲ್ಲಿಯೂ ಸಂಯಮವನ್ನು ಅಭ್ಯಸಿಸಬೇಕು. ಹೀಗೆ ಮಾಡದಿದ್ದರೆ ಅವನು ತನ್ನ ಹೃದಯವನ್ನೇ ಕೆಡಿಸಿಕೊಳ್ಳುವನು. ಆತನಿಗೆ ತಿಳಿಯದಂತೆ ಇದರ ಪ್ರತಿಕ್ರಿಯೆಯಾಗುವುದು.

ಅಭ್ಯಾಸಿಯು ಸಾಧಿಸಬೇಕಾದ ಇನ್ನೊಂದು ಸಂಗತಿಯೆಂದರೆ ಅವನು ಯಾವಾಗಲೂ ಉತ್ಸಾಹಪೂರ್ಣನಾಗಿರಬೇಕಲ್ಲದೆ ಗುರಿಯನ್ನು ಮುಟ್ಟಲಾರೆನೆಂಬ ಭಾವನೆಗೆ ಎಂದೂ ಅವಕಾಶ ಕೊಡಬಾರದು. ದೃಢ ಸಂಕಲ್ಪವು ಈ ದಿಶೆಯಲ್ಲಿ ಅಗತ್ಯವಾದುದು. ಈ ಮಾರ್ಗದಲ್ಲಿ ದೊಡ್ಡ ಪ್ರತಿಬಂಧಕವಾದ ವಿಷಣ್ಣತೆಗೆ ಎಡೆಗೊಡಬಾರದು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಖಿನ್ನತೆಗೆ ಕಾರಣವೆಂದರೆ, ಸಾಮಾನ್ಯವಾಗಿ ಜನರು ಅದನ್ನು ಅತ್ಯಂತ ಕಠಿಣವೆಂದೂ ತೊಡಕಿನದೆಂದೂ ತಿಳಿಯುವರು. ನಾವು ದೊರಕಿಸಬೇಕಾದ ವಸ್ತುವು ನಿಜವಾಗಿಯೂ ಅತಿ ಸರಳವಾಗಿದ್ದು ಸುಲಭಪ್ರಾಪ್ಯವಾಗಿದೆ. ನಿಜ ಹೇಳಬೇಕಾದರೆ ಈ ಸರಳವಸ್ತುವನ್ನು ದೊರಕಿಸಲು ಅನುಸರಿಸಲಾಗಿರುವ ಕಠಿಣ ಮಾರ್ಗಗಳು ಅದನ್ನು ವಕ್ರವಾಗಿಯೂ ತೊಡಕಿನದನ್ನಾಗಿಯೂ ಮಾಡಿವೆ. ಇದು ಒಂದು ಉದಾಹರಣೆಯಿಂದ ಸ್ಪಷ್ಟವಾಗಬಹುದು. ಸೂಜಿಯೊಂದು ನೆಲದ ಮೇಲೆ ಬಿದ್ದಿತೆಂದು ತಿಳಿಯಿರಿ. ಅದನ್ನು ಕೈಯಿಂದ ಸುಲಭವಾಗಿ ಎತ್ತಬಹುದು. ಅದೇ ಒಂದು ದೊಡ್ಡ ಭಾರವೆತ್ತುವ ಯಂತ್ರವನ್ನಾಗಲೀ ಬೇರೆ ಯಾವುದಾದರೊಂದು ಅದ್ಭುತ ಯಂತ್ರವನ್ನಾಗಲೀ ಉಪಯೋಗಿಸಿದರೆ ಆ ಸೂಜಿಯನ್ನೆತ್ತಲು ಕಠಿಣವಾಗುವುದು ಮತ್ತು ನಿಮ್ಮ ಪ್ರಯತ್ನವೆಲ್ಲ ನಿಷ್ಫಲ

ವಾಗಬಹುದು. ಅದರಂತೆಯೇ ಅತ್ಯಂತ ಸರಳವಾದ ಸತ್ಯವಸ್ತುವನ್ನು ಪಡೆಯಲು ಕಠಿಣ ಮತ್ತು ತೊಡಕಿನ ಮಾರ್ಗಗಳನ್ನು ಚಿಂತಿಸಿದರೆ ಹಾಗೆಯೇ ಆಗುವುದು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಜನರ ಪ್ರಯತ್ನಗಳೆಲ್ಲ ಸೂಜಿಯನ್ನೆತ್ತಲು ಭಾರವೆತ್ತುವ ಯಂತ್ರದ ಸಹಾಯವನ್ನು ಪಡೆಯ ಬಯಸಿದಂತೆಯೇ. ಇದು ಕೇವಲ ತಪ್ಪು ಕಲ್ಪನೆಯಾಗಿದ್ದು ಇದನ್ನು ತೆಗೆದು ಹಾಕಿದರೆ ಖಿನ್ನತೆಯು ಸಂಪೂರ್ಣವಾಗಿ ದೂರವಾಗುವುದು.

ಪೂರ್ಣತೆಯನ್ನು ಪಡೆದ ಹಾಗೂ ಯೌಗಿಕ ಪ್ರಾಣಾಹುತಿಯ ಸಾಮರ್ಥ್ಯವನ್ನುಳ್ಳ ಗುರುವಿನ ಮಾರ್ಗದರ್ಶನದಲ್ಲಿ ಹೃದಯದ ಮೇಲೆ ಧ್ಯಾನ ಮಾಡುವುದೇ ಈ ಪದ್ಧತಿಯ ಆರಂಭದ ಹೆಜ್ಜೆ. ಇಂಥ ಸದ್ಗುರು ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಬಾಧಕವಾಗುವ ಎಲ್ಲ ವಸ್ತುಗಳನ್ನು ತೊಡೆದು ಹಾಕುವನು. ಆತನಿಂದ ಆಧ್ಯಾತ್ಮಿಕ ತರಂಗಗಳು ನಮ್ಮ ಹೃದಯದಲ್ಲಿ ಹರಿದುಬಂದು ದಿನೇ ದಿನೇ ನಮ್ಮಲ್ಲಿ ಶಾಂತಿಯನ್ನು ಬೆಳೆಸುವವು. ನಾವು ಧ್ಯಾನದಲ್ಲಿ ತನ್ಮಯರಾದಾಗ ಅಂತರಾತ್ಮನೊಂದಿಗೆ ನಮ್ಮನ್ನು ಜೋಡಿಸಿ ಕೊಳ್ಳುವೆವು. ಭಕ್ತಿಯು ಗ್ರಹಣ ಸಾಮರ್ಥ್ಯವನ್ನು ಹೆಚ್ಚಿಸಿ ದಾರಿಯನ್ನು ಸುಗಮಗೊಳಿಸುವುದು. ನಮ್ಮ ಹೃದಯವನ್ನು ಗುರುವಿನ ಶಕ್ತಿಯ ಗುರಿ ಯನ್ನಾಗಿ ಮಾಡಿದರೆ ನಮ್ಮ ಆಂತರ್ಯವು ವಿಸ್ತಾರವಾಗುತ್ತ ಹೋಗಿ ಈ ತತ್ಪರಿಣಾಮವಾಗಿ ಕಟ್ಟಕಡೆಗೆ ಭಗವದ್ರಾಜ್ಯದ ತುಂಬ ನಾವು ಪಸರಿಸಿದಂತೆ ಅನುಭವಿಸುವೆವು. ಕೇಂದ್ರಮಂಡಲದ ಹೃದಯದಲ್ಲಿ ನೆಲೆಸಿದವರ ಬಗೆಗೆ ನಾನೀ ಮಾತುಗಳನ್ನು ಹೇಳುತ್ತಿದ್ದೇನೆ. ಇಂಥ ಮನುಷ್ಯನು ತನ್ನ ಇಚ್ಛಾ ಶಕ್ತಿಯಿಂದ ಮಾಡಬಲ್ಲ ಕಾರ್ಯಗಳನ್ನು ಇತರರು ಶಸ್ತ್ರಗಳ ಬಲದಿಂದಲೂ ಮಾಡಲಾರರು. ಭೌತಿಕವಾದಿಗಳ ದೃಷ್ಟಿಯಲ್ಲಿ ಈ ಜಗತ್ತು ಚಿಕ್ಕದಾಗಿರು ವುದರಿಂದ ಅವರು ಈ ಮಾತನ್ನೊಪ್ಪಲಿಕ್ಕಿಲ್ಲ. ಜನರು ಈ ತರದ ಅಂತರ್ ದೃಷ್ಟಿಯನ್ನು ಬೆಳೆಸಿಕೊಂಡಿಲ್ಲವಾದುದರಿಂದ ಅವರಿಗೆ ಈ ವಿಷಯವು ಅರ್ಥಹೀನವೆನಿಸಬಹುದು. ಅಂತೂ ಹಿಂದೆ ವರ್ಣಿಸಲಾದ ವಿಭೂತಿಯ ನಿರ್ವೈರನೂ ನಿಷ್ಪಕ್ಷಪಾತಿಯೂ ಆಗಿರುವನು. ಆತನು ತನ್ನ ಎಲ್ಲ ಕಾರ್ಯ ಗಳಲ್ಲಿಯೂ ಸಮತ್ವವನ್ನು ಕಾಯ್ದುಕೊಂಡು ಹೋಗುವನು. ಒಂದು ವೇಳೆ ಕ್ಷಣ ಕಾಲವೇ ಆಗಲಿ ಅವನ ಸಮತ್ವದಲ್ಲಿ ಸ್ವಲ್ಪಾದರೂ ವ್ಯತ್ಯಾಸವಾದರೆ ತತ್ಪರಿಣಾಮವಾಗಿ ವಾಯುಮಂಡಲವು ಕಲುಷಿತವಾಗಿ ನಿರಾಶೆಯಾವರಿಸು ವುದು. ಅದು ಸ್ವಲ್ಪ ಕಾಲ ಮುಂದುವರಿದರೆ ಜನರ ಛಾಯಾಗ್ರಸ್ತ ಹೃದಯವು

ನಿಷ್ಕ್ರಿಯವಾಗುವುದು. ಈ ಸ್ಥಿತಿಯಲ್ಲಿ ಚಟುವಟಿಕೆಗಳೆಲ್ಲ ಮಾಯವಾಗಿ ಆತನ ಕಾರ್ಯಗಳು ಸ್ವಯಂಪ್ರೇರಿತವಾಗಿರುವವು. ಒಂದುವೇಳೆ ಚಟುವಟಿಕೆಗಳು ಉಳಿದುಕೊಂಡರೆ ಜೀವನ ಸಮಸ್ಯೆಯು ಇನ್ನೂ ಪರಿಹಾರವಾಗಿಲ್ಲವೆಂದೇ ಹೇಳಬಹುದು.

ಮುಕ್ತಿ ಮಾರ್ಗದ ನಮ್ಮ ನಡೆಯಲ್ಲಿ ನಾವು ವಿವಿಧ ರೂಪಗಳ, ವಿವಿಧ ವರ್ಣಗಳ ಚಕ್ರಗಳನ್ನು ದಾಟುವೆವು. ಅವೆಲ್ಲ ಹೃದಯಮಂಡಲದಲ್ಲಿ ಇರುವವು. ಅದರ ಆಚೆಗಿನ ಸ್ಥಿತಿಯು ನೀವು ಈಗಾಗಲೇ ಅನುಭವಿಸಿದಕ್ಕಿಂತ ಭಿನ್ನವಾಗಿರುವುದು. ಚಕ್ರಗಳೆಲ್ಲ ಮಾಯವಾಗಿರುವವು. ನೀವು ಮುಂದುವರಿದಂತೆಲ್ಲ ರಚನೆಯು ಬಿದ್ದುಹೋಗುವುದು. ಸಮರ್ಥ ಗುರುವಿನ ಮಾರ್ಗದರ್ಶನದಲ್ಲಿ ಧ್ಯಾನದ ಮೂಲಕ ಇದು ಅತ್ಯಂತ ಸುಲಭವಾಗುವುದು. ಧ್ಯೇಯಸಾಧನೆಯಲ್ಲಿ ದೃಢ ನಿರ್ಧಾರವೂ ನಿರಂತರ ತವಕವೂ ಲವಲವಿಕೆಯೂ ಸುಲಭವಾಗಿ ಯಶಸ್ಸನ್ನು ತಂದುಕೊಡುವವು.

ಮೊದಲು ರಾಜಯೋಗದಲ್ಲಿ ಭಗವಾನ್ ಶ್ರೀಕೃಷ್ಣನು ಯೋಗಿಗಳಿಗೆ ತಿಳಿದ ರೀತಿಯಲ್ಲಿ, ಭಕ್ತಿಯನ್ನು ಸಮಾವೇಶಗೊಳಿಸಿದ್ದನು. ಏಕೆಂದರೆ ಮುಂದೆ ಜೀವನವೇ ಅನಿಶ್ಚಿತವಾಗುವಂಥ ಕಾಲ ಬರುವುದೆಂಬುದನ್ನು ಆತನು ಅರಿತಿದ್ದನು. ಸಿದ್ಧಾಂತ ಮತ್ತು ಪ್ರಯೋಗಗಳಲ್ಲಿ ಮಹದಂತರವಿದೆ. ನಾನು ಅದೇ ವಿಷಯವನ್ನೇ ನಿಮಗೆ ಹಗಲಿರುಳೂ ಹೇಳುತ್ತ ಹೋದರೆ, ಕ್ಷಣಕಾಲ ಮಾತ್ರ ನಿಮ್ಮ ಮಾನಸಿಕ ಅಭಿರುಚಿಯು ಬೆಳೆಯಬಹುದೇ ಹೊರತು ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಅಹಂಕಾರದ ಕಲ್ಪನೆಗಳನ್ನು ಬಿಸುಟು ಅಭ್ಯಾಸಕ್ಕೆ ಸಿದ್ಧರಾಗಿ ಶ್ರದ್ಧೆ-ವಿಶ್ವಾಸಗಳಿಂದ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬನ್ನಿರಿ. ಮತ್ತೆ ಮತ್ತೆ ಶಾಸ್ತ್ರಾಭ್ಯಾಸ ಮಾಡುವುದರಿಂದ ಆಧ್ಯಾತ್ಮದ ಶಿಖರಕ್ಕೇರಬಹುದೆಂಬ ಕಲ್ಪನಾ ರಾಜ್ಯದಲ್ಲಿ ನೀವು ಭ್ರಮಿಸುವುದು ನನಗೆ ಇಷ್ಟವಿಲ್ಲ. ಹೀಗೆ ಮಾಡುವದರಿಂದ ನೀವು ವಿದ್ವಾಂಸರಾಗಬಹುದು. ತತ್ತ್ವಜ್ಞಾನಿಗಳಾಗಬಹುದು; ಆದರೆ ಪ್ರೇಮ-ಭಕ್ತಿಗಳಿಂದ ಕೂಡಿದ ಪ್ರತ್ಯಕ್ಷ ಸಾಧನೆಯಿಲ್ಲದೆ ನೀವು ಯೋಗಿಯಾಗಲಾರಿರಿ. ನೀವೆಷ್ಟೋ ಸಲ ಗೋದಿಯನ್ನುಂಡಿದ್ದರೂ ಅದರ ರುಚಿಯನ್ನುಹೇಗೆ ವರ್ಣಿಸಲಾರಿರೋ ಹಾಗೆಯೇ ಅನುಭವಗಮ್ಯವಾದ ಸಂಗತಿಯನ್ನು ಶಬ್ದಗಳಲ್ಲಿಡುವುದು ಬಹಳ ಕಠಿಣ।

ಮೇಲೆ ಹೇಳಲಾದ ಸಂಗತಿಗಳ ವಾಸ್ತವಿಕತೆಯನ್ನು ಜನತೆಯು ಮನಗಾಣುವ ದಿನವು ಬೇಗನೆ ಬರಲೆಂದು ಹಾರೈಸುವೆನು.

* * *

# ಶ್ರೀ ರಾಮಚಂದ್ರ ಮಿಷನ್

## ಷಹಜಹಾನ್‌ಪೂರ (ಉ.ಪ್ರ.)

---

## ಪ್ರಾರಂಭಿಕ ಅಭ್ಯಾಸಿಗಳಿಗೆ ಧ್ಯಾನದ ವಿಧಾನ

**ಮುಂಜಾನೆ :** ದೈವೀ ಪ್ರಕಾಶ ನಿಮ್ಮ ಹೃದಯದಲ್ಲಿ ಇದೆಯೆಂದು ಚಿಂತಿಸುತ್ತಾ ಒಂದುತಾಸು ಕಾಲ ಧ್ಯಾನದಲ್ಲಿ ಕೂಡಬೇಕು. ಮನಸ್ಸನ್ನು ಬಲಾತ್ಕರಿಸದೇ ಇದನ್ನು ಸರಳ ಮತ್ತು ಸ್ವಾಭಾವಿಕ ರೀತಿಯಲ್ಲಿ ಮಾಡಿ, ಅಲ್ಲಿ ಬೆಳಕು ಕಾಣದಿದ್ದರೆ ಅದಕ್ಕಾಗಿ ಚಿಂತಿಸಬೇಡಿ. ಒಂದೇ ಭಂಗಿಯಲ್ಲಿ ಕುಳಿತು ಧ್ಯಾನ ಮಾಡುತ್ತಾ ದೈವೀ ಪ್ರಕಾಶ ಊಹಿಸಿ ಹೃದಯದ ಕಡೆ ಲಕ್ಷ್ಯಕೊಡಲು ಪ್ರಾರಂಭಿಸಿ, ಏಕಾಗ್ರತೆಯ ಕಡೆ ಮನಸ್ಸನ್ನು ಬಲಾತ್ಕರಿಸಬೇಡಿ. ಧ್ಯಾನದ ಸಮಯದಲ್ಲಿ ಬರುವ ವಿಚಾರಗಳ (ಭಾವನೆಗಳ) ಕಡೆ ಮನಸ್ಸು ಕೊಡದಿರಿ. ಈ ವಿಚಾರಗಳು ಬರಬಾರದಿತ್ತೆಂದು ಅವುಗಳೊಡನೆ ಹೋರಾಡಬೇಡಿ. ಕರೆಯದೆ ಬಂದ ಅತಿಥಿಗಳಂತೆ ಇವುಗಳ ಕಡೆ ಲಕ್ಷ್ಯವಿಡದಿರಿ.

**ಸಾಯಂಕಾಲ :** ಅರ್ಧಗಂಟೆ ಕಾಲ ಅದೇ ಭಂಗಿಯಲ್ಲಿ ಕುಳಿತು ನಿಮ್ಮಲ್ಲಿರುವ ತೊಡರುಗಳು, ಸ್ಥೂಲತೆ ಮತ್ತು ಅಂಧಕಾರಗಳಿಂದ ಒಳಗೂಡಿದ ಅಶುದ್ಧ ವಿಚಾರ ಜಾಲಗಳೆಲ್ಲ ನಿಮ್ಮ ಬೆನ್ನ ಹಿಂದೆ ಹೊಗೆ ಅಥವಾ ಆವಿ ರೂಪದಲ್ಲಿ ಹೋಗುತ್ತಿವೆಯೆಂದು ಪ್ರೇರೇಪಿಸಬೇಕು (ಸೂಚಿಸಬೇಕು). ಹೊರಹಾಕಬೇಕಾದ ಇವುಗಳ ಮೇಲೆ ಧ್ಯಾನಿಸಬಾರದು. ಸುಮ್ಮನೆ ಹೊರದೂಡುತ್ತಿರಬೇಕು ಮಾತ್ರ.

> ಓ ನಾಥ! ನೀನೇ ಮಾನವ ಜೀವನದ ಗುರಿ. ನಮ್ಮ
> ಇಚ್ಛೆಗಳು ನಮ್ಮ ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ.
> ನೀನೇ ನಮ್ಮ ಏಕಮಾತ್ರ ಸ್ವಾಮಿ ಮತ್ತು ಇಷ್ಟದೈವ
> ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿಯು ಅಸಂಭವ.

**ರಾತ್ರಿ :** ಮಲಗುವುದಕ್ಕೆ ಮುಂಚೆ ನಮ್ರತೆಯಿಂದ ಕುಳಿತುಕೊಂಡು ಸ್ವಲ್ಪ ಸಮಯ ಪ್ರಾರ್ಥನೆ ಮಾಡಿರಿ. ಭಕ್ತಿಭಾವದಿಂದ ಮೇಲಿನ ಶಬ್ದಗಳನ್ನು ಒಂದೆರಡು ಸಲ ಮನಸ್ಸಿನಲ್ಲಿ ಉಚ್ಚರಿಸಿದ ನಂತರ ಅದರ ನಿಜಾರ್ಥದ ಮೇಲೆ ಧ್ಯಾನ ಮಾಡುತ್ತ ಅದರಲ್ಲಿಯೇ ಮುಳುಗಿಬಿಡಲು ಪ್ರಯತ್ನಿಸಿರಿ.

''ಸಹಜಮಾರ್ಗ''ದಲ್ಲಿ ಇದೇ ಸರಿಯಾದ ಪ್ರಾರ್ಥನಾ ವಿಧಾನ.

# ಸಹಜ ಮಾರ್ಗದ ಹತ್ತು ನಿಯಮಗಳು

೧. ಬೆಳಗು ಮುಂಜಾನೆ ಏಳಿರಿ. ಸಂಧ್ಯೋಪಾಸನೆಯನ್ನು ನಿಯಮಿತ ಸಮಯಕ್ಕೆ ಸೂರ್ಯೋದಯಕ್ಕೆ ಮುಂಚಿತ ವಾದರೆ ಬಹಳ ಒಳಿತು– ಮುಗಿಸಿರಿ. ಪೂಜೆಗಾಗಿ ಪ್ರತ್ಯೇಕ ಸ್ಥಳವನ್ನೂ ಆಸನವನ್ನೂ ಇರಿಸಿಕೊಳ್ಳಿರಿ. ಶಾರೀರಿಕ ಹಾಗೂ ಮಾನಸಿಕ ಪವಿತ್ರತೆಯ ಕಡೆಗೆ ವಿಶೇಷ ಲಕ್ಷ್ಯವಿರಲಿ.

೨. ನಿಮ್ಮ ಪೂಜೆಯನ್ನು ಆತ್ಮೋನ್ನತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿರಿ. ಹೃದಯವು ಪ್ರೇಮ–ಭಕ್ತಿಗಳಿಂದ ತುಂಬಿರಲಿ.

೩. ದೇವರಲ್ಲಿ 'ಪೂರ್ಣ ಸಮರಸ'ವಾಗುವುದೇ ನಿಮ್ಮ ಧ್ಯೇಯವನ್ನಾಗಿಟ್ಟುಕೊಳ್ಳಿ, ಧ್ಯೇಯವು ಪ್ರಾಪ್ತವಾಗುವ ವರೆಗೆ ನಿಲ್ಲಬೇಡಿರಿ.

೪. ನಿಮ್ಮ ಜೀವನವು ನಿಸರ್ಗದ ಹಾಗೆ ಸರಳ ಮತ್ತು ಸಾಧಾರಣವಾಗಿರಲಿ.

೫. ಸತ್ಯವಂತರಾಗಿರಿ. ಕಷ್ಟಗಳು ನಿಮ್ಮ ಹಿತಕ್ಕಾಗಿಯೇ ಬಂದ ದೈವೀಕೃಪೆಯೆಂದು ತಿಳಿದು ಕೃತಜ್ಞರಾಗಿರಿ.

೬. ಎಲ್ಲರನ್ನೂ ನಿಮ್ಮ ಸಹೋದರರೆಂದು ತಿಳಿದು ಹಾಗೆ ವರ್ತಿಸಿರಿ.

೭. ಯಾರಾದರೂ ಕೇಡುಮಾಡಿದರೆ ಸೇಡು ಬಗೆಯಬೇಡಿರಿ. ಬದಲು ದೈವೀಸಂಪತ್ತೆಂದು ತಿಳಿದು ಧನ್ಯವಾದಗಳನ್ನರ್ಪಿಸಿರಿ.

೮. ಊಟ ಮಾಡುವಾಗ ದೇವರನ್ನು ನೆನೆಯುತ್ತ ದೊರೆತದ್ದನ್ನು ಪ್ರಸನ್ನತೆಯಿಂದ ಸ್ವೀಕರಿಸಿರಿ. ಶುದ್ಧ ಹಾಗೂ ಪವಿತ್ರ ಗಳಿಕೆಯ ಕಡೆಗೆ ಲಕ್ಷ್ಯವಿರಲಿ.

೯. ಜನರಲ್ಲಿ ಪ್ರೇಮ ಹಾಗೂ ಪವಿತ್ರ ಭಾವನೆಗಳನ್ನು ಮೂಡಿಸುವ ಹಾಗೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿರಿ.

೧೦. ಮಲಗುವಾಗ ದೇವರು ಎದುರಿನಲ್ಲಿರುವನೆಂದು ತಿಳಿದು, ಮಾಡಿದ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುತ್ತ ದೈನ್ಯದಿಂದ ಕ್ಷಮೆಬೇಡಿರಿ. ಮುಂದೆ ಎಂದಿಗೂ ಅಂಥ ಅಪರಾಧ ಮಾಡದಂತೆ ನಿರ್ಧರಿಸಿ ಪ್ರಾರ್ಥನೆ ಮಾಡಿರಿ.

# Publications of Shri Ram Chandra Mission

**English :**

1. Efficacy of Raja Yoga in the Light of Sahaj Marg by Shri Ram Chandraji.
2. Reality at Dawn by Shri Ram Chandraji.
3. Towards Infinity. Shri Ram Chandraji.

3 a. Philosophy of Sahaj Marg by Shri Ram Chandra.

4. Commentary on Ten Commandments of Sahaj Marg (Translated by Shri Raghavendra Rao)
5. Voice Real first selection by Shri Ram Chandraji.
6. Voice Real-Second selection by Shri Ram Chandraji.
7. Thus Speaks by Shri Ram Chandraji.
8. Sahaj Marg : Shri Ram Chandra's New Darsana by Dr. K. C. Varadachari.
9. Lectures on Sahaj Marg by Dr. K. C. Varadachari.
10. Talks on Ten Commandments of Sahaj Marg by Dr. K. C. Varadachari.
11. Talks on Efficacy of Raja Yoga by Dr. K. C. Varadachari.
12. Talks on Sahaj Marg Philosophy by Dr. K. C. Vardachari.
13. Sahaj Marg & Personality Problems : Vol. I. Yoga Psychology and Modern Physiological Theories.
14. Vol. II. Superstition and Spirituality.
15. A Peep into Sahaj Marg by Shri Ishwar Sahai.
16. Autobiography of Ram Chandra by Shri Ram Chandraji.
17. Grand Master's 'Truth–Eternal' (Translated from Urdu).
18. A Panoramic View of Sahaj Marg by Shri Raghavendra Rao.
19. India in the West by Shri P. Rajagopalachari.

20. Sahaj Marg in outlines by Shri Ishwar Sahai.
21. Sahaj Marg – A Natural way of God Realisation by Shri Laxmi Sankar.
22. Today is Ours by Shri G. Vijaya Rangachari.
23. A Digest of Sahaj Marg by Shri G. Vijaya Rangachari.
24. Babuji's 71st Birthday Souvenir.
25. Lalaji's Birth Centenary Souvenir.
26. Saptati by Shri G. Vijaya Rangachari.
27. Babuji's 75th Birthday Souvenir.
28. My Master by Shri P. Rajagopalachari.
29. Sahaj Marg in Europe by Shri P. Rajagopalachari.
30. Blossoms in the East by Shri P. Rajagopalachari
31. Neurological basis of Raja Yoga in the light of Sahaj Marg by Dr. V. S. R. Murthy.
32. A light in the Dark Continent by Shri K. Khoosal Bhai.

**ಕನ್ನಡ :**

೧. ಸತ್ಯೋದಯ (ಅನುವಾದ ೨) ಶ್ರೀ ಶ್ರೀ. ಆ. ಸರ್ನಾಡ.
೨. ಅನಂತದೆಡೆಗೆ (ಅನುವಾದ ೩).
೩. ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ (ಅನುವಾದ ೪) ಶ್ರೀ ಶ್ರೀ. ಆ. ಸರ್ನಾಡ.
೪. ಋತುವಾಣಿ (ಅನುವಾದ ೫):
೫. ಶ್ರೀರಾಮಚಂದ್ರಜಿಯವರ ನುಡಿಮುತ್ತುಗಳು . (ಅನುವಾದ) ಶ್ರೀ ಶ್ರೀ. ಆ. ಸರ್ನಾಡ.
೬. ಸಹಜ ಮಾರ್ಗದ ರೂಪರೇಖೆಗಳು.
೭. ಸಹಜ ಮಾರ್ಗದರ್ಶನ (ಅನುವಾದ ೬) ಶ್ರೀ ಶ್ರೀಕಂಠಯ್ಯ.
೮. ಸಹಜಮಾರ್ಗ ಸಮೀಕ್ಷೆ, ಶ್ರೀ ರಾಘವೇಂದ್ರರಾವ.
೯. ರಾಜಯೋಗದ ಪ್ರಭಾವ.

* * *